ಸಂಪುಟ: 33
ಸಂಚಿಕೆ: 39
ಬೆಲೆ ರೂ. 8.00
ಮಂಗಳೂರು

ಸಜ್ಜನರ ಸಂಗಾತಿ www.sanmarga.com

# ಸನ್ಮಾರ್ಗ ವಾರಪತ್ರಿಕೆ

2010 ಡಿಸೆಂಬರ್ 12 – 18
1432 ಮುಹರ್ರಮ್ 05 – 11







# ಶಾಭಾಸ್ ಅಸಾಂಜ್, ಎಲ್ಲಿದ್ದೀರಿ? ತಪ್ಪಿಸಿಕೊಳ್ಳಿ

■ ಸಮೀರ್ ಎ. ■

ಅಮೇರಿಕ ಹದ್ದಿನ ಕಣ್ಣಿಂದ ಹುಡುಕಾಡುತ್ತಿರುವ ವಿಕಿಲೀಕ್ಸ್‌ನ ಸಂಪಾದಕ ಜೂಲಿಯನ್ ಅಸಾಂಜ್ ಕಾಣೆಯಾಗಿದ್ದಾರೆ. ಜಗತ್ತಿನ ದೈತ್ಯ ರಾಷ್ಟ್ರವನ್ನು ಗರಬಡಿಯುವಂತೆ ಮಾಡುವ ಅಸಾಮಾನ್ಯ ಧೈರ್ಯ ತೋರಿಸಿರುವ ವಿಕಿಲೀಕ್ಸ್‌ಗೆ ಅಸಾಂಜ್ ಎಡಿಟರ್ ಇನ್ ಚೀಫ್ ಆಗಿದ್ದಾರೆ. ಅಮೇರಿಕದ ಪಡೆಗಳು ಇರಾಕ್ ಮತ್ತು ಅಫಘಾನಿಸ್ತಾನದಲ್ಲಿ ನಡೆಸಿದ ನರಮೇಧ ಮತ್ತು ದೌರ್ಜನ್ಯಗಳು ಬಹಿರಂಗಪಡಿಸಿ ಅವರು ಈ ಹಿಂದೆಯೇ ನಿದ್ದೆಗೆಡಿಸಿದ್ದಾರೆ. ಈಗ ಅಮೇರಿಕ ತನ್ನ ಹಿತಾಸಕ್ತಿಗಾಗಿ ವಿಶ್ವಸಂಸ್ಥೆ ಮತ್ತು ಅರಬ್ ರಾಷ್ಟ್ರಗಳು ಹಾಗೂ ಮೂರನೇ ಜಗತ್ತನ್ನು ಬಳಸಿಕೊಂಡ ರಹಸ್ಯ ದಾಖಲೆಗಳನ್ನು ಬಹಿರಂಗಪಡಿಸಿ ಚೇತರಿಸಲಾಗದ ಪೆಟ್ಟು ಕೊಟ್ಟಿದ್ದಾರೆ. ಇಂದು ಜಾಗತಿಕ ಸಮುದಾಯ ವಿಕಿಲೀಕ್ಸ್‌ನ ದೆಸೆಯಿಂದಾಗಿ ಛೀ ಥೂ ಎಂದು ಉಗಿಸಿಕೊಳ್ಳುವ ಪರಿಸ್ಥಿತಿಗೆ ಬಂದು ಮುಟ್ಟಿದ್ದು ಈ ಜೂಲಿಯನ್‌ರಿಂದಾಗಿ. ಆದ್ದರಿಂದ ಅವರಿಂದು ಅಮೇರಿಕಕ್ಕೆ ಮೋಸ್ಟ್ ವಾಂಟೆಡ್ (ಬೇಕಾಗಿದ್ದಾರೆ) ಎನ್ನಿಸಿಕೊಂಡಿದ್ದಾರೆ.

ಹೊಸದಾಗಿ ಪ್ರಕಟಿಸಿರುವ ದಾಖಲೆಗಳಲ್ಲಿ ಇರಾನನ್ನು ಆಕ್ರಮಿಸಲು ಅಮೇರಿಕವನ್ನು ಆಗ್ರಹಿಸುವುದು ಒಂದು ಭಾಗವಾದರೆ, ವಿಶ್ವಸಂಸ್ಥೆಯ ನೇತೃತ್ವದ ರಹಸ್ಯಗಳನ್ನು ಸೋರಿಕೆ ಮಾಡಬಾರದೆಂಬ 1964ರ ನಿಯಮಕ್ಕೆ ವಿರುದ್ಧವಾಗಿ ಈಗಿನ ಸೆಕ್ರೆಟರಿ ಬಾನ್‌ಕಿ ಮೂನ್‌ರ ಫೋನ್‌ಗಳನ್ನು ಕದ್ದಾಲಿಸಿರುವುದು ಇನ್ನೊಂದು ಭಾಗವಾಗಿದೆ. ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಶಾಶ್ವತ ಸದಸ್ಯತ್ವಕ್ಕೆ ಆಗ್ರಹಿಸುವ ಭಾರತದ ವಿಶ್ವಸಂಸ್ಥೆಯ ಪ್ರತಿನಿಧಿಗಳ ಒಂದೊಂದು ಹೆಜ್ಜೆಗಳನ್ನು ತಕ್ಷಣ ವರದಿ ಮಾಡಬೇಕೆಂದು ವಿದೇಶಾಂಗ ಕಾರ್ಯದರ್ಶಿ ಹಿಲರಿ ಕ್ಲಿಂಟನ್ ತನ್ನ ರಾಜತಾಂತ್ರಿಕರಿಗೆ ಆದೇಶಿಸಿರುವುದು ಇನ್ನೊಂದು. ಹೀಗೆ ಅಮೇರಿಕದ ವಂಚನೆಗಳ ಸಾಗರವನ್ನೇ ತನ್ನ ಲಕ್ಷಾಂತರ ಪುಟಗಳಲ್ಲಿ ವಿಕಿಲೀಕ್ಸ್ ಬಹಿರಂಗಪಡಿಸುತ್ತಿದ್ದರೆ ಅಮೇರಿಕದ ಒಂದೊಂದೇ ಕುತಂತ್ರಗಳು ಬೆತ್ತಲಾಗುತ್ತಾ ಹೋಗುತ್ತಿದೆ. ಯಾವ ಭಾರತ ಅಮೇರಿಕದ ಬಗ್ಗೆ ವಿಶ್ವಾಸವಿಟ್ಟಿದೆಯೋ ಅದಕ್ಕೆ ಪ್ರತಿಯಾಗಿ ದೋಖಾ. ಅರೇಬಿಯನ್ ನಾಯಕರುಗಳ ಬಗ್ಗೆ ಒಂದು ಹಂತದ ವರೆಗೆ ಇದ್ದ ಭರವಸೆಗೆ ಪ್ರತಿಯಾಗಿ ಅವರಿಂದ ಮುಸ್ಲಿಮ್ ಸಮುದಾಯಕ್ಕೆ (3ನೇ ಪುಟಕ್ಕೆ)

# ಸೈಯದ್ ಹಾಮಿದ್ ಹುಸೈನ್ ನಿಧನ



**ಬೆಂಗಳೂರು:** ಜಮಾಅತೆ ಇಸ್ಲಾಮಿ ಹಿಂದ್ ಕರ್ನಾಟಕ-ಗೋವಾ ಕಾರ್ಯದರ್ಶಿಗಳಲ್ಲೊಬ್ಬರಾಗಿದ್ದ ಸೈಯದ್ ಹಾಮಿದ್ ಹುಸೈನ್ (57) ಡಿಸೆಂಬರ್ 3ರಂದು ಬೆಳಿಗ್ಗೆ 4-45ಕ್ಕೆ ಇಲ್ಲಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ನಿಧನರಾದರು. ನವೆಂಬರ್ 24ರಂದು ಮಂಗಳೂರಿನಲ್ಲಿ ಜರಗಿದ ಎಚ್.ಆರ್.ಎಸ್. ಪದಾಧಿಕಾರಿಗಳ ಸಭೆಯಲ್ಲಿ ಭಾಗವಹಿಸಿ ಮಧ್ಯಾಹ್ನ ಬೆಂಗಳೂರಿಗೆ ಪ್ರಯಾಣಿಸುವ ವೇಳೆ ಎದೆ ನೋವು ಕಾಣಿಸಿಕೊಂಡಿತ್ತು. ಬೆಂಗಳೂರಿಗೆ ತೆರಳಿ ಆಸ್ಪತ್ರೆಗೆ ದಾಖಲಾದ ಅವರು ಹೃದಯ ಸಂಬಂಧಿ ಕಾಯಿಲೆಯಿಂದಾಗಿ ಚೇತರಿಸಲಾಗದೆ ನಿಧನ ಹೊಂದಿದರು.

1982ರಲ್ಲಿ ಎಸ್.ಐ.ಓ. ಅಸ್ತಿತ್ವಕ್ಕೆ ಬಂದಾಗ ಕರ್ನಾಟಕ-ಗೋವಾ ಘಟಕದ ಪ್ರಪ್ರಥಮ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ಅವರು ಕೆಲವು ವರ್ಷಗಳ ಕಾಲ ಜಮಾಅತೆ ಇಸ್ಲಾಮಿ ಹಿಂದ್ ಕರ್ನಾಟಕ-ಗೋವಾ ಘಟಕದಲ್ಲಿ ಪ್ರಧಾನ ಕಾರ್ಯದರ್ಶಿಯಾಗಿಯೂ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಸದಾ ಲವಲವಿಕೆಯಿಂದ ದಣಿವರಿಯದೆ ಆಂದೋಲನದ ಚಟುವಟಿಕೆಗಳಲ್ಲಿ ನಿಬಿಡರಾಗಿರುತ್ತಿದ್ದರು. ದೇವಭಕ್ತರೂ, ಹಸನ್ಮುಖಿಯೂ ಜನಾನುರಾಗಿಯೂ ಆಗಿದ್ದ ಹಾಮಿದ್ ಹುಸೈನ್ ಸಾಹೇಬರ ನಿಧನ ಇಸ್ಲಾಮಿ ಆಂದೋಲನಕ್ಕೆ ದೊಡ್ಡ ನಷ್ಟವಾಗಿದೆ.

ಅವರ ಪಾರ್ಥಿವ ಶರೀರವನ್ನು ಅವರ ಹುಟ್ಟೂರಾದ ರಾಯಚೂರು ಜಿಲ್ಲೆಯ ಸಿಂಧನೂರಿಗೆ ಶುಕ್ರವಾರ ಕೊಂಡೊಯ್ದು, ಅಪಾರ ಜನಸ್ತೋಮದಲ್ಲಿ ಜನಾಝಾ ನಮಾಝ್ ನೆರವೇರಿಸಿ ರಾತ್ರಿ ದಫನ ಮಾಡಲಾಯಿತು. (2ನೇ ಪುಟಕ್ಕೆ)

## ನನ್ನ ಅಣ್ಣ

**30 ವರ್ಷಗಳ ಹಿಂದೆ ನಮ್ಮ ತಂದೆ ಮೃತ ಪಟ್ಟ ಬಳಿಕ ನಮ್ಮ ಪಾಲಿಗೆ ಹಾಮಿದ್ ಅಪ್ಪನಂತೇ ಇದ್ದ. ಆತ ಕನಿಷ್ಠ ತಿಂಗಳಿಗೊಮ್ಮೆಯಾದರೂ ಇಂಗ್ಲೆಂಡಿನಲ್ಲಿರುವ ನನಗೆ ಕರೆ ಮಾಡುತ್ತಿದ್ದ. ಆರೋಗ್ಯದ ಬಗ್ಗೆ ವಿಚಾರಿಸುತ್ತಿದ್ದ. ಅಣ್ಣನ ಮಾತು, ನಡವಳಿಕೆ ಅತ್ಯುತ್ತಮ ಮಟ್ಟದ್ದು. ಆತ ವಿನಯವಂತ. ಆತ ಎಂದೂ ಪ್ರಾಮಾಣಿಕತೆಯನ್ನು ಹೊರತುಪಡಿಸಿದ ಮಾತು ಆಡಿದ್ದೇ ಇಲ್ಲ. ಅತ್ಯಂತ ನೇರವಾಗಿ ಮಾತಾಡುತ್ತಿದ್ದ. ಹಿರಿಯರು ಮತ್ತು ಕಿರಿಯರೆಂಬ ಬೇಧವಿಲ್ಲದೇ ಎಲ್ಲರನ್ನೂ ಗೌರವಿಸುತ್ತಿದ್ದ. ಕೇವಲ ಅಲ್ಲಾಹನಿಗಾಗಿ ಆಡಂಬರದ ಬದುಕನ್ನು ತ್ಯಜಿಸಿ, ತೀರಾ ಸರಳವಾಗಿ ಬದುಕಿದ.**

**ಇತ್ತೀಚೆಗೆ ಆತನ ಹಿರಿಯ ಮಗನ ನಿಶ್ಚಿತಾರ್ಥವಿತ್ತು. ನಾವೆಲ್ಲಾ ಆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರೂ ಅಣ್ಣ ಮಾತ್ರ ಗೈರು ಹಾಜರಾಗಿದ್ದ. ನಾನಂದಿದ್ದೆ, ನೀನು ಕಾರ್ಯಕ್ರಮದಲ್ಲಿ ಇರಲೇಬೇಕು. ಆದರೆ ಅಣ್ಣ ನನ್ನ ಕೋರಿಕೆಯನ್ನು ಮನ್ನಿಸಿರಲಿಲ್ಲ. ಆತ ಹೇಳಿದ್ದ, ಜಮಾಅತ್‌ನ ತುಂಬಾ ಮಹತ್ವದ ಸಭೆಯೊಂದರಲ್ಲಿ ನಾನು ಭಾಗವಹಿಸಲೇಬೇಕಿದೆ. ಆದ್ದರಿಂದ ನನ್ನಿಂದ ಭಾಗವಹಿಸಲು ಸಾಧ್ಯವಿಲ್ಲ. ಅಣ್ಣನನ್ನು ಆಸ್ಪತ್ರೆಗೆ ಸೇರಿಸುವ ಮೊದಲು ಜಮಾಅತ್‌ನ ಕಾರ್ಯ ನಿಮಿತ್ತ ಮಂಗಳೂರಿಗೆ ಪ್ರಯಾಣಿಸಿ ಹಿಂತಿರುಗುತ್ತಿದ್ದ. ಅಣ್ಣನಿಗೆ ರೈಲು ಪ್ರಯಾಣದಲ್ಲೇ ಹೃದಯಾಘಾತವಾಗಿತ್ತು (Cardiac Arrest). ಆಸ್ಪತ್ರೆಗೆ ಸೇರಿಸಿದ ಮೂರ್‍ನಾಲ್ಕು ದಿನಗಳಲ್ಲಿ ಆತನಿಗೆ ಇನ್ನೊಂದು ಆಘಾತವಾಯಿತು. ಅಲ್ಲಿಗೆ ಅಣ್ಣ ಈ ಲೋಕದ ಬದುಕಿಗೆ ವಿದಾಯ ಹೇಳಿದ್ದ. ಆತನಿಗೆ ಅಲ್ಲಾಹನು ಮಗ್ಫಿರತ್ ಮತ್ತು ಮರ್‌ಹಮತ್ ನೀಡಿ ಅನುಗ್ರಹಿಸಲಿ.**

**ಸೈಯದ್ ತಫಝ್ಝುಲ್ ಹುಸೈನ್, ಇಂಗ್ಲೆಂಡ್**

# ನೆಲದಲ್ಲೇ ಮಲಗುತ್ತಿದ್ದ ನನ್ನ ಹಾಮಿದ್ ಭಾಯಿ...



ಅತ್ಥರುಲ್ಲಾ ಶರೀಫ್
ಜ.ಇ. ಹಿಂದ್ ರಾಜ್ಯ ಕಾರ್ಯದರ್ಶಿ

"ನಿಮ್ಮ ಬಳಿ ಡೈಜೀನ್ ಇದೆಯಾ?"

"ಇಲ್ಲ, ಹಾಜ್‌ಮೋಲಾ ಉಂಟು ಬೇಕಾ?"

ಫಜ್ರ್ ನಮಾಝ್‌ನ ಬಳಿಕ ಜಮಾಅತ್‌ನ ಘಟಕ ಕಾರ್ಯಾಲಯಕ್ಕೆ ತಲುಪುತ್ತಲೇ ವಿಚಾರಿಸಿದ ಹಾಮಿದ್ ಭಾಯಿಯವರಿಗೆ ಘಟಕಾಧ್ಯಕ್ಷರು ಹೀಗೆ ಉತ್ತರಿಸಿದರು. ಬಳಿಕ ಅವರು ತಮ್ಮ ಕೊಠಡಿಗೆ ತೆರಳಿದರು. ಸ್ವಲ್ಪ ಹೊತ್ತಿನಲ್ಲೇ ಹತ್ತಿರದ ಕೋಣೆಯಲ್ಲಿ ನರಳುವ ಶಬ್ದ ಕೇಳಿಸಿದಾಗ, ಘಟಕಾಧ್ಯಕ್ಷರು ಅತ್ತ ಕಡೆ ಧಾವಿಸಿದರು. ಅಲ್ಲಿ ಕಾಣುವುದೇನು? ಹಾಮಿದ್ ಭಾಯಿ ತಮ್ಮ ಮೇಜಿನ ಹಿಂದುಗಡೆ ಇರುವ ಹಾಸಿಗೆಯಲ್ಲಿ ಮಲಗಿದ್ದು, ಎದೆಯನ್ನು ನೀವುತ್ತಿದ್ದಾರೆ!

"ಏನಿಲ್ಲ, ಗ್ಯಾಸ್‌ನಿಂದ ಬಹುಶಃ ತೊಂದರೆಯಾಗುತ್ತಿದೆ" ಹಾಮಿದ್ ಭಾಯಿ ಹೀಗೆ ಹೇಳುತ್ತಲೇ ಇದ್ದರು. ಬಹಳ ಒತ್ತಾಯಪಡಿಸಿದ ಬಳಿಕ ಅವರನ್ನು ಆಸ್ಪತ್ರೆಗೆ ಕರಕೊಂಡು ಹೋಗಲಾಯಿತು. ವೈದ್ಯರು ಪರೀಕ್ಷಿಸಿ, ಅದು ಹೃದಯಾಘಾತ ಎಂದು ದೃಢಪಡಿಸಿದರು. ಅದರಲ್ಲೂ ತೀವ್ರ ಹೃದಯಾಘಾತ! ತಜ್ಞ ವೈದ್ಯರು ತಕ್ಷಣವೇ ಚಿಕಿತ್ಸೆ ಆರಂಭಿಸಿದರು. ಮೂರು ನಾಲ್ಕು ದಿನಗಳಲ್ಲಿ ಸ್ಥಿತಿ ಸುಧಾರಿಸಿತು. ಇನ್ನು ಎರಡು ದಿನಗಳ ಬಳಿಕ ಆಸ್ಪತ್ರೆಯಿಂದ ಬಿಡುಗಡೆಯಾಗುವುದೆಂದಿತ್ತು. ಆದರೆ ಅಷ್ಟು ಹೊತ್ತಿಗೆ ಶ್ವಾಸಕೋಶ(Lungs)ಗಳಲ್ಲಿ ನೀರು ತುಂಬಿತು. ಅದಕ್ಕೆ ಚಿಕಿತ್ಸೆ ಆರಂಭಿಸಲಾಯಿತು. (ಕೊನೆಯ ಪುಟಕ್ಕೆ)

# ಎಸ್.ಐ.ಓ. ರಾಜ್ಯಾಧ್ಯಕ್ಷರಾಗಿ ಅಶ್ಫಾಕ್ ಅಹ್ಮದ್



**ಬೆಂಗಳೂರು:** ಎಸ್.ಐ.ಓ. 2010-11ನೇ ಸಾಲಿನ ರಾಜ್ಯಾಧ್ಯಕ್ಷರಾಗಿ ಅಶ್ಫಾಕ್ ಅಹ್ಮದ್ ಶರೀಫ್ ಮಂಗಳೂರು ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ. ಇವರು ಪತ್ರಿಕೋದ್ಯಮದಲ್ಲಿ ಪದವೀಧರರಾಗಿದ್ದು ಈ ಹಿಂದೆ ಪಶ್ಚಿಮ ವಲಯ ಪ್ರಾದೇಶಿಕ ಅಧ್ಯಕ್ಷರಾಗಿ, ರಾಜ್ಯ ಸಾರ್ವಜನಿಕ ಸಂಪರ್ಕ ಕಾರ್ಯದರ್ಶಿಯಾಗಿ ಹಾಗೂ ಸಂಘಟನೆಯ ಆಂಗ್ಲ ಮುಖವಾಣಿ 'ಕಂಪಾನಿಯನ್'ನ ಸಂಪಾದಕರಾಗಿ ಸೇವೆ ಸಲ್ಲಿಸಿರುವರು. ಉತ್ತಮ ವಾಗ್ಮಿ ಹಾಗೂ ಸಂಘಟಕರೂ ಆಗಿದ್ದಾರೆ.

ಹಾಗೆಯೇ ಡಾ| ಶಾಕಿರ್ ಅಲಿ ಗುಲ್ಬರ್ಗಾ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಈ ಹಿಂದೆ ಇವರು ಎಸ್.ಐ.ಓ. ರಾಜ್ಯ ಸಲಹಾ ಸಮಿತಿಯ ಸದಸ್ಯರಾಗಿದ್ದರು. ಪ್ರಸಕ್ತ ಇವರು M.D. ಪದವಿಗಾಗಿ ಅಧ್ಯಯನ ನಡೆಸುತ್ತಿದ್ದಾರೆ.

ಅದೇ ರೀತಿ ಸೈಯದ್ ಇಶ್ತಿಯಾಕ್ ಬೆಂಗಳೂರು (2ನೇ ಪುಟಕ್ಕೆ)

ಪರಮ ದಯಾಮಯ-ಕರುಣಾಳುವಾದ ಅಲ್ಲಾಹನ ನಾಮದಿಂದ

## ಸಂಪಾದಕೀಯ

# ಅವರು ಬಾಗಿಲು ತೆರೆದಿಟ್ಟು ಕಾಯುತ್ತಿದ್ದರು

ತೀರಾ ಸಣ್ಣದಾದ, ಈಗಿನ ಶಾಪ್‌ಗಳಿಗೆ ಹೋಲಿಸಿದರೆ ಸೊನ್ನೆ ಎಂದೇ ಹೇಳಬಹುದಾದಷ್ಟು ಕಿರಿದಾದ ಒಂದು ಚಪ್ಪಲಿ ಮತ್ತು ಒಂದು ಸೈಕಲ್ ರಿಪೇರಿ ಅಂಗಡಿ; ನೇರವಾಗಿ ನಿಂತರೆ ತಲೆಗೆ ತಾಗುವಷ್ಟು ಪುಟ್ಟದಾದ ಪುರಾತನ ಕಾಲದ ಒಂದು ಗುಡಿಸಲು... ಇವಿಷ್ಟೇ ಸೈಯದ್ ಹಾಮಿದ್ ಹುಸೇನ್‌ರು (ವಿವರ ಮುಖಪುಟದಲ್ಲಿದೆ) ತನ್ನ ಮಕ್ಕಳಿಗೆ ಬಿಟ್ಟು ಹೋಗಿರುವ ಆಸ್ತಿ. ಆದರೆ ಅವರು ಜಮಾಅತೆ ಇಸ್ಲಾಮಿ ಹಿಂದ್‌ನ ಪಾಲಿಗೆ ಎಷ್ಟು ದೊಡ್ಡ ಆಸ್ತಿಯಾಗಿದ್ದರೆಂದರೆ, ಅವರ ಪ್ರಸ್ತಾಪವಾಗುವಾಗಲೆಲ್ಲಾ ಕಣ್ಣು ತುಂಬುತ್ತದೆ. ಸಂತಾಪ ಸೂಚಕ ಸಭೆಗಳು ಮಾತಿಲ್ಲದೇ ಮೌನವಾಗುತ್ತವೆ. ಗಂಟಲು ಕಟ್ಟುತ್ತವೆ. ಇಷ್ಟಕ್ಕೂ ಇವತ್ತು ಓರ್ವ, ಸಂಘಟನೆ ಇಲ್ಲವೇ ರಾಜಕೀಯ ಪಕ್ಷವೊಂದರ ಆಯಕಟ್ಟಿನ ಸ್ಥಾನ ಬಿಡಿ, ಕಾರ್ಯಕಾರೀ ಸಮಿತಿಯಲ್ಲಿದ್ದರೂ ಸಾಕು, ವರ್ಷ ಕಳೆಯುವಾಗ ಆತನ ಬ್ಯಾಂಕ್ ಬ್ಯಾಲೆನ್ಸ್‌ನಲ್ಲಿ ಹೆಚ್ಚಳ ಉಂಟಾಗುತ್ತದೆ. ಗುಡಿಸಲು ಬಂಗಲೆಯಾಗುತ್ತದೆ. ಪಾದಚಾರಿಯಾಗಿದ್ದವ ಕಾರಲ್ಲಿ ಓಡಾಡತೊಡಗುತ್ತಾನೆ. ಸಾಮಾನ್ಯ ಮಂದಿಯ ಕೈಗೆ ಸಿಗದಷ್ಟು ಎತ್ತರದಲ್ಲಿ, ಒಂದು ವಿಶೇಷ ಇಮೇಜನ್ನು ಸೃಷ್ಟಿಸಿಕೊಂಡು ವೇದಿಕೆಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿರುತ್ತಾನೆ. ಹಾಮಿದ್ ಹುಸೇನ್ ರಾಜ್ಯದಾದ್ಯಂತ ಓಡಾಡುತ್ತಿದ್ದುದು ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ. ಯಾಕೆ ಅದುವೇ ಅಂದರೆ, ಅದರಲ್ಲಿ ಚಾರ್ಜು ಕಡಿಮೆ. ಮುಂಗಡವಾಗಿ ಟಿಕೆಟು ಕಾಯ್ದಿರಿಸದೇ ಸಿಕ್ಕ ಬಸ್ಸನ್ನು ಹತ್ತಿಕೊಂಡು ನಿಂತೋ ಜೋತಾಡಿಕೊಂಡೋ ಮಂಗಳೂರಿನಿಂದ ಬೆಂಗಳೂರಿಗೆ, ಅಲ್ಲಿಂದ ಇನ್ನೆಲ್ಲಿಗೋ ಪ್ರಯಾಣಿಸುತ್ತಿದ್ದರು. ಸಾವಿಗೀಡಾಗುವ ಒಂದು ವಾರ ಮೊದಲು ಅವರು ಮಂಗಳೂರಿನಿಂದ ಬೆಂಗಳೂರಿಗೆ ಪ್ರಯಾಣಿಸಿದ್ದೂ ಇದೇ ಕೆಂಪು ಬಸ್ಸಿನಲ್ಲಿ. ಅದೂ ಟಿಕೆಟು ಕಾಯ್ದಿರಿಸದೇ. ಮೂರು ದಶಕಗಳ ಕಾಲ ಜಮಾಅತ್‌ನ ಪ್ರಮುಖ ಹುದ್ದೆಯಲ್ಲಿದ್ದೂ ಅವರ ಗುಡಿಸಲಿಗೆ ಬಂಗಲೆಯಾಗುವುದು ಬಿಡಿ, ಕನಿಷ್ಠ ರೂಪ ಬದಲಿಸಿಕೊಳ್ಳುವ ಭಾಗ್ಯವೂ ಸಿಗಲಿಲ್ಲ. ಅರ್ಥಶಾಸ್ತ್ರದಲ್ಲಿ ಸ್ನಾತ್ತಕೋತ್ತರ ಪದವೀಧರರಾಗಿದ್ದ ವ್ಯಕ್ತಿಯೋರ್ವರಿಗೆ, ಬದುಕಿಗೆ ಇಷ್ಟು ಸರಳ, ಪ್ರಾಮಾಣಿಕ ಅರ್ಥ ಕೊಡಲು ಸಾಧ್ಯವಾದದ್ದಾದರೂ ಹೇಗೆ?

ನಿಜವಾಗಿ ಹಾಮಿದ್ ಹುಸೇನ್‌ರಿಗೆ ಮಾತ್ರ ಸಾವು ಬರುವುದಲ್ಲ. ಈ ಜಗತ್ತಿನ ಸರ್ವರ ಬದುಕಿನಲ್ಲೂ ಸಾವು ಎಂಬ ಎರಡಕ್ಷರಕ್ಕೆ ಜಾಗ ಇದ್ದೇ ಇದೆ. ಯಾವಾಗ ಬೇಕಾದರೂ ಬರಬಹುದಾದ, ದಿನಾಂಕ ಗೊತ್ತಿಲ್ಲದ ಸಾವನ್ನು, ಅನಿರೀಕ್ಷಿತ ಎಂದೋ ಕ್ರೂರಿ ಎಂದೋ ಹೇಳುವುದು ನಮ್ಮ ಸಣ್ಣತನ ಅಷ್ಟೇ. ನಾವು ನಮ್ಮ ಮನೆಗೆ ಬಾಗಿಲುಗಳನ್ನು ಅಳವಡಿಸಿರುತ್ತೇವೆ. ಹಂಚಿನಿಂದಲೋ ಕಾಂಕ್ರೀಟಿನಿಂದಲೋ ಮನೆಯನ್ನು ಭದ್ರಪಡಿಸಿರುತ್ತೇವೆ. ರಾತ್ರಿಯಾದರೆ ಒಳಕೋಣೆಯ ಬಾಗಿಲನ್ನೂ ಮುಚ್ಚಿ, ಒಂದು ಬಗೆಯ ಭದ್ರತೆಯ ಭಾವನೆಯನ್ನು ಹೊಂದುತ್ತೇವೆ. ಆದರೂ ಇವಾವುದಕ್ಕೂ ಸಾವನ್ನು ತಡೆಯುವ ಸಾಮರ್ಥ್ಯವಿರುವುದಿಲ್ಲ. ಇವತ್ತು ಅನೇಕರು ಹಾಮಿದ್ ಹುಸೇನ್‌ರಲ್ಲಿದ್ದಂಥ ಸರ್ಟಿಫಿಕೇಟನ್ನು ಹಿಡಿದುಕೊಂಡು ದುಡ್ಡು ಸಂಪಾದಿಸುವುದರಲ್ಲಿ ಎಷ್ಟು ಬ್ಯುಸಿಯಾಗಿರುತ್ತಾರೆಂದರೆ, ಸಾವನ್ನು ಎದುರಿಸುವುದಕ್ಕೆ ಪುರುಸೊತ್ತೇ ಇರುವುದಿಲ್ಲ. ತನ್ನ ಹುದ್ದೆ, ಮಕ್ಕಳು, ಬ್ಯಾಂಕ್ ಬ್ಯಾಲೆನ್ಸ್‌ನ ಸುತ್ತ ಆಲೋಚಿಸುತ್ತಾ ಬದುಕು ಸಾಗಿಸುವುದರ ಮಧ್ಯೆ, ಅನೇಕರಿಗೆ ಸಾವಿಗೆ ತಯಾರಿ ನಡೆಸುವುದು ಮರೆತೇ ಹೋಗಿರುತ್ತದೆ. ಇಷ್ಟಕ್ಕೂ ಈ ಜಗತ್ತಿನಲ್ಲಿ ನಿತ್ಯ ಸಾವಿರಾರು ಸಾವುಗಳಾಗುತ್ತದಲ್ಲವೇ? ಎಷ್ಟು ಮಂದಿಯ ಸಾವು ನಮ್ಮಲ್ಲಿ ಕಣ್ಣೀರು ತರಿಸುತ್ತದೆ? ಒಂದು ಬೆಳಗಾತ ಬರುವ ನಾಲ್ಕು ಗೆರೆಯ ಎಸ್ಸೆಮ್ಮೆಸ್ಸು ನಮ್ಮನ್ನು ಗಾಢ ಮೌನಕ್ಕೆ, ಏನನ್ನೋ ಕಳಕೊಂಡ ಭಾವಕ್ಕೆ, ಬದುಕು ಇಷ್ಟೇ ಅಂತ ಅಂದುಕೊಂಡು ಶೋಕಿಸುವುದಕ್ಕೆ ನಿರ್ಬಂಧಿಸುವುದೇಕೆ? ಹಾಮಿದ್ ಹುಸೇನ್ ಎಂಬ ಸಣ್ಣ ಆಕೃತಿಯ, ಪ್ರಖರ ಭಾಷಣಕಾರನಲ್ಲದ ವ್ಯಕ್ತಿಯ ಅಗಲಿಕೆಗೆ ಈ ರಾಜ್ಯದ ಸಾವಿರಾರು ಮಂದಿ ಕಣ್ಣೀರಿಳಿಸಿದ್ದಾರೆ. ಅಪ್ಪನನ್ನು ಕಳಕೊಂಡ ಮಕ್ಕಳಂತೆ ಬಿಕ್ಕಿ ಬಿಕ್ಕಿ ತಾವಿರುವ ಸಭೆಯನ್ನೂ ಮರೆತು ಅತ್ತಿದ್ದಾರೆ. ತಮ್ಮ ಮನೆ, ಮಕ್ಕಳು, ಕಂಪೌಂಡ್‌ನಾಚೆ ಆಲೋಚಿಸುವುದು, ಅದರಾಚೆಗಿನ ಜೀವಿಗಳಿಗೆ ಮರುಗುವುದು ಅಪರೂಪವಾಗುತ್ತಿರುವ ಇಂದಿನ ದಿನಗಳಲ್ಲಿ ಈ ಎಲ್ಲ ಆರೋಪಗಳನ್ನೂ ಸುಳ್ಳು ಮಾಡಿ ಹಾಮಿದ್ ಹುಸೇನ್ ಸರ್ವರ ಪ್ರೀತಿಗೆ ಪಾತ್ರವಾದದ್ದು ಹೇಗೆ? ನಿಜವಾಗಿ ದುಡ್ಡು, ಹುದ್ದೆ, ಇಮೇಜ್‌ಗಳಾಚೆ ಅವರು ಜನರೊಂದಿಗೆ ಗಾಢವಾದ ಸಂಬಂಧ ಸ್ಥಾಪಿಸಿಕೊಂಡಿದ್ದರು. ಯಾರನ್ನಾದರೂ ಭೇಟಿಯಾದರೆ ಮೊತ್ತ ಮೊದಲು ಅವರು ಕೇಳುತ್ತಿದ್ದುದೇ ಮನೆಯವರ ಬಗ್ಗೆ, ಅವರ ಆರೋಗ್ಯದ ಬಗ್ಗೆ.

ಈ ಜಗತ್ತಿನಲ್ಲಿ ಬದುಕುವುದಕ್ಕೆ, ಪ್ರಸಿದ್ಧಿ ಪಡೆಯುವುದಕ್ಕೆ ನೂರಾರು ದಾರಿಗಳಿವೆ. ಜಗತ್ತೆಷ್ಟು ಕಮರ್ಷಿಯಲ್ ಆಗಿ ಬಿಟ್ಟಿದೆಯೆಂದರೆ ದುಡ್ಡು ಕೊಟ್ಟರೆ ಕಣ್ಣೀರಿಳಿಸುವುದಕ್ಕೂ ಕೊಲೆಗೈಯುವುದಕ್ಕೂ ಜನರಿದ್ದಾರೆ. ಜಾಗತೀಕರಣದ ಪ್ರಭಾವದಿಂದ ಪ್ರತಿ ಮನೆಗಳೂ ಮನಸುಗಳೂ ದಿನೇದಿನೇ ವ್ಯಾಪಾರೀಕರಣಗಳ್ಳುತ್ತಿವೆ. ಪ್ರತಿಷ್ಠೆಗಾಗಿ ಮನೆ ಕಟ್ಟುವ, ವಾಹನ ಖರೀದಿಸುವ ಇಂದಿನ ದಿನಗಳಿಗೆ ವಿರುದ್ಧವಾಗಿ, ಹಾಮಿದ್ ಹುಸೇನ್ ತೀರಾ ಸರಳವಾಗಿ ಬದುಕಿದರು. ಆಂದೋಲನದ ಪ್ರತಿ ಕಾರ್ಯಕರ್ತರನ್ನು ತನ್ನೋರ್ವ ಸಹೋದರನಂತೆ ಕಂಡರು. ಆದ್ದರಿಂದಲೇ ಅವರು ಇನ್ನಿಲ್ಲ ಎಂಬುದು ದೃಢವಾದಾಗ ಎಲ್ಲರೂ ತಮ್ಮೋರ್ವ ಸಹೋದರನನ್ನು ಕಳಕೊಂಡಂತೆ ಭಾವಪರವಶರಾದರು. ಇಷ್ಟಕ್ಕೂ ಅವರು ಬದುಕಿನುದ್ದಕ್ಕೂ ದುಡಿದದ್ದು, ಕೆಂಪು ಬಸ್ಸಿನಲ್ಲಿ ಪ್ರಯಾಣಿಸಿದ್ದೆಲ್ಲಾ ಅವರ ಸ್ವಂತದ ಖಾತೆಯನ್ನು ಹೆಚ್ಚಿಸುವುದಕ್ಕಲ್ಲವಲ್ಲ. ಅವರ ಮುಂದೊಂದು ಗುರಿಯಿತ್ತು. ಆ ಗುರಿಗಾಗಿ ಅವರು ತನ್ನ ಆರೋಗ್ಯವನ್ನೂ ಕಡೆಗಣಿಸಿದರು.

ಆಂದೋಲನದ ಸಂಗಾತಿಗಳ ಪಾಲಿಗೆ ಹಾಮಿದ್ ಹುಸೇನ್ ದೊಡ್ಡದೊಂದು ಸಾಧ್ಯತೆಯನ್ನು ತೆರೆದಿಟ್ಟು ಹೋಗಿದ್ದಾರೆ. ನೀವು ಆಕೃತಿಯಲ್ಲಿ ಎಷ್ಟೇ ಸಣ್ಣವರಾಗಿದ್ದರೂ ದುಡ್ಡಿಲ್ಲದಿದ್ದರೂ ನಿಮ್ಮ ಬದುಕು ಅಲ್ಲಾಹನ ಇಚ್ಛೆಗೆ ಪೂರಕ ಆಗಿದ್ದರೆ ನಿಮ್ಮನ್ನು ಜಗತ್ತು ಪ್ರೀತಿಸುತ್ತದೆ. ನಿಜವಾಗಿ ಪ್ರತಿ ಮರಣಕ್ಕೂ ಜನರಲ್ಲೊಂದು ಪ್ರತಿಕ್ರಿಯೆ ಇರುತ್ತದೆ. ಕಲ್ಲಿನಿಂದ ಗೋಡೆ ಕಟ್ಟಿ ಅದರ ಮೇಲೊಂದು ಕಾಂಕ್ರೀಟು ಹಾಸಿ, ಬಾಗಿಲುಗಳನ್ನು ಅಳವಡಿಸಿದ ಮಾತ್ರಕ್ಕೇ ಯಾರೂ ಸಾವಿನಿಂದ, ಆ ಬಳಿಕ ಜನರ ಪ್ರತಿಕ್ರಿಯೆಗಳಿಂದ ತಪ್ಪಿಕೊಳ್ಳಲು ಸಾಧ್ಯವಿಲ್ಲ. ಹಾಮಿದ್ ಹುಸೇನ್ ಆದರೋ ಸಾವಿಗಾಗಿ ಬಾಗಿಲನ್ನೇ ತೆರೆದಿಟ್ಟು ಕಾಯುತ್ತಿದ್ದರು. ಯಾಕೆಂದರೆ ಅವರು ಅದಕ್ಕೆ ಅಷ್ಟು ಚೆನ್ನಾಗಿ ತಯಾರಿ ನಡೆಸಿದ್ದರು. ನಮ್ಮೆಲ್ಲಾ ಸರ್ಟಿಫಿಕೇಟು, ಬ್ಯಾಂಕ್ ಬ್ಯಾಲೆನ್ಸು, ಮನೆ, ವಾಹನ, ಹುದ್ದೆಗಳನ್ನೆಲ್ಲಾ ಎದುರಿಟ್ಟುಕೊಂಡು ಒಮ್ಮೆ ಆಲೋಚಿಸೋಣ. ಹಾಮಿದ್ ಹುಸೇನ್‌ರ ಎತ್ತರ ಗೊತ್ತಾಗುವುದೇ ಆಗ. ದೇವನು ಅವರಿಗೆ ಸ್ವರ್ಗವನ್ನು ದಯಪಾಲಿಸಲಿ.

## ವಿ ಚಾ ರ ಮ ಣಿ

ನಾವು ಒಂದು ಬಂಜರು ಭೂಭಾಗದ ಕಡೆಗೆ ನೀರನ್ನು ಹರಿಸಿ ತರುವುದನ್ನೂ ತರುವಾಯ ಅದೇ ನೆಲ ದಿಂದ ಇವರ ಜಾನುವಾರುಗಳಿಗೆ ಮೇವು ಸಿಗುವ ಹಾಗೂ ಇವರು ಸ್ವತಃ ಉಣ್ಣುವಂತಹ ಬೆಳೆಯನ್ನು ಬೆಳೆಸುತ್ತಿರುವ ದೃಶ್ಯವನ್ನೂ ಇವರೆಂದೂ ಕಂಡಿಲ್ಲವೇ? ಇವರಿಗೇನೂ ತೋಚುವುದಿಲ್ಲವೇ? "ನೀವು ಸತ್ಯವಾದಿಯಾಗಿದ್ದರೆ, ಈ ತೀರ್ಮಾನ ಆಗುವುದು ಯಾವಾಗ?" ಎಂದು ಇವರು ಕೇಳುತ್ತಾರೆ. "ತೀರ್ಪಿನ ದಿನ ವಿಶ್ವಾಸವಿರಿಸುವುದರಿಂದ ಸತ್ಯನಿಷೇಧಿಗಳಿಗೆ ಏನೂ ಪ್ರಯೋಜನವಾಗದು. ಆ ಬಳಿಕ ಅವರಿಗೆ ಸ್ವಲ್ಪವೂ ಕಾಲಾವಕಾಶ ಸಿಗದು" ಎಂದು ಇವರೊಡನೆ ಹೇಳಿರಿ. ಸರಿ; ಇವರನ್ನು ಇವರಷ್ಟಕ್ಕೆ ಬಿಟ್ಟು ಬಿಡಿರಿ ಮತ್ತು ಕಾಯುತ್ತಲಿರಿ. ಇವರೂ ಕಾಯುತ್ತಿದ್ದಾರೆ. (ಪವಿತ್ರ ಕುರ್‌ಆನ್: 32: 27-30)

ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ




## ಡಿಕ್ಲರೇಶನ್ ಭೂಮಿ

ಸಂಚಿಕೆ. 37ರ 'ಕೇಳಿದಿರಾ ಕೇಳಿ'ಯಲ್ಲಿ ಡಿಕ್ಲರೇಶನ್ ಭೂಮಿಯ ಕುರಿತಾದ ಅಬ್ದುಲ್ಲಾ ಶರೀಫ್‌ರ ಪ್ರಶ್ನೆಗೆ ಉತ್ತರವಾಗಿ 'ಡಿಕ್ಲರೇಶನ್‌ನಲ್ಲಿ ದೊರೆತ ಸ್ಥಳವೆಂದರೆ ಯಾರಾದರೂ ಸರಕಾರಿ ಜಮೀನನ್ನು ಸ್ವಾಧೀನಪಡಿಸಿ ಅದರ ಮಾಲಕನಾಗುವುದಾಗಿದೆ. ಅದಕ್ಕೆ ಸರಕಾರದ ವತಿಯಿಂದ ಒಪ್ಪಿಗೆ ಅಥವಾ ಪರವಾನಿಗೆ ಸಿಕ್ಕಿದರೆ ಅದು ಅವನಿಗೆ ಧರ್ಮಸಮ್ಮತ ವಾಗುವುದು' ಎಂದು ಉತ್ತರಿಸಲಾಗಿದೆ. ಇದು ಸರಿಯಲ್ಲ. ಅಂತಹ ಭೂಮಿಗೆ 'ದರ್ಖಾಸ್ತು ಭೂಮಿ' ಎಂದು ಹೆಸರು.

ಡಿಕ್ಲರೇಶನ್ ಸ್ಥಳವೆಂದರೆ, ಓಟುಗಳಿಸುವ ಉದ್ದೇಶದಿಂದ "ಉಳುವವನೇ ಹೊಲದೊಡೆಯ" ಎಂಬ ತತ್ವವನ್ನು ಮುಂದಿರಿಸಿಕೊಂಡು ಭೂ ಮಸೂದೆಯೆಂಬ ಅನ್ಯಾಯದ ಕಾನೂನನ್ನು ಜಾರಿಗೊಳಿಸಿ ಭೂಮಾಲಕನಿಂದ ಗೇಣಿಕರಾರು ಬರೆದುಕೊಟ್ಟು ಗೇಣಿಗೆ ಪಡೆದುಕೊಂಡಿದ್ದ ಭೂಮಿಯ ಒಕ್ಕಲು, ಆ ಭೂಮಿ ತನಗೆ ಸಿಗಬೇಕೆಂದು ಆ ಕರಾಳ ಮಸೂದೆಯ ಕಲಂ 48ರ ಪ್ರಕಾರ ಡಿಕ್ಲರೇಶನ್ ಅರ್ಜಿ ಕೊಟ್ಟ ನಂತರ ಸರಕಾರವು ಅಣಕು ವಿಚಾರಣೆ ನಡೆಸಿ ಭೂ ಮಾಲಕನಿಂದ ಆ ಭೂಮಿಯನ್ನು ಬಲಾತ್ಕಾರವಾಗಿ ವಶಪಡಿಸಿ ಒಕ್ಕಲಿಗೆ (ಉಳುವವನಿಗೆ) ಉಚಿತವಾಗಿ ತೆಗೆದುಕೊಟ್ಟ ಭೂಮಿಯಾಗಿದೆ. ಭೂ ಮಾಲಕನಿಗೆ ನ್ಯಾಯ ಬದ್ಧವಾದ ಮಾರ್ಕೆಟ್ ಧಾರಣೆಯ ಬೆಲೆಯನ್ನು ಕೊಡದೆ, ಕವಡೆ ಕಾಸಿನ ಪರಿಹಾರವನ್ನು– ಅದನ್ನು ಕೂಡಾ ನಗದಾಗಿ ಕೊಡದೆ– 20 ವರ್ಷಗಳ ನಂತರ ನಗದಾಗಿಸುವ 'ಬಾಂಡ್' ಪತ್ರವನ್ನು ಕೊಟ್ಟದ್ದಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಭೂ ಮಾಲಕರು ತಮ್ಮ ಉಳಿತಾಯದ ಹಣದಿಂದ ಬೇಸಾಯ ಯೋಗ್ಯವಾದ ಭೂಮಿಯನ್ನು ಖರೀದಿಸಿ, ಗೇಣಿ ನಿರ್ಧರಿಸಿ, ಒಕ್ಕಲಿಗೆ ಕೊಟ್ಟು ಬಂದ ಗೇಣಿಯಿಂದ ಜೀವನ ಸಾಗಿಸುತ್ತಿದ್ದುದ್ದು (ಮನೆ, ಅಂಗಡಿಗಳನ್ನು ಬಾಡಿಗೆ ಕೊಡುವ ರೀತಿಯಲ್ಲೇ) ಎಲ್ಲರಿಗೂ ತಿಳಿದ ವಿಷಯ. ಮೇಲೆ ಹೇಳಿದ ಈ ಕಾನೂನು ಜಾರಿಗೊಳಿಸಿದ ಪರಿಣಾಮವಾಗಿ ಈ ಮಧ್ಯಮ ವರ್ಗದ ಭೂ ಮಾಲಕರು ತಮ್ಮ ಸಂಪೂರ್ಣ ಆಸ್ತಿಯನ್ನು ಕಳಕೊಂಡು ನಿರ್ಗತಿಕರಾಗಿ ಈಗಲೂ ತೊಳಲಾಡುತ್ತಿರುವುದು ವಾಸ್ತವ. ಆದುದರಿಂದ ಇಂತಹ ಡಿಕ್ಲರೇಶನ್ ಭೂಮಿಯು, ಭೂಮಾಲಕನಿಂದ ಸರಕಾರವು ನ್ಯಾಯಬದ್ಧವಲ್ಲದ ರೀತಿಯಲ್ಲಿ ಕಸಿದುಕೊಂಡು ಒಕ್ಕಲಿಗೆ ಕೊಟ್ಟ ಭೂಮಿಯಾಗಿದ್ದು ಅದು ಧರ್ಮ ಬದ್ಧವೆಂದು ಹೇಳಿರುವುದು ಸರಿಯಲ್ಲ.

ಮಾತ್ರವಲ್ಲ, ಮುಜೀಬ್‌ರ ಉತ್ತರದಲ್ಲಿ ಮುಂದುವರಿದು ಭೂ ಸಂಬಂಧವಾದ ಇಸ್ಲಾಮಿ ಶರೀಅತ್ ಕಾನೂನನ್ನು ಭಾರತದಲ್ಲಿ ಚಾಲ್ತಿಯಲ್ಲಿರುವ ಭೂ ಸಂಬಂಧ ಕಾನೂನುಗಳೊಂದಿಗೆ ಮಿಶ್ರಣ ಮಾಡಿ ನ್ಯಾಯೀಕರಿಸಿರುವುದು ಘೋರ ತಪ್ಪು.

**ಬಿ. ಅಬ್ದುಸ್ಸಲಾಮ್ ಮಾಸ್ಟರ್ ಬಂಟ್ವಾಳ**

## ಸಂಪಾದಕೀಯ

ಸಮಾಜವನ್ನು ಉತ್ತಮವಾಗಿಯೂ ಕೆಟ್ಟದ್ದಾಗಿಯೂ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಪ್ರಧಾನ. ಮಾನವೀಯತೆಯ ಶಿಕ್ಷಣವನ್ನು ನೀಡಬೇಕಾದ ಶಿಕ್ಷಕರೇ ಕ್ರೂರಿಗಳಾದರೆ? ಮಕ್ಕಳ ಬಗ್ಗೆ ವಿಶೇಷ ಗಮನ ಹರಿಸಬೇಕೆಂಬ ಸಂಚಿಕೆ 37ರ ಸಂಪಾದಕೀಯ ಮನಮುಟ್ಟುವಂತಿತ್ತು.

ಹಾಗೆಯೇ ಇದೇ ಸಂಚಿಕೆಯ ಎಸ್ಸೆಮ್ಮೆಸ್ ರವಾನಿಸುವ ಮುನ್ನ... ಎಂಬ ಎ.ಕೆ. ಕುಕ್ಕಿಲರ ಲೇಖನವು ರಿಯಾಲಿಟಿ ಶೋಗಳಿಗೆ ಬಲಿಯಾಗಿ ನೆಮ್ಮದಿಯನ್ನೇ ಕಳೆದುಕೊಳ್ಳುವ ತಂದೆ ತಾಯಿಗಳಿಗೆ ಪಾಠದಾಯಕವಾಗಿದೆ.

**ಶಮೀರ ಜಹಾನ್ ಮಂಗಳೂರು**

## ಸೈಯದ್ ಹಾಮಿದ್ ಹುಸೈನ್ ನಿಧನ

(ಮುಖಪುಟದಿಂದ)

ಅವರು ಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ 5 ಮಂದಿ ಸಹೋದರರು ಮತ್ತು ಇಬ್ಬರು ಸಹೋದರಿಯರನ್ನೂ ಅಪಾರ ಬಂಧು ಮಿತ್ರಾದಿಗಳನ್ನೂ ಅಗಲಿದ್ದಾರೆ. ಅವರಿಗೆ ಅಲ್ಲಾಹನು ಮಗ್‌ಫಿರತ್ ಮತ್ತು ಮರ್‌ಹಮತ್ ನೀಡಲಿ ಮತ್ತು ಆಂದೋಲನದ ಬಾಂಧವರಿಗೆ ಅವರ ಸ್ಫೂರ್ತಿದಾಯಕ ಬದುಕು ಮಾರ್ಗದರ್ಶನವಾಗಲಿ. ಆಮೀನ್.

ಅವರ ನಿಧನಕ್ಕೆ ಜಮಾಅತೆ ಇಸ್ಲಾಮಿ ಹಿಂದ್‌ನ ಹಾಲಿ ಅಮೀರ್ ಮೌ। ಸೈಯದ್ ಜಲಾಲುದ್ದೀನ್ ಉಮರಿ, ಮಾಜಿ ಅಮೀರ್ ಮೌ। ಮುಹಮ್ಮದ್ ಸಿರಾಜುಲ್ ಹಸನ್, ಕರ್ನಾಟಕ-ಗೋವಾ ಘಟಕದ ಅಧ್ಯಕ್ಷ ಮುಹಮ್ಮದ್ ಅಬ್ದುಲ್ಲಾ ಜಾವಿದ್, ಎಸ್.ಐ.ಓ. ಕರ್ನಾಟಕದ ಅಧ್ಯಕ್ಷ ಶೌಕತ್ ಅಲಿ ಸೇರಿದಂತೆ ರಾಜ್ಯದಾದ್ಯಂತದ ವಿವಿಧ ಸ್ತರದ ಜಮಾಅತ್ ಹಾಗೂ ಎಸ್.ಐ.ಓ. ನೇತಾರರು ಮತ್ತು ಪದಾಧಿಕಾರಿಗಳು ಸಂತಾಪ ಸೂಚಿಸಿ ಅವರ ಪರಲೋಕದ ಸದ್ಗತಿಗಾಗಿ ಪ್ರಾರ್ಥಿಸಿದ್ದಾರೆ.

## ಎಸ್.ಐ.ಓ. ರಾಜ್ಯಾಧ್ಯಕ್ಷರಾಗಿ ಅಶ್ಫಾಕ್ ಅಹ್ಮದ್

(ಮುಖಪುಟದಿಂದ)

ಸಾರ್ವಜನಿಕ ಸಂಪರ್ಕ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಇವರು ಈ ಹಿಂದೆ ಎಸ್.ಐ.ಓ. ರಾಜ್ಯ ಸಲಹಾ ಸಮಿತಿಯ ಸದಸ್ಯರಾಗಿದ್ದರು. ಇವರು ಪತ್ರಿಕೋದ್ಯಮದಲ್ಲಿ ಸ್ನಾತ್ತಕೋತ್ತರ ಪದವೀಧರರಾಗಿದ್ದು, 'ನ್ಯೂಸ್ ಫಸ್ಟ್'ನಲ್ಲಿ ಪತ್ರಕರ್ತರಾಗಿ ದುಡಿಯುತ್ತಿದ್ದಾರೆ.

ಜೊತೆ ಕಾರ್ಯದರ್ಶಿಯಾಗಿ ತೌಸೀಫ್ ಮಡಿಕೇರಿ ನೇಮಕಗೊಂಡಿದ್ದು, ಇವರು ಮಂಗಳೂರು ವಿಶ್ವ ವಿದ್ಯಾಲಯದಿಂದ M.Sc.ಯಲ್ಲಿ ಸ್ನಾತ್ತಕೋತ್ತರ ಪದವೀಧರರು. ಈ ಹಿಂದೆ ಮಡಿಕೇರಿ ಎಸ್.ಐ.ಓ. ಜಿಲ್ಲಾ ಸಂಚಾಲಕರಾಗಿ ಸೇವೆ ಸಲ್ಲಿಸಿರುವರು.

# ಶಾಭಾಸ್ ಅಸಾಂಜ್, ಎಲ್ಲಿದ್ದೀರಿ? ತಪ್ಪಿಸಿಕೊಳ್ಳಿ

(ಮುಖಪುಟದಿಂದ)

ವಂಚನೆ. ವಿಶ್ವಸಂಸ್ಥೆಯೆಂಬ ಜಾಗತಿಕ ರಾಷ್ಟ್ರಗಳ ವೇದಿಕೆಯ ಕಾರ್ಯದರ್ಶಿಯನ್ನು ಬಿಡದೆ ಬೇಹುಗಾರಿಕೆಗಳೆಲ್ಲ ಅಮೇರಿಕದ ದ್ವಿಮುಖವನ್ನು ಬಹಿರಂಗಪಡಿಸುವಂತಹದ್ದು. ಬಹುಶಃ ವೈರಿಗಳಿಗೆ ರಣರಂಗದಲ್ಲಿ ಸಾಧಿಸಲಾಗದ್ದನ್ನು ವಿಕಿಲೀಕ್ಸ್ ವೆಬ್‌ಸೈಟ್‌ನ ಒಂದು ಪುಟ್ಟ ಅಂಕಣದಿಂದ ಸಾಧಿಸಿದೆ.

2007ರ ಜನವರಿಯಲ್ಲಿ ವಿಕಿಲೀಕ್ಸ್ ಡಾಟ್ ಆರ್ಗ್ ಉದ್ಘಾಟನೆಯಾಗುವ ವರೆಗೆ ಅಮೇರಿಕದ ವಿರುದ್ಧ ಯಾರಿಗೂ ಎದೆ ಎತ್ತಿ ನಿಲ್ಲಲು ಸಾಧ್ಯವಾಗಿರಲಿಲ್ಲ. ಆದರೆ ಈ ವರ್ಷ ಎಪ್ರಿಲ್‌ನಲ್ಲಿ, 2007ರ ಜುಲೈಯಲ್ಲಿ ಅಮೇರಿಕದ ಹೆಲಿಕಾಪ್ಟರೊಂದು ಬಗ್ದಾದ್‌ನಲ್ಲಿ ನಡೆಸಿದ ಆಕ್ರಮಣದ 39 ನಿಮಿಷದ ವೀಡಿಯೋ ದೃಶ್ಯವನ್ನು ಹೊರತಂದಾಗ ವಿಕಿಲೀಕ್ಸ್ ಜನಜನಿತವಾಯಿತು. ಅಮೇರಿಕ ದೌರ್ಜನ್ಯಕ್ಕೆ ಬೆರಳೆತ್ತಿದ ಕಾಲಬ್ರಾರಲ್ ಮರ್ಡಲ್ ಎಂಬ 18 ನಿಮಿಷದ ಚಿತ್ರವನ್ನು ಅದು ಹೊರತಂದಿತು. ಒಬಾಮಾರ ಸಾಫ್ಟ್ ಮುಖದ ಹಿಂದೆ ಬುಶ್‌ರ ಮಾರಕ ದೌರ್ಜನ್ಯದ ಕತೆಯಿದೆ ಎಂಬುದನ್ನು ಜಗತ್ತಿಗೆ ನೆನಪಿಸಿತು. ಅಮೇರಿಕದ ಆ ಆಕ್ರಮಣದಲ್ಲಿ ಹಲವಾರು ಇರಾಕಿ ನಾಗರಿಕರು ಮತ್ತು ರಾಯಟರ್ಸ್‌ನ ಇಬ್ಬರು ಪತ್ರಕರ್ತರನ್ನು ಕೊಂದು ಹಾಕಲಾಗಿತ್ತು. ಗಂಭೀರ ಗಾಯಗೊಂಡ ವ್ಯಕ್ತಿಯೊಬ್ಬ ಪಾರಾಗಲು ನೋಡುತ್ತಿದ್ದಂತೆ ಗುಂಡು ಹಾರಿಸಿ ನಿಶ್ಚೇತನಗೊಳಿಸಲಾಗಿತ್ತು. ಮೃತ ಶರೀರವನ್ನು ಕೊಂಡೊಯ್ಯಲು ಬಂದ ವ್ಯಾನಿನಲ್ಲಿದ್ದ ಇಬ್ಬರು ಪುಟ್ಟ ಮಕ್ಕಳನ್ನು ಕೂಡಾ ಅಮೇರಿಕದ ಸೈನಿಕರು ನಿರ್ದಯವಾಗಿ ಸುಟ್ಟು ಕೊಂದರು.

ಸದ್ಯ ಅಸಾಂಜ್ ತಲೆ ತಪ್ಪಿಸಿ ಅಂದರೆ ಭೂಗತ ಜೀವನ ನಡೆಸಬೇಕಾಗಿದೆ. ಎಲ್ಲೋ ರಹಸ್ಯವಾಗಿ ಕೂತು ಅವರು ಮತ್ತು ಅವರ ತಂಡ ದಾಖಲೆಗಳನ್ನು ಕಲೆ ಹಾಕುತ್ತಿದೆ. ಅದನ್ನು ಬಿಡುಗಡೆಗೊಳಿಸಿ ಅಮೇರಿಕದ ನಿಜ ಬಣ್ಣವನ್ನು ಬಹಿರಂಗಪಡಿಸುತ್ತಿವೆ. ಈ ರೀತಿ ಯಾವ ಯುದ್ಧರಂಗದಲ್ಲಿ ಅಮೇರಿಕದ ಮಾನಗೆಡಿಸಲು ಯಾರಿಂದ ಸಾಧ್ಯವಾಗಿದೆ? ಮಿಸೈಲು, ಟ್ಯಾಂಕರ್, ಬಾಂಬುಗಳಿಗೆ ಸಾಧ್ಯವಾಗದ್ದನ್ನು ಪುಟ್ಟ ವೆಬ್‌ಸೈಟ್ ಪತ್ರಿಕೆ ಮಾಡುತ್ತಿದೆ. ದುರದೃಷ್ಟಕ್ಕೆ ಅವರು ಅಮೇರಿಕದ ಕೈಗೆ ಸಿಗುತ್ತಿಲ್ಲ. ಸಿಕ್ಕಿದ್ದರೆ ಯಾವುದಾದರೂ ಶೂಟ್‌ಡೆಡ್ ತೀರ್ಮಾನ ಮಾಡಬಹುದಾಗಿತ್ತೇ?

ಶಾಬಾಸ್; ಅಮೇರಿಕವನ್ನು ನಂಬಿದರೇನು ಗತಿ, ನಂಬಿದವರ ಸ್ಥಿತಿಯೇನೆಂದು ವಿಕಿಲೀಕ್ಸ್‌ನಿಂದಾಗಿ ಜನ ಅರಿಯುವಂತಾಯಿತು. ನಮ್ಮಲ್ಲಿ ಸ್ಪೆಕ್ಟ್ರಮ್ ಹಗರಣದಲ್ಲಿ ನೇರವಾಗಿ ಮಾಧ್ಯಮಗಳೇ ಭಾಗಿಯಾದುದನ್ನು ಓಪನ್ ಮ್ಯಾಗಝಿನ್ ಬಹಿರಂಗಪಡಿಸಿದ ಒಂದು ಕ್ಷಣ ರಾಜಕೀಯ ವ್ಯವಸ್ಥೆಯೇ ಸ್ತಬ್ಧವಾದದ್ದನ್ನು ಗಮನಿಸಿದ್ದೇವೆ. ನೀರಾ ರಾಡಿಯಾ ಎಂಬ ಮಹಿಳೆ ಮೋದಿಯಿಂದ ಹಿಡಿದು ಕೇಂದ್ರ ಸರಕಾರ, ಎನ್‌ಡಿಎ ಸರಕಾರಗಳನ್ನು ಕಾರ್ಪೊರೇಟು ದೊರೆಗಳಿಗೆ ಬೇಕಾದಂತೆ ಯಶಸ್ವಿಯಾಗಿ ಬಳಸಿದ್ದು ಇಂದು ಕಾಂಗ್ರೆಸ್ ಬಿಜೆಪಿಗಳು ಬಂಡವಾಳಶಾಹಿ ಅಜೆಂಡಾಗಳೆಂಬ ರಹಸ್ಯವನ್ನು ಜನರು ಅರಿತುಕೊಳ್ಳುವುದಕ್ಕೆ ಸಾಧ್ಯವಾಗಿದೆ. ಇವಿಷ್ಟೇ ಈಗ ನಮ್ಮ ರಾಜಕಾರಣವನ್ನು ಅಲ್ಲಾಡಿಸಬಹುದಾದರೆ ಜಗತ್ತನ್ನೇ ತನ್ನ ನಿಯಂತ್ರಣಕ್ಕೆ ತರಲು ಹೆಣಗುವ ಅಮೇರಿಕದ ಷಡ್ಯಂತ್ರಗಳ ಗುಟ್ಟು ಬಯಲಾದರೆ ಆ ಅಮೇರಿಕಕ್ಕೆ ಹೇಗಾಗಿರಬೇಡ. ಆದ್ದರಿಂದ ವಿಕಿಲೀಕ್ಸ್ ಸಂಪಾದಕ ಜೂಲಿಯನ್ ಅಸಾಂಜ್‌ರಿಗೆ ಜೀವ ಬೆದರಿಕೆಯಿದೆ. ಅವರು ಮಾಧ್ಯಮದ ಶಕ್ತಿ. ಜಗತ್ತನ್ನು ಅಪ್ಪಚ್ಚಿ ಮಾಡುವ ಶಕ್ತಿಯನ್ನು ಎದುರು ಹಾಕಿ ನಿಂತ ಅಪರಿಮಿತ ಧೈರ್ಯವಂತ. ಬೊಗಳು ಮಾಧ್ಯಮಗಳು ಇವರಿಂದ ಪಾಠ ಕಲಿಯಬೇಕು. ಅನ್ಯಾಯಕ್ಕೆ ತಮ್ಮನ್ನು ಮಾರದೆ ಅನ್ಯಾಯವನ್ನು ಬಹಿರಂಗಪಡಿಸಿದರು. ಜೂಲಿಯನ್ ಮರೆಯಲ್ಲಿ ಕೂತರೂ ಅವರಿಂದು ಜಾಗತಿಕ ನ್ಯಾಯವನ್ನು ಎತ್ತಿ ಹಿಡಿದಿದ್ದಾರೆ.

ಅಮೇರಿಕದ ಅಕ್ರಮವೊಂದೇ ಅಲ್ಲ ವಿಕಿಲೀಕ್ಸ್‌ನಿಂದ ಬಹಿರಂಗವಾದುದು. ಗೂಗಲ್‌ನೊಳಗೆ ಒಳನುಸುಳಿ ಅಮೇರಿಕನ್ ಕಂಪ್ಯೂಟರ್ ವ್ಯವಸ್ಥೆಯನ್ನು ಹಾಳುಗೆಡವಲು ಚೀನಾದ ನಿರ್ದೇಶನ, ಅಫಘಾನ್‌ನ ಭಾರೀ ಭ್ರಷ್ಟಾಚಾರ, ರಷ್ಯನ್ ನಾಯಕರ ಬಗ್ಗೆ ಅಪಮಾನಕರ ಅಭಿಪ್ರಾಯಗಳು ಇತ್ಯಾದಿಯಾಗಿ ವಿಕಿಲೀಕ್ಸ್ ಇಡೀ ವಿಶ್ವವ್ಯವಸ್ಥೆಯ ವಂಚನೆ ಅಂಕು



ಜೂಲಿಯನ್ ಅಸಾಂಜ್

ಡೊಂಕುಗಳನ್ನು ಜಾಲಾಡಿದೆ. ಅಮೇರಿಕದ ಮುಷ್ಠಿಯೊಳಗೆ ಕೂರಲು ಹವಣಿಸುವ ಭಾರತದ ಅಮೇರಿಕನ್ ರಾಯಭಾರಿ ಕಚೇರಿಗೆ ಸಂಬಂಧಪಟ್ಟ 3038 ದಾಖಲೆಗಳನ್ನು ವಿಕಿಲೀಕ್ಸ್ ಲೀಕ್ ಮಾಡಿದೆ. ಇಸ್ಲಾಮಾಬಾದ್‌ನ ಅಮೇರಿಕನ್ ರಾಯಭಾರಿ ಕಚೇರಿ, ಕೊಲೊಂಬೋದ ಅಮೇರಿಕನ್ ರಾಯಭಾರಿ ಕಚೇರಿ, ಕಠ್ಮಂಡುವಿನ ಅಮೇರಿಕನ್ ರಾಯಭಾರಿ ಕಚೇರಿ ಹೀಗೆ 2.5 ಲಕ್ಷದ ಹಸ್ತ ದಾಖಲೆಗಳನ್ನು ಅಮೇರಿಕದ ಹದ್ದಿನ ಕಣ್ಣಿಂದ ತಪ್ಪಿಸುವ ನಿಮಿತ್ತ ಮರೆಯಲ್ಲಿ ಕೂತು ಜೂಲಿಯನ್ ಅಸಾಂಜ್ ಮಾಡಿದ್ದಾರೆಂದರೆ ಎಂತಹ ಅದ್ಭುತ ಸಾಧನೆ! ಮೆಚ್ಚುವಂಥದ್ದು. ಯುದ್ಧರಂಗದ ಮಿಸೈಲು, ಬಾಂಬಿಗಿಲ್ಲದ ತಾಕತ್ತು ಅದಕ್ಕಿದೆ. ಸೆ. 11ರ ಪ್ರಕರಣವನ್ನು ಅಮೇರಿಕ ಎಷ್ಟೇ ತಾಳಿಕೊಳ್ಳಬಹುದು. ವಿಕಿಲೀಕ್ಸ್‌ನಿಂದಾದ ಆಘಾತವನ್ನು ಖಂಡಿತ ಅಮೇರಿಕಕ್ಕೆ ತಾಳಿಕೊಳ್ಳಲು ಸಾಧ್ಯವಿಲ್ಲ. ಇದಾದ ಬಳಿಕ ಯಾವ ದಾಖಲೆಗಳೂ ಯಾರ ಕೈಗೂ ಸಿಗದಂತೆ ನೋಡಿಕೊಳ್ಳಿ ಎಂದು ಅಮೇರಿಕದ ಅಧ್ಯಕ್ಷರಿಂದಲೇ ಅಮೇರಿಕದ ಎಲ್ಲ ಇಲಾಖೆಗಳಿಗೂ ಸೂಚನೆ ಹೊರಟಿದೆ. ಅಂದರೆ ಅಮೇರಿಕ ನಿಜವಾಗಿಯೂ ನಡುಗಿದೆ ಎಂದಾಯಿತು.

ವಿಕಿಲೀಕ್ಸ್ 2007ರಲ್ಲಿ ಹುಟ್ಟಿಕೊಂಡಿತ್ತಷ್ಟೇ. ಅದಕ್ಕೆ ಅಂತಹ ಆರ್ಥಿಕ ಶಕ್ತಿಯೂ ಇಲ್ಲ. ಕೆಲವೇ ಮಂದಿ ನೌಕರರು ಆದರೂ ವಿವಿಧ ರಾಷ್ಟ್ರಗಳ ಉನ್ನತರ ಭ್ರಷ್ಟಾಚಾರದ ಕಥೆಗಳನ್ನು ಹೊರಗೆ ತಂದಿತು. ಕೆನ್ಯಾದ ಮಾಜಿ ಅಧ್ಯಕ್ಷ ಡ್ಯಾನಿಯಲ್ ಅರಪ್ ಮೊಯಿಯವರ ಕುಟುಂಬ ನಡೆಸಿದ ಭ್ರಷ್ಟಾಚಾರ, ಗ್ವಾಂಟನಾಮೋ ದೌರ್ಜನ್ಯ ಹೀಗೆ ಅದು ಒಂದೊಂದೇ ಹೆಜ್ಜೆಯಿಡುತ್ತಾ ಬಂದಿತು. ಅದಕ್ಕೆ ಇರಾಕ್‌ನಲ್ಲಿ ಅಮೇರಿಕದ ಹೆಲಿಕಾಪ್ಟರ್ ದಾಳಿಯನ್ನು ಚಿತ್ರಸಹಿತ ಬಹಿರಂಗಪಡಿಸಿದ್ದು ದೊಡ್ಡ ಬ್ರೇಕಾಯಿತು. 5 ಮಂದಿ ನೌಕರರು ಮತ್ತು ಗಂಭೀರ ಕೆಲಸದ ಸಹಾಯಕ್ಕೆಂದು 40 ಮಂದಿ. ಇದು ವಿಕಿಲೀಕ್ಸ್‌ನ ಟೀಮ್ ಆಗಿದೆ. ಇಲ್ಲಿ ಹೀಗೆ ಮಾಧ್ಯಮ ಚಟುವಟಿಕೆ ಒಂದು ಸಂಸ್ಥೆಯೆನ್ನುವುದರಿಂದ ಒಂದು ಆಂದೋಲನಕ್ಕೆ ರೂಪು ಕೊಡುವುದಕ್ಕೆ ಜೂಲಿಯನ್ ಅಸಾಂಜ್‌ರಿಗೆ ಸಾಧ್ಯವಾಗಿದೆ. ವಿವಿಧ ಮಟ್ಟದಲ್ಲಿರುವವರು ದಾಖಲೆಗಳನ್ನು ವಿಕಿಲೀಕ್ಸ್‌ಗೆ ಕೊಡುತ್ತಿದ್ದಾರೆ. ಅವುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಸರಿಯಾದುದನ್ನು ಸ್ಪಷ್ಟ ಪಡಿಸಿಕೊಂಡು ವಿಕಿಲೀಕ್ಸ್ ತನ್ನ ವೆಬ್‌ಪುಟದಲ್ಲಿ ಬಹಿರಂಗಪಡಿಸುತ್ತಿದೆ.

ಈ ರೀತಿಯಿಂದ ರಹಸ್ಯ ದಾಖಲೆಗಳನ್ನು ಯಾರಿಂದ ಸೋರಿಕೆಯಾಗಿದೆ ಎಂದು ಯಾವ ರಾಷ್ಟ್ರಕ್ಕೂ ಕಂಡುಹಿಡಿಯಲು ಸಾಧ್ಯವಾಗಿಲ್ಲ. ಕೇವಲ ಗುಮಾನಿಯ ಮೇಲೆ ಕೆಲವು ರಾಷ್ಟ್ರಗಳು ದಂಡಿಸಲು ನೋಡುತ್ತಿದೆ. ದಾಖಲೆ ಸೋರಿಕೆ ನಡೆಸಿದನೆಂದು ಆರೋಪಿಸಿ 22 ವರ್ಷದ ಬ್ರಾಲ್ಲೆ ಎಂಬ ಸೈನಿಕನನ್ನು ಅಮೇರಿಕ ಜೈಲಿನೊಳಗೆ ಕೂಡಿ ಹಾಕಿ ಒಂದು ತಿಂಗಳಿಂದ ಪೀಡಿಸುತ್ತಿದೆ. ಆದರೆ ಅವನಲ್ಲಿ ಅವರಿಗೆ ಯಾವ ಮಾಹಿತಿಯೂ ಸಿಕ್ಕಿಲ್ಲ ಎಂಬುದು ಅಮೇರಿಕದ ವಿಷಾದವನ್ನು ಹೆಚ್ಚಿಸಿದೆ.

ಜೂಲಿಯನ್ ಅಸಾಂಜ್‌ಗೆ ಅಮೇರಿಕ ಒಸಾಮಾ ಬಿನ್ ಲಾಡನ್‌ಗಿಂತಲೂ ಹೆಚ್ಚು ಹೆದರುತ್ತಿದೆ. ಯಾವ ಕ್ಷಣದಲ್ಲಿ ಯಾವ ರಹಸ್ಯ ಸೋರಿಕೆಯಾಗಬಹುದೆಂದು ಅದಕ್ಕೆ ಖಾತ್ರಿಯಿಲ್ಲ. ದ್ವಂದ್ವ ನೀತಿಯಿಂದ ಅಕ್ರಮದಲ್ಲಿ ಮುಳುಗಿದವರು ಮೈಯಿಡೀ ಎಚ್ಚರದಲ್ಲಿರುವ ಅದೇ ಸ್ಥಿತಿಗೆ ಅಮೇರಿಕ ತಲುಪಿದೆ. ಒಟ್ಟಾರೆಯಾಗಿ ಅಮೇರಿಕದ ಪ್ರಜಾಪ್ರಭುತ್ವದ ನಾಟಕವನ್ನು ಸಿಗಿದು ಸತ್ಯವನ್ನು ಅನಾವರಣಗೊಳಿಸಿತು. ಈ ನಾಟಕದೊಂದಿಗೆ ಸೇರಿಕೊಂಡು ತಮ್ಮನ್ನು ಮಾರಿಕೊಂಡ ಅರಬ್ ನಾಯಕರು ಮತ್ತಿತರ ಮೂರನೇ ಜಗತ್ತಿನ ಮುತ್ಸದ್ದಿಗಳ ನಿಜವಾದ ಮುಖವನ್ನು ಜಗತ್ತಿಗೆ ತೋರಿಸಿತು.

ಅಮೇರಿಕ ತಲೆ ದಂಡಕ್ಕಾಗಿ ಹುಡುಕಾಡುವ ಆ ವ್ಯಕ್ತಿ ಏಕಾಏಕಿ ಹೀರೋ ಆಗಿದ್ದಾರೆ. ಒಂದು ಕಂಪ್ಯೂಟರ್ ಪರದೆಯಿದ್ದರೆ ಪ್ರಾಮಾಣಿಕ ಪತ್ರಿಕಾ ಚಟುವಟಿಕೆ ನಡೆಸಬಹುದೆಂದು ತೋರಿಸಿಕೊಟ್ಟಿದ್ದಾರೆ. ಈ ವ್ಯಕ್ತಿಯೊಂದಿಗೆ ಅನ್ಯಾಯವನ್ನು ಪ್ರತಿರೋಧಿಸುವ ಒಂದು ವರ್ಗ ಸಹಕರಿಸುತ್ತಲೂ ಇದೆ. ಅಮೇರಿಕ ಜಾಗತಿಕ ಸಮುದಾಯದ ಮುಂದೆ ಬತ್ತಲಾಗಬೇಕಾದರೆ ಈ ವರ್ಗದ ಸಹಕಾರ ಬಹಳ ನಿರ್ಣಾಯಕವೆಂಬುದು ಅಸಾಂಜ್ ಅರಿತಿದ್ದಾರೆ. ಅಸಾಂಜ್‌ರ ಪ್ರಕಾರ ಸತ್ಯವೆಂಬುದು ಬಹುದೊಡ್ಡ ಆಯುಧ. ಅದರ ಮೂಲಕವೇ ಅಡಗಿಸಿರುವ ಸತ್ಯವನ್ನು ಹೊರತರಬಹುದು ಎಂದು ಅವರು ನಂಬಿದ್ದಾರೆ. 1971ರಲ್ಲಿ ಆಸ್ಟ್ರೇಲಿಯಾದಲ್ಲಿ ಹುಟ್ಟಿ ಕಂಪ್ಯೂಟರ್ ರಂಗದಲ್ಲಿ ನಿಪುಣತೆ ಸಾಧಿಸಿ, ಪ್ರೋಗ್ರಾಮ್ ತಜ್ಞನಾಗಿ, ಹಾಕರ್ ಆಗಿ, ಇಂಟರ್‌ನೆಟ್ ಆ್ಯಕ್ಟಿವಿಸ್ಟ್ ಆದ ಅಸಾಂಜ್ ಆನಂತರ ಪತ್ರಿಕಾ ರಂಗಕ್ಕೆ ಧುಮುಕಿದರು. ಸತ್ಯವೆಂಬುದರ ಮುಂದೆ ರಾಷ್ಟ್ರ, ಸ್ವಜನ ಪ್ರೇಮ ಯಾವುದೂ ಮುಖ್ಯವಾಗಬಾರದೆಂದು ಅಸಾಂಜ್ ಹೇಳುತ್ತಾರೆ. ಆದ್ದರಿಂದ ಅವರು ಯಾರನ್ನೂ ನೋಡದೆ ಸತ್ಯವನ್ನು ಹೊರಗೆಡಹುತ್ತಿದ್ದಾರೆ. ದೊಡ್ಡ ದೊಡ್ಡ ನಾಯಕರ ಹಣೆಬರಹ ಅರಿತು ಜನ ಛೀಮಾರಿ ಹಾಕುವ ಪ್ರಸಂಗ ಬಂದೊದಗಿದೆ. ವಿಶಿಷ್ಟವಾಗಿ ಅಸಾಂಜ್ ತನ್ನ ವೆಬ್‌ಸೈಟ್‌ನಿಂದ ಸಿಡಿಸುವ ದಾಖಲೆಗಳೆಂಬ ಕ್ಷಿಪಣಿಯಿಂದ ಅಮೇರಿಕ ತತ್ತರಿಸಿತು. ಒಮ್ಮೆ ಈ ಅಸಾಂಜ್ ಕೈಗೆ ಸಿಕ್ಕರೆ ಹೊಸಕಿ ಹಾಕಬೇಕೆಂದು ಅದು ಕಾಯುತ್ತಿದೆ. ಒಂದು ವೆಬ್‌ಸೈಟ್‌ನ ಪುಟಕ್ಕೆ ಅಮೇರಿಕವನ್ನು ಹೆದರಿಸುವ, ನಡುಗಿಸುವ ಶಕ್ತಿ ಬಂದಿದೆಯೆಂದಾದರೆ ಆನೆಯನ್ನು ಇರುವೆಯೂ ಉರುಳಿಸಬಲ್ಲುದು ಎಂಬ ಸತ್ಯವು ಜ್ಞಾಪಕಕ್ಕೆ ಬರುವುದಿಲ್ಲವೇ? ಸಾಮ್ರಾಜ್ಯಶಾಹಿಗಳ ಗೂಢತಂತ್ರ ಅಸಾಂಜ್‌ರ ಸತ್ಯದ ಮುಂದೆ ಗೆಲ್ಲಲಾರದು. ಅದುವೇ ಅವರ ಶಕ್ತಿ. ಹೀಗೆ ದಾಖಲೆಗಳ ಮೂಲಕ ಸತ್ಯ ಹೊರತರುವ ಅವರ ಕೆಲಸ ಸಾಂಗವಾಗಿ ನಡೆಯುತ್ತಿರಲಿ.

ಶಾಭಾಸ್ ಜೂಲಿಯನ್ ಅಸಾಂಜ್.

## ಎಂಡೋಸಲ್ಫಾನ್: ಸಾಲಿಡಾರಿಟಿ ಹೋರಾಟ



ಮಂಗಳೂರು: ಸಾಲಿಡಾರಿಟಿ ಯೂತ್ ಮೂವ್‌ಮೆಂಟಿನ ಪ್ರತಿನಿಧಿ ತಂಡವು ದೆಹಲಿಗೆ ಪ್ರಯಾಣಿಸುವ ನಿಮಿತ್ತ ನವೆಂಬರ್ 29ರಂದು ಮಂಗಳೂರಿಗೆ ಆಗಮಿಸಿತು. ರಾಷ್ಟ್ರೀಯ ಮಾನವ ಹಕ್ಕು ಆಯೋಗದ ಮುಖ್ಯಸ್ಥ ಜಸ್ಟಿಸ್ ಕೆ.ಜಿ. ಬಾಲಕೃಷ್ಣನ್‌ರನ್ನು ಭೇಟಿಯಾದ ಬಳಿಕ ದೆಹಲಿಗೆ ತೆರಳಿ ರಾಷ್ಟ್ರಮಟ್ಟದಲ್ಲಿ ಎಂಡೋಸಲ್ಫಾನನ್ನು ನಿಷೇಧಿಸಬೇಕು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಗೆ ತಮ್ಮ ಮನವಿಯನ್ನು ಸಲ್ಲಿಸಿತು.

ನಾಲ್ಕು ಮಂದಿ ಎಂಡೋಸಲ್ಫಾನ್ ಸಂತ್ರಸ್ತರೂ ಸೇರಿದಂತೆ 19 ಮಂದಿಯ ತಂಡವನ್ನು ಜಮಾಅತೆ ಇಸ್ಲಾಮಿ ಹಿಂದ್‌ನ ಕಾರ್ಯಕರ್ತರಾದ ಮುಹಮ್ಮದ್ ಮುಹ್ಸಿನ್, ಅಮೀರ್, ಆಸಿಫ್ ಮತ್ತು ಶಬೀರ್ ಮಂಗಳೂರಿನಲ್ಲಿ ಬರಮಾಡಿಕೊಂಡರು.

ಕಾಸರಗೋಡು ಜಿಲ್ಲೆಯ 11 ಪಂಚಾಯತುಗಳಲ್ಲಿ ಕಳೆದ 25 ವರ್ಷಗಳಷ್ಟು ಕಾಲ ಕೇರಳ ಗೇರುಬೀಜ ಪ್ಲಾಂಟೇಷನ್‌ಗೆ ಸಿಂಪಡಿಸಿದ ಎಂಡೋಸಲ್ಫಾನ್ ಕೀಟನಾಶಕವು ಅಲ್ಲಿನ ಜನರ ಮೇಲೆ ಭೀಕರ ಪರಿಣಾಮ ಬೀರಿದೆ. ಅದರ ದುಷ್ಪರಿಣಾಮದಿಂದಾಗಿ ಅಲ್ಲಿನ ಮಕ್ಕಳ ತಲೆಯು ದೇಹದ ಗಾತ್ರಕ್ಕಿಂತ ದೊಡ್ಡದಾಗಿ ಬೆಳೆದಿದೆ. ಕೈಕಾಲುಗಳಿಗೆ ವಿಕಲತೆ ಬಾಧಿಸಿದೆ. ದೃಷ್ಟಿಯನ್ನೂ, ಶ್ರವಣ ಶಕ್ತಿಯನ್ನೂ ಕಳಕೊಂಡವರಿದ್ದಾರೆ. 200ರಷ್ಟು ಜನರು ಮರಣ ಹೊಂದಿದ್ದಾರೆ. 4000ದಷ್ಟು ಜನರು ಈಗಲೂ ಈ ಸಮಸ್ಯೆಯಿಂದ ಬಳಲುತ್ತಿದ್ದಾರೆ ಮುಂತಾದ ಅಂಶಗಳು ಆ ಮನವಿಯಲ್ಲಿ ಒಳಗೊಂಡಿತ್ತು.

ಕೇರಳ ಸಾಲಿಡಾರಿಟಿ ರಾಜ್ಯಾಧ್ಯಕ್ಷ ಪಿ. ಮುಜೀಬುರ್ರಹ್ಮಾನ್, ಕಾರ್ಯದರ್ಶಿಗಳಾದ ಕೆ.ಕೆ. ಬಶೀರ್ ಮತ್ತು ಎನ್.ಕೆ. ಅಬ್ದುಸ್ಸಲಾಮ್, ರಾಜ್ಯ ಸಲಹಾ ಸಮಿತಿ ಸದಸ್ಯರಾದ ಕೆ.ಟಿ. ಹುಸೈನ್, ಶಾಕಿರ್ ಜಮೀಲ್ ಮತ್ತು ಎಂಡೋಸಲ್ಫಾನ್ ಸಂತ್ರಸ್ತರಾದ ದೇವಿಕಿರಣ್, ಜೀವನ್ ರಾಜ್, ಅಜಿತ್ ಶಾಜಿ, ನಾರಾಯಣ್ ಹಾಗೂ ಅವರ ಹೆತ್ತವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಇಸ್ರೇಲಿನ ಕಾಡ್ಗಿಚ್ಚು ಜಗತ್ತಿಗೆ ಪಾಠವಾಗಲಿ



ಇಸ್ರೇಲಿನ ಕಾಡಿಗೆ ಬಿದ್ದ ಬೆಂಕಿ ಧಗಧಗನೆ ಉರಿಯುತ್ತಿದೆ. ಇನ್ನೂ ಶಮನಗೊಂಡಿಲ್ಲ. ಈ ಪ್ರಾಕೃತಿಕ ದುರಂತದಲ್ಲಿ ಈಗಾಗಲೇ 41 ಮಂದಿ ಸುಟ್ಟು ಗುರುತು ಸಿಗಲಾರದಷ್ಟು ಬೆಂದು ಹೋಗಿದ್ದಾರೆ. ಪರಿಸರಕ್ಕೆ ಸಂಬಂಧಿಸಿದ ಅಥವಾ ವಾತಾವರಣಕ್ಕೆ ಸಂಬಂಧಿಸಿದ ಮತ್ತೊಂದು ಶೃಂಗ, ಕಾನ್‌ಕೂನ್‌ನಲ್ಲಿ ಸೇರುವ ಮೊದಲೇ ಪ್ರಕೃತಿ, ಭೂಮಿ-ಪರಿಸರ, ಗಾಳಿ, ನೀರು ಇತ್ಯಾದಿಗಳನ್ನು ಕೆಡಿಸಿ ದುರಂತದ ಕಡೆಗೆ ಮುಖ ಮಾಡಿರುವ ಮನುಷ್ಯನಿಗೆ ನೀಡಿದ ಎಚ್ಚರಿಕೆ ಇದಾಗಿರಬಹುದೇ? ಈಗ ಕಾನ್‌ಕೂನ್ ಶೃಂಗದಲ್ಲಿ ವಾತಾವರಣದ ಬಗ್ಗೆ ಆತಂಕದಿಂದ ಚರ್ಚಿಸುತ್ತಿರುವ ಜಗತ್ತಿನ ರಾಷ್ಟ್ರಗಳಿಗೆ ಯಾವುದಾದರೂ ಮ್ಯಾಜಿಕ್ ಮಾಡಲು ಸಾಧ್ಯವಿದ್ದರೆ ಅಲ್ಲಿಂದಲೇ ಕೂತು ಈ ಬೆಂಕಿಯನ್ನು ನಂದಿಸಬೇಕಿತ್ತು. ಪ್ರಕೃತಿಯು ಜಗತ್ತಿನ ಎಲ್ಲಾ ರಾಷ್ಟ್ರಶಕ್ತಿಗಿಂತ ಹಿರಿದು. ಮಧ್ಯ ಪ್ರಾಚ್ಯದಲ್ಲಿ ಎದ್ದು ಬಂದಿರುವ ಈ ಕಾಡ್ಗಿಚ್ಚಿನ ನಿಯಂತ್ರಣ ಸುಲಭವಿಲ್ಲವೆಂದು ತಂತ್ರಜ್ಞಾನಗಳಲ್ಲಿ ಬಲಿಷ್ಠ ರಾಷ್ಟ್ರವೆನಿಸಿದ ಇಸ್ರೇಲ್ ಈಗಾಗಲೇ ಘೋಷಿಸಿದೆ. ಅದೀಗಲೇ ಈ ಬೆಂಕಿಯನ್ನು ತಡೆಯಲು ರಷ್ಯಾ, ಸ್ಪೈನ್, ಗ್ರೀಸ್, ಇಟಲಿ, ಈಜಿಪ್ಟ್, ಫ್ರಾನ್ಸ್ ಸೇರಿದಂತೆ ಅನೇಕ ರಾಷ್ಟ್ರಗಳಿಗೆ ಮನವಿ ಮಾಡಿದೆ. ಬೆಂಕಿ ಯಾವಾಗ ತಹಬಂದಿಗೆ ಬರುತ್ತದೆಂದೇ ಹೇಳಲು ಕಷ್ಟ ಎಂದು ಆತಂಕದಿಂದ ಚಡಪಡಿಸುತ್ತಿರುವ ಇಸ್ರೇಲಿನ ರಕ್ಷಣಾ ಸಚಿವ ಯತ್‌ಜಾಕ್ ಅಹರನೋವ್ ಕಾಡ್ಗಿಚ್ಚು ತಮ್ಮ ಹಿಡಿತದಿಂದ ಮೀರಿ ಹೋಗಿದೆ ಎಂದು ತಮ್ಮ ಅಗ್ನಿಶಾಮಕ ದಳದ ಅಸಹಾಯಕತೆಗೆ ಗೋಗರೆಯುತ್ತಿದ್ದಾರೆ. ಅಮೇರಿಕವನ್ನು ಕೈ ಬೆರಳಿನ ಮೊನೆಯಲ್ಲಿ ತನಗೆ ಬೇಕಾದಂತೆ ಪರಿವರ್ತಿಸಬಲ್ಲ ಒಂದು ಶಕ್ತಿ ಕೇವಲ ಒಂದು ಬೆಂಕಿಗೆ ಇಷ್ಟೊಂದು ಹೆದರುವುದೇ?

ಕಾರಣವಿದೆ, ಸೆಮೆಟಿಕ್ ಧರ್ಮವೊಂದರ ಅನುಯಾಯಿಗಳಿಗೆ ಈ ಹೆದರಿಕೆಯ ಹಿಂದಿರುವ ರಹಸ್ಯ ಚೆನ್ನಾಗಿ ಗೊತ್ತಿದೆ. ಮಧ್ಯಪ್ರಾಚ್ಯದ ಕಡೆಯಿಂದ ಏಳುವ ಒಂದು ಅಗ್ನಿ ಲೋಕಾಂತ್ಯಕ್ಕೆ ಪ್ರಮಾಣವಾಗಲಿದೆಯೆಂಬ ಪ್ರವಾದಿಯವರ(ಸ) ನುಡಿಯನ್ನು ಅವರು ಅರಿತಿದ್ದಾರೆ. ಈಗ ಎದ್ದ ಬೆಂಕಿ ಪ್ರವಾದಿ(ಸ) ಸೂಚಿಸಿದ ಬೆಂಕಿ ಆಗಿರಲಿಕ್ಕಿಲ್ಲವೆಂದಾದರೂ ಕಳ್ಳರ ಮನಸ್ಸು ಹುಳ್ಳಹುಳ್ಳಗೆ ಎಂಬಂತೆ ಈ ಬೆಂಕಿ ನಿಂತೇ ಹೋಗದೋ ಎಂಬ ಭಯ ಅವರನ್ನು ಆವರಿಸಿದೆ. ಇಸ್ರೇಲ್ ಒಂದು ಉಂಡಾಡಿ ರಾಷ್ಟ್ರವೆಂಬುದಕ್ಕೆ ಕೇವಲ ರಾಜಕೀಯ ಕಾರಣಗಳಷ್ಟೇ ಉದಾಹರಣೆಯಲ್ಲ. ಇಸ್ರೇಲಿಗಳು ಜಗತ್ತಿನಲ್ಲೇ ಅತಿ ಹೆಚ್ಚು ನೀರು ಪೋಲು ಮಾಡುವವರು. ಅತ್ಯಾಧುನಿಕ ಕಾರ್ಖಾನೆಗಳು ಮತ್ತು ಯುದ್ಧ ದಾಹದಿಂದಾಗಿ ಜಗತ್ತಿನಲ್ಲೇ ಅತಿ ಹೆಚ್ಚು ಇಂಗಾಲವನ್ನು ವಾತಾವರಣಕ್ಕೆ ಸೇರಿಸುತ್ತಿದ್ದಾರೆ. ಮರುಭೂಮಿಯ ಸರಹದ್ದು ಮೊದಲೇ ಅಧಿಕ ತಾಪಮಾನ, ಅದರ ಜೊತೆಗೆ ಸದಾ ಸಿಡಿಯುವ ಬಾಂಬುಗಳು ಮಿಸೈಲುಗಳಿಂದ ಬಿಡುಗಡೆಯಾಗುವ ಉಷ್ಣ ಆ ಪರಿಸರವನ್ನು ಬೆಂಕಿಯಂತೆ ಉರಿಯುವ ಉಷ್ಣದ ತೆಕ್ಕೆಗೆ ದೂಡಿದೆ. ಇಂತಹ ಒಂದು ತಾಪದಿಂದಾಗಿ ಅಲ್ಲಿನ ಕಾರ್ಮೆಲ್ ಕಾಡಿಗೆ ಕಾಡ್ಗಿಚ್ಚು ಹಬ್ಬಿರುವ ಸಾಧ್ಯತೆ ಹೆಚ್ಚು. ದುಂಡಾವರ್ತಿಗಳು ಮಿತಿಮೀರಿದರೆ ಪರಿಸರ ಎಷ್ಟರ ಮಟ್ಟಿಗೆ ಸಹಿಸಬಹುದು? ಖಂಡಿತವಾಗಿಯೂ ಇಸ್ರೇಲ್‌ನಲ್ಲಿ ಹಿಡಿದ ಬೆಂಕಿ ಅದಕ್ಕೆ ಒಂದು ಉದಾಹರಣೆಯೆಂದು ನಿಸ್ಸಂದೇಹವಾಗಿ ಹೇಳುವಾಗಲೂ ದುಃಖವಾಗುತ್ತದೆ. ಯಾಕೆಂದರೆ ಅಲ್ಲಿ ಒಂದು ಇಡೀ ಗ್ರಾಮವೇ ಇಷ್ಟರಲ್ಲಿ ಬೆಂಕಿಗಾಹುತಿಯಾಯಿತು. ಸುತ್ತಮುತ್ತಲಿನ 13 ಸಾವಿರಕ್ಕೂ ಅಧಿಕ ಜನರು ಮನೆ ಮಠ ತೊರೆದು ಸುರಕ್ಷಿತ ಸ್ಥಳಗಳನ್ನು ಅರಸುತ್ತಾ ಹೊರಟು ಹೋಗಿದ್ದಾರೆ. ಭೂಮಿಯೇ ಎಷ್ಟೋ ಪಟ್ಟು ಉರಿದು ಹೋಗುವಂತಹ ಅಣ್ವಸ್ತ್ರಗಳನ್ನು ಅಮೇರಿಕದಿಂದ ಪಡೆದು ಗುಪ್ತವಾಗಿ ಬಚ್ಚಿಟ್ಟ ಇಸ್ರೇಲ್ ಹೇಗೆ ಸುರಕ್ಷಿತವಿದ್ದೀತು ಅಥವಾ ಈ ಬೆಂಕಿ ಹದ ಮೀರಿ ಈ ಅಣ್ವಸ್ತ್ರಗಳನ್ನು ಮುಟ್ಟಿದರೆ ಈ ಇಡೀ ಗೋಳವೇ ಸುರಕ್ಷಿತವಾಗಿ ಉಳಿದೀತೇ? ಆದ್ದರಿಂದ ಈ ಬೆಂಕಿಯನ್ನು ನಂದಿಸುವ ಕರ್ತವ್ಯ ಜಾಗತಿಕ ರಾಷ್ಟ್ರಗಳ ಮೇಲೂ ಇದೆ. ಈ ಜಗತ್ತಿನ ಉಳಿವಿಗಾಗಿ.

ಕಾನ್‌ಕೂನ್‌ನಲ್ಲಿ ಎರಡನೇ ಬಾರಿ ಶೃಂಗ ಸೇರಿರುವುದರ ಉದ್ದೇಶವೇ ಇದು– ಜಗತ್ತು ಉಳಿಯಬೇಕು. ಅಲ್ಲಿ ಎರಡನೇ ಬಾರಿಗೆ 193 ಸದಸ್ಯ ರಾಷ್ಟ್ರಗಳು ಎರಡು ವಾರ ಕೂತು ಚರ್ಚಿಸಲಿಕ್ಕಿವೆ. ಜಗತ್ತು ಉಳಿಯಬೇಕು. ಆದರೆ ಹೇಗೆ ಉಳಿಸುವುದು? ಜಾಗತಿಕ ತಾಪಮಾನ ಮತ್ತು ಹವಾಮಾನದ ಏರಿಳಿತದ ತೀವ್ರ ಪ್ರತ್ಯಾಘಾತಗಳ ಬಗ್ಗೆ ವಿಜ್ಞಾನಿಗಳು ಎಚ್ಚರಿಕೆ ಕೊಟ್ಟು ಎರಡು ದಶಕಗಳು ಅಂದರೆ ಬರೋಬ್ಬರಿ ಇಪ್ಪತ್ತು ವರ್ಷ ಕಳೆಯಿತು. ಈಗಲೂ ಇವರು ಈ ಭೂಮಿ, ಗಾಳಿ, ನೀರು, ವಾತಾವರಣವನ್ನು ಉಳಿಸಬೇಕು. ಆದರೆ ಹೇಗೆ ಎಂದು ಚರ್ಚಿಸುತ್ತಲೇ ಕೂತಿದ್ದಾರೆ. ಅತ್ತ ಇನ್ನೊಂದೆಡೆಯಿಂದ ಸ್ವಾರ್ಥದಿಂದ ಪ್ರಕೃತಿಯನ್ನು ಹಾಳುಗೆಡಹುತ್ತಾ ಬಂದಿದ್ದಾರೆ. ವಿಜ್ಞಾನಿಗಳು ಅಂದೇ ಹಿಮ ಪರ್ವತಗಳು ತಾಪದ ಹೆಚ್ಚಳದಿಂದಾಗಿ ಕುದಿಯುತ್ತಿದೆ, ಈಗ ಕಾಡಿಗೆ ಬೆಂಕಿ ಹಿಡಿದಿರುವಂತಹ ಪ್ರಾಕೃತಿಕ ವಿಕೋಪಗಳು ಒಂದರ ನಂತರ ಒಂದರಂತೆ ಉಂಟಾಗುತ್ತಲೇ ಇವೆ, ಜೀವಜಾಲಗಳು ಶೀಘ್ರಗತಿಯಿಂದ ನಾಶವಾಗುತ್ತಿವೆ. ಕೃಷಿ-ಆಹಾರ ಕ್ಷೇತ್ರ

ವಿದೇಶರಂಗ

ಸಂದಿಗ್ಧ ದತ್ತ ಹೊರಳುತ್ತಿದೆ, ಪ್ರತಿವರ್ಷವೂ ಭೂಮಿ ಹೆಚ್ಚೆಚ್ಚು ಸುಡುತ್ತಾ ಹೋಗುತ್ತಿದೆ ಎಂದು ಎಚ್ಚರಿಸಿದ್ದರು. ಎಚ್ಚರಿಸಿದ್ದರಿಂದ ಸಿಕ್ಕ ಫಲವೇನೆಂದರೆ ಈ ಸಮಯ ಕಳೆಯುವ ಹಾಳು ಶೃಂಗಗಳು ಮಾತ್ರವೇ. ಭೂಮಿ ವಾತಾವರಣವನ್ನು ತಂಪಾಗಿಡಲು ಯಾವ ಕೆಲಸವೂ ಕಳೆದ ಇಪ್ಪತ್ತು ವರ್ಷಗಳಿಂದ ನಡೆಯಲಿಲ್ಲ. ಬದಲಾಗಿ ಅಮೇರಿಕ-ಇಸ್ರೇಲ್ ಮುಂತಾದ ರಾಷ್ಟ್ರಗಳು ಬಡ ರಾಷ್ಟ್ರಗಳಿಗೆ ಲಗ್ಗೆ ಹಾಕಿ ತಮ್ಮ ಕಾರ್ಖಾನೆಗಳನ್ನು ತೆರೆದು ವಾತಾವರಣವನ್ನು ಕೆಡಿಸಿದವು. ಅನಗತ್ಯ ಯುದ್ಧ ಮಾಡಿ ಬಾಂಬುಗಳಿಂದ ಭೂಮಿ ಮನುಷ್ಯ ಜೀವಜಾಲವನ್ನೇ ಸುಟ್ಟು ಹಾಕಿದವು. ಅಂದರೆ ಜಗತ್ತನ್ನು ರಕ್ಷಿಸುವ ಬದಲು ಕೆಡಿಸುವ ಕೆಲಸಕ್ಕೇ ಕೈ ಹಾಕಿದವು. ಅದರ ಪರಿಣಾಮವಾಗಿ ಅಮೇರಿಕದಲ್ಲಿ, ಮೆಕ್ಸಿಕೋದಲ್ಲಿ, ಏಷ್ಯಾ ಖಂಡದಲ್ಲಿ ಸುನಾಮಿ, ಚಂಡಮಾರುತ, ಭೂಕಂಪ, ಕಾಡುಗಳಿಗೆ ಬೆಂಕಿ ಇತ್ಯಾದಿ ಘಟನಾವಳಿಗಳು ಸತತ ನಡೆಯುತ್ತಾ ಇವೆ. ಈಗ ಇಸ್ರೇಲಿನದ್ದು ಸೆಮಿಟಿಕ್ ಧರ್ಮಗಳು ಸೂಚಿಸಿರುವುದಕ್ಕೆ ಹೋಲುವ ಒಂದು ಪ್ರಕೃತಿ ವಿಕೋಪ. ಆದ್ದರಿಂದ ಆ ಕುರಿತು ತಲೆ ಕೆಡಿಸಿಕೊಳ್ಳುತ್ತಿದೆ ಎಂದೆನಿಸುತ್ತಿದೆ.

ಕಾನ್‌ಕೂನ್ ಶೃಂಗದಲ್ಲಿ ಏನೇ ನಿರ್ಣಯವಾಗಲಿ ಇಸ್ರೇಲಿನ ಬೆಂಕಿ ತಹಬಂದಿಗೆ ಬರಬಹುದೆನ್ನಿ. ಆದರೆ ಬಲಾಢ್ಯ ರಾಷ್ಟ್ರಗಳು ವಾತಾವರಣವನ್ನು ರಕ್ಷಿಸಲು ಎಷ್ಟು ಯೋಚಿಸಿದೆ ಎಂಬುದು ಪ್ರಶ್ನೆಯಾಗಿದೆ. ಜಗತ್ತಿನ ವಾತಾವರಣದ ರಕ್ಷಣೆಗಾಗಿ ಕ್ಯೂಟೋ ಒಡಂಬಡಿಕೆಯೊಂದು ರೂಪುಗೊಂಡಿತು. ಅದರಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಪ್ರಕೃತಿಗೆ ಅನಿಲ ಸೋರದಂತೆ ನೋಡಿಕೊಳ್ಳುವೆವೆಂದು ಸಹಿ ಹಾಕಿದವು. ನೋಡಿ, ಹಿರಿಯಣ್ಣ ಅಮೇರಿಕ ಅದಕ್ಕೂ ಸಹಿ ಹಾಕಲಿಲ್ಲ. ಅಂದರೆ ಜಗತ್ತನ್ನು ರಕ್ಷಿಸುವ ಹೊಣೆ ತನಗಿಲ್ಲ ಎಂದು ಅದು ಭಾವಿಸಿದಂತಿದೆ. ಜಗತ್ತನ್ನೇ ಮೇಯಲು ಹೊರಟ ರಾಷ್ಟ್ರ ಅದು. ಆದ್ದರಿಂದ ತಮ್ಮ ಕಾರ್ಖಾನೆ ಇತ್ಯಾದಿಗಳನ್ನು ಜಗತ್ತಿಗೆ ವಿಸ್ತರಿಸಿ ಅಲ್ಲಿನ ಹವಾಮಾನವನ್ನು ಕೆಡಿಸುವ ಕೆಲಸವನ್ನು ಮಾಡುತ್ತಿದೆ. ಬಹುಶಃ ಜಗತ್ತಿನ ಪ್ರಕೃತಿ ವಿಕೋಪಕ್ಕೆ ಇಂತಹ ಉದ್ಧಟತನಗಳಿಗೆ ಪಾತ್ರ ಇದೆ.

ಮಾನವ ದೈವದತ್ತವಾಗಿ ಬಂದ ಅನುಕೂಲತೆಗಳ ಮೇಲೆ ಅಕ್ರಮ, ಅತ್ಯಾಚಾರಕ್ಕಿಳಿದರೆ ಪಾಠ ಕಲಿಸಲು ದೈವಿಕ ಶಕ್ತಿಯಿಂದಲ್ಲದೆ ಇನ್ನಾರಿಂದ ಸಾಧ್ಯ. ಇಸ್ರೇಲ್-ಅಮೇರಿಕಗಳ ಎಲ್ಲ ಉದ್ಧಟತನಗಳನ್ನು ಈ ಜಗತ್ತು ಅನುಭವಿಸುತ್ತಿದೆ. ಪ್ರಾಕೃತಿಕ ನೀತಿಗೆ ಮೀರಿ ಹೋದಾಗಲೆಲ್ಲ ಪ್ರಕೃತಿಯೇ ಪಾಠ ಕಲಿಸಿದ ಉದಾಹರಣೆ ಎಷ್ಟೋ ಇದೆ. ಒಂದು ಉದಾಹರಣೆಯನ್ನು ಎತ್ತಿಕೊಳ್ಳುವುದಾದರೆ ರೋಮ್‌ನ ಪೊಂಪೈ ನಗರದಲ್ಲಿ ಪ್ರಕೃತಿ ವಿರೋಧಿ ಲೈಂಗಿಕ ದುರಾಚಾರ ಸೀಮೆ ಮೀರಿತ್ತು. ಸಲಿಂಗ ಕಾಮ ಇತ್ಯಾದಿಗಳು ಹಗಲು ರಾತ್ರಿಯೆಂಬ ಭೇದವಿಲ್ಲದೆ ಎಗ್ಗಿಲ್ಲದೆ, ಸಂಬಂಧಗಳಿಗೂ ಬೆಲೆಯಿಲ್ಲದಂತೆ ಮುಂದುವರಿದಾಗ ಅಲ್ಲಿನ ಪರ್ವತವೊಂದರಿಂದ ಜ್ವಾಲಾಮುಖಿ ಸ್ಫೋಟವಾಗಿ ಇಂತಹ ಕ್ರಿಯೆಯಲ್ಲಿ ನಿರತರಾದಾಗಲೇ ಅಂದಿನ ಜನರನ್ನು ಆಹುತಿ ಪಡೆಯಿತು. ಲಾವಾರಸ ಸ್ಫೋಟದ ಸದ್ದು ಕಿವಿಗೆ ಬಡಿದಿದ್ದರೂ ಅವರು ಲೈಂಗಿಕ ಕ್ರಿಯೆಯಿಂದ ಬಿಟ್ಟು ಎದ್ದಿರಲಿಲ್ಲ. ಇದೇ ಸ್ಥಿತಿಯಲ್ಲಿ ಅವರು ಆಹುತಿಯಾದರು. ನಗರಕ್ಕೆ ನಗರವೇ ನಾಶವಾದವು. ಸತ್ತ ದೇಹಗಳು ಲೈಂಗಿಕ ಕ್ರಿಯೆಯಲ್ಲಿ ನಿರತವಾದ ಸ್ಥಿತಿಯಲ್ಲಿ ಪತ್ತೆಯಾದವು. ಅಂದರೆ ಇವರ ಅಹಂಕಾರ, ದುರಾಚಾರವನ್ನು ನಿರ್ನಾಮ ಮಾಡುವುದಕ್ಕೆ ಕೇವಲ ಪ್ರಕೃತಿಯಿಂದ ಮಾತ್ರ ಸಾಧ್ಯವಾಗಿದೆ. ಇಂದು ಕೂಡಾ ಜಗತ್ತಿನ ಮೇಲೆ ದುರಾಚಾರವೆಸಗುವ ಕೃತ್ಯ ಭರದಿಂದ ಸಾಗುತ್ತಿದೆ. ಹಾಗಿರುವಾಗ ಇಸ್ರೇಲ್‌ನಲ್ಲಿ ಎದ್ದಿರುವ ಬೆಂಕಿಗೆ ಯಾರಿಗೂ ಹೆದರಿಕೆಯಾಗಬಹುದು. ಸ್ವತಃ ಇಸ್ರೇಲಿಗೂ ಆ ಹೆದರಿಕೆಯಿದೆ ಎಂಬುದಕ್ಕೆ ಅದಿಂದು ಒಂದು ಕಾಡಿನ ಬೆಂಕಿಯನ್ನು ನಂದಿಸಲು ಕೈಲಾಗದವರಂತೆ ಜಾಗತಿಕ ಸಮುದಾಯದ ಸಹಾಯಕ್ಕೆ ಕೋರಿಕೆ ಯಿಟ್ಟಿರುವುದೇ ಸ್ಪಷ್ಟ ಉದಾಹರಣೆಯಾಗಿದೆ. ಈಗ ಕಾಡಿನ ಬೆಂಕಿ ನಂದಿಸುವುದಕ್ಕಾಗಿ ಬ್ರಿಟನ್, ಫ್ರಾನ್ಸ್, ಗ್ರೀಸ್, ಸೈಪ್ರೆಸ್, ಬವೋರಿಯಾ, ಇಟಲಿ, ಸ್ಪೇನ್, ಟರ್ಕಿ, ಕ್ರೊವೇಶಿಯಾ ಮತ್ತು ಫ್ರಾನ್ಸ್ ಹೀಗೆ ಅನೇಕ ರಾಷ್ಟ್ರಗಳ ವಿಮಾನಗಳು ಇಸ್ರೇಲ್‌ಗೆ ಬಂದಿಳಿದಿವೆ. ಅವೆಲ್ಲ ಸೇರಿ ಬೆಂಕಿಯನ್ನು ನಂದಿಸಲು ಯಶಸ್ವಿಯಾಗಬಹುದು ಎಂದೇ ಆಶಿಸೋಣ. ಕಾನ್‌ಕೂನ್‌ನಲ್ಲಿ ಕೂತು ವಾತಾವರಣ, ಪರಿಸರವನ್ನು ರಕ್ಷಿಸುವುದಕ್ಕೆ ಎರಡು ವಾರ ಚರ್ಚಿಸುವ 193 ರಾಷ್ಟ್ರಗಳಿಗೆ ಖಂಡಿತವಾಗಿ ಈ ಬೆಂಕಿ ಪಾಠಭೋದಕವಾಗಿದೆ. ಕ್ಯೂಟೋ ಒಪ್ಪಂದಕ್ಕೆ ಸಹಿ ಹಾಕದ ಅಮೇರಿಕ ಮತ್ತು ಅದರ ಹಿಂಬಾಲಕ ಇಸ್ರೇಲ್ ಜಗತ್ತಿಗೆ ಬೆದರಿಕೆಯಾಗಿದೆ ಎಂಬ ಒಂದು ತೀರ್ಮಾನಕ್ಕೆ ಬರಲು ಅವರಿಗೆ ಸಾಧ್ಯವಾದರೆ ವಸ್ತುಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ಸಮರ್ಥರಾಗಿದ್ದಾರೆಂದು ಅರ್ಥ. ಅಮೇರಿಕ ಕೊಟ್ಟಿರುವ ಅಣ್ವಸ್ತ್ರಗಳನ್ನು ಆಹುತಿ ಪಡೆದು ಇಸ್ರೇಲಿನೊಂದಿಗೆ ಈ ಜಗತ್ತನ್ನೇ ಸುಟ್ಟು ಬಿಡುತ್ತೇನೆಂದು ಅಲ್ಲಿನ ಕಾಡ್ಗಿಚ್ಚು ಸವಾಲು ಹಾಕುತ್ತದೆಯಲ್ಲವೇ? ಈ ಬೆಂಕಿ ನಂದಿದರೂ ಕಾರ್ಖಾನೆ ಇತ್ಯಾದಿಗಳಿಂದ ತಾಪ ಹೆಚ್ಚಿ ಹಿಮಪರ್ವತಗಳು ಕರಗಿದರೂ ಭೂಮಿ ಉಳಿಯಲಾರದು. ಭೂಮಿಯೇ ಇಲ್ಲದ ಮೇಲೆ ಯಾರೂ ಉಳಿಯುವುದಿಲ್ಲ. ಕಾನ್‌ಕೂನ್ ಶೃಂಗಕ್ಕೆ ಅಮೇರಿಕ-ಇಸ್ರೇಲ್ ಮುಂತಾದ ಬಲಾಢ್ಯ ರಾಷ್ಟ್ರಗಳಿಗೆ ಈ ಕಿವಿ ಮಾತು ಹೇಳಲು ಸಾಧ್ಯವಾಗಬೇಕು. ಕಾಡ್ಗಿಚ್ಚು ಪ್ರಕೃತಿ ವಿಕೋಪಗಳಿಂದ ಅಮೇರಿಕ-ಇಸ್ರೇಲ್ ಸಹಿತ ಪಾಠ ಕಲಿಯಲಿ. ಅಮೇರಿಕ-ಇಸ್ರೇಲ್, ಎಂದೂ ಕೂಡಾ ಭೂಮಿ-ಪ್ರಕೃತಿಗಿಂತ ದೊಡ್ಡದಲ್ಲವೆಂಬುದನ್ನು ಇಸ್ರೇಲ್‌ನ ಉತ್ತರ ಭಾಗದ ಕಾರ್ಮೆಲ್ ಕಾಡಿಗೆ ಹಿಡಿದು ವ್ಯಾಪಿಸಿದ ಬೆಂಕಿ ಸಾರುತ್ತಿದೆ. ಅದಕ್ಕೆ ಮಾನವ ಮತ್ತು ಜೀವ ಸಂಕುಲಗಳ ಮೇಲೆ ಕೃಪೆ ಬರಲಿ. ಅದು ನಿಯಂತ್ರಣ ಹೊಂದಲಿ ಎಂದು ಮಾತ್ರ ನಾವು ಹಾರೈಸಬೇಕಾಗಿದೆ.

## ವಿಶ್ವ ವಿದ್ವಾಂಸರ ಸಮಿತಿಯಲ್ಲಿ ಮೂವರು ಮಹಿಳೆಯರು

**ದೋಹಾ: ಜಗತ್ಪ್ರಸಿದ್ಧ ವಿದ್ವಾಂಸರಾದ ಡಾ। ಯೂಸುಫುಲ್ ಕರ್ಝಾವಿಯವರ ನೇತೃತ್ವದಲ್ಲಿರುವ ವಿಶ್ವ ಇಸ್ಲಾಮಿ ವಿದ್ವಾಂಸರ ಒಕ್ಕೂಟದಲ್ಲಿ ಮೊತ್ತ ಮೊದಲ ಬಾರಿಗೆ ಮೂವರು ಮಹಿಳೆಯರು ಸ್ಥಾನ ಪಡೆದಿದ್ದಾರೆ. ಝೈನಬ್ ಅಬ್ದುಲ್ ಅಝೀಝ್ (ಫ್ರೆಂಚ್ ಭಾಷಾ ಉಪನ್ಯಾಸಕಿ ಕೈರೋ ಯುನಿವರ್ಸಿಟಿ), ಡಾ। ಫಾತಿಮ ನಫೀಸ್ (ಸೌದಿಯ ಕುರ್‌ಆನ್–ಪ್ರವಾದಿ ಚರ್ಯೆಯ ಅಧ್ಯಯನ ಕೇಂದ್ರದ ಮಹಿಳಾ ವಿಭಾಗದ ಅಧ್ಯಕ್ಷೆ), ಡಾ। ನಸೀಹ ಮಆರಿಜ್ ಮೊರಕ್ಕೊ (ಮುಹಮ್ಮದ್ ಪ್ರಥಮ ಯುನಿವರ್ಸಿ ಟಿಯ ಇಸ್ಲಾಮಿ ಅಧ್ಯಯನ ವಿಭಾಗದ ಉಪನ್ಯಾ ಸಕಿ) ಇವರು ಆಯ್ಕೆಯಾದ ಮಹಿಳಾ ಮಣಿಗಳು. ಕತರ್‌ನ ರಾಜಧಾನಿ ದೋಹಾದಲ್ಲಿ ನಡೆದ ಸಭೆಯಲ್ಲಿ ಇವರನ್ನು ಆಯ್ಕೆ ಮಾಡಲಾಯಿತು.**

## ಈಜಿಪ್ಟ್: ಇಸ್ಲಾಮಿ ಚಾನೆಲುಗಳಿಗೆ ವಿಧಿಸಿದ ತಡೆ ರದ್ದು

**ಕೈರೋ:** ಈಜಿಪ್ಟ್‌ನ ದೂರದರ್ಶನ ನಿಯಂತ್ರಣಾಲಯವು ಕೆಲವು ಇಸ್ಲಾಮಿ ಚಾನೆಲುಗಳಿಗೆ ವಿಧಿಸಿದ್ದ ತಡೆಯನ್ನು ಹಿಂಪಡೆದಿದೆ. ನಿಷೇಧಕೊಳ್ಳಗಾಗಿದ್ದ ಅಲ್‌ರಹಮ್ ಚಾನೆಲ್ 'ಕಾಲ' ಎಂಬ ಹೆಸರಿನಲ್ಲಿ ಮತ್ತೆ ಹೊರಬರುತ್ತಿದೆ. ಅಲ್ ಹಿಕ್ಮ, ವಿಸ್ವಾಲ್ ಎಂಬ ಚಾನೆಲ್‌ಗಳೂ ತನ್ನ ಮರು ಪ್ರಸಾರವನ್ನು ಆರಂಭಿಸಿವೆ. ಅನ್ನಾಸ್, ಖಲೀಜಿಯ್ಯ, ಹಾಫಿಲ್ ಮುಂತಾದವು ಶೀಘ್ರದಲ್ಲೇ ತನ್ನ ಮರು ಪ್ರಸಾರವನ್ನು ಆರಂಭಿಸಲಿದೆ.

# ಹಾಗಾದರೆ ಅದರರ್ಥ ಪ್ರವಾದಿಗಳೆಲ್ಲ ಪರಾಜಿತರು ಎಂದೇ?

ಜಗತ್ತಿನಲ್ಲಿ ಅತ್ಯಂತ ಉತ್ತಮ ವ್ಯಕ್ತಿತ್ವ ಹೊಂದಿದವರು ಯಾರಾಗಿದ್ದರು? ನಿಸ್ಸಂಶಯವಾಗಿ ಅವರು ಪ್ರವಾದಿಗಳೇ ಆಗಿದ್ದಾರೆ. ವಿಭಿನ್ನ ಕಾಲ-ದೇಶಗಳಲ್ಲಿ ಆಗಮಿಸಿದ ಪ್ರವಾದಿಗಳು ಒಂದು ಲಕ್ಷಕ್ಕಿಂತಲೂ ಅಧಿಕವಿದ್ದಾರೆ ಎಂಬುದು ಇತಿಹಾಸದ ಉಲ್ಲೇಖವಾಗಿದೆ. ಪ್ರತಿಯೊಂದು ಸಮುದಾಯದಲ್ಲೂ ಪ್ರವಾದಿತ್ವ ಪದವಿಗೆ ಅರ್ಹರಾ ದವರು ಆ ಸಮುದಾಯದ ಉನ್ನತ ವ್ಯಕ್ತಿತ್ವ ಹೊಂದಿದವರಾಗಿದ್ದರು. ಅವರನ್ನು ಆರಿಸಿದ್ದು ಅಲ್ಲಾಹನಾಗಿದ್ದಾನೆ.

ಆ ಪ್ರವಾದಿಗಳು ತನ್ನ ಸಮುದಾಯಕ್ಕೆ ಏನೆಲ್ಲಾ ಬೋಧಿಸಿದ್ದಾರೆ? ಜನರು ಅವರೊಂದಿಗೆ ಯಾವ ರೀತಿಯಲ್ಲಿ ವ್ಯವಹರಿಸಿದರು? ಯಾರೆಲ್ಲ ಆ ಪ್ರವಾದಿಗಳನ್ನು ಅನುಸರಿಸಿದರು? ಯಾವೆಲ್ಲಾ ಪ್ರವಾದಿಗಳಿಗೆ ಜನರ ಬೆಂಬಲವೂ, ಬಹುಮತವೂ

ಹಾದಿ

ಲಭಿಸಿದೆ? ಈ ಎಲ್ಲಾ ಪ್ರಶ್ನೆಗಳಿಗಿರುವ ಉತ್ತರವು ಕೆಲವರಿಗೆ ಇತಿಹಾಸದ ವಿವರಣೆಗಳಿಂದ ಲಭಿಸ ಬಹುದು. ಆದರೆ ಕ್ರಾಂತಿಕಾರಿಗಳಿಗೆ ಈ ಪ್ರಶ್ನೆಗಳ ಉತ್ತರವು, ಪ್ರಸಕ್ತ ನಡೆಯುತ್ತಿರುವ ಆಗುಹೋಗು ಗಳನ್ನು ನಿಭಾಯಿಸಲೂ ಸಮಸ್ಯೆಗಳನ್ನು ಎದುರಿ ಸಲೂ ಸಹಾಯಕವಾಗಲಿದೆ.

**ಒಳಿತುಗಳ ಪ್ರತಿರೂಪಗಳು:**

ಪ್ರವಾದಿಗಳು ಜಗತ್ತಿನ ಎಲ್ಲಾ ಒಳಿತುಗಳ ಪ್ರತಿರೂಪಗಳಾಗಿದ್ದರು. ಅವರ ಘೋಷಣೆಯು ಕೇವಲ ಏಕದೇವ ವಿಶ್ವಾಸ ಮಾತ್ರವಾಗಿತ್ತು. ಹೆತ್ತವರ ಸೇವೆ ಮಾಡುವುದು ಮತ್ತು ಗೌರವಿಸು ವುದು, ಕೌಟುಂಬಿಕ ಸಂಬಂಧವನ್ನು ಬೆಳೆಸುವುದು, ನೆರೆಮನೆ ಬಾಂಧವ್ಯವನ್ನು ಭದ್ರಗೊಳಿಸುವುದು, ಬಡವರು, ಅನಾಥರು, ಶೋಷಿತರು, ದಾರಿ ಹೋಕರು, ಸಾಲದಿಂದ ಕಷ್ಟ ಅನುಭವಿಸುತ್ತಿರು ವವರು, ಸಮಾಜದ ದುರ್ಬಲ ಜನರಿಗಾಗಿ ಧ್ವನಿ ಎತ್ತುವುದು; ಪ್ರಾರ್ಥನೆ, ದಾನಧರ್ಮ, ಉಪವಾಸ ಆಚರಣೆ ಮೊದಲಾದ ಕಡ್ಡಾಯವೂ ಐಚ್ಛಿಕವೂ ಆದ ಕರ್ಮಗಳನ್ನು ಅನುಷ್ಠಾನಗೊಳಿಸು ವುದು; ಮಾನವ ಪ್ರೇಮ, ಕರುಣೆ, ಸಮಾನತೆ, ನ್ಯಾಯ ಸಹಕಾರ ಒಳಿತಿಗಾಗಿರುವ ಹೋರಾಟ ಮೊದಲಾದ ಉನ್ನತ ಮೌಲ್ಯಗಳನ್ನು ಅವರು ಭೂಮಿಯಲ್ಲಿ ಸ್ಥಾಪಿಸಲು ಅಹೋರಾತ್ರಿ ಪ್ರಯತ್ನಿಸಿದರು.

ಕೆಡುಕುಗಳ ಮತ್ತು ಅದನ್ನು ಸಂಸ್ಥಾಪಿಸಲು ಪ್ರಯತ್ನಿಸುತ್ತಿರುವವರ ವಿರುದ್ಧ ಅವರು ಯುದ್ಧ ಸಾರಿದರು. ಅವರ ಹೋರಾಟದಲ್ಲಿ ದೇವಧಿಕ್ಕಾರ ಮತ್ತು ಬಹುದೇವಾರಾಧನೆಗಾಗಿತ್ತು. ಮೊದಲ ಆದ್ಯತೆ. ಹೆತ್ತವರನ್ನು ಧಿಕ್ಕರಿಸುವುದು, ದುರ್ಬಲ ಜನವಿಭಾಗವನ್ನು ಕಡೆಗಣಿಸುವುದು, ಮನುಷ್ಯತ್ವಕ್ಕೆ ಭೂಷಣವಲ್ಲದ್ದೂ ದೇವಾಜ್ಞೆಗೆ ವಿರುದ್ಧವಾದದ್ದೂ ಎಂದು ಅವರು ಜನರಿಗೆ ಬೋಧಿಸಿದರು. ಮದ್ಯಪಾನ, ವ್ಯಭಿಚಾರ, ಭ್ರಷ್ಟಾಚಾರ, ಬಡ್ಡಿ, ಕೊಲೆ, ವಂಚನೆ, ದರೋಡೆ, ಕೋಮುವಾದ, ಸಲಿಂಗರತಿ ಮೊದಲಾದ ಯಾವುದೇ ದುರ್ಗುಣ ಗಳೊಂದಿಗೆ ಅವರು ರಾಜಿಮಾಡಿಕೊಳ್ಳಲಿಲ್ಲ. ಯಾವುದಾದರೂ ಕೆಡುಕಿನ ವಿರುದ್ಧ ಅವರು ಮೌನ ತಾಳಿದ ಇತಿಹಾಸವಿದೆಯೇ?

ಪ್ರವಾದಿಗಳಿಗೆ ಸಹಾಯ ಮಾಡಲು ಅಲ್ಲಾಹನೂ ಮಲಕ್‌ಗಳೂ ಇದ್ದರು. ಇಬ್ಲೀಸ್ ಅವರ ಬದ್ಧ ವೈರಿಯಾಗಿದ್ದನು. ಪ್ರವಾದಿಗಳು ಜನರನ್ನು ಕೆಡುಕಿನ ಅಂಧಕಾರದಿಂದ ಒಳಿತಿನಡೆಗೆ ಆಹ್ವಾನಿಸಿದರು. (ಅಲ್ ಹದೀದ್: 9)

ಎಲ್ಲಾ ಒಳಿತುಗಳ ಕೇಂದ್ರವಾಗಿದ್ದ ಪ್ರವಾದಿ ಗಳನ್ನು ಜನರು ಬೆಂಬಲಿಸಬೇಕಾಗಿತ್ತು. ಎಲ್ಲಾ ಉತ್ತಮ ಮೌಲ್ಯಗಳನ್ನು ಹೊಂದಿದ ಈ ಧರ್ಮ ಸಂಸ್ಥಾಪಕರನ್ನು ಜನರು ಹಾರ್ದಿಕವಾಗಿ ಸ್ವೀಕರಿಸ ಬೇಕಾಗಿತ್ತು. ನ್ಯಾಯವನ್ನೂ ಸಮಾನತೆ ಯನ್ನೂ ಪ್ರತಿಪಾದಿಸಿದ ಅವರಿಗೆ ಆಡಳಿತದ ಚುಕ್ಕಾಣಿ ಲಭಿಸಬೇಕಾಗಿತ್ತು. ಆದರೆ ಅವರಿಗೆ ಇದ್ಯಾವುದೂ ಲಭಿಸಲಿಲ್ಲ. ಬದಲಾಗಿ ಅವರು ಜೀವನದಲ್ಲಿ ಹಲವಾರು ಶೋಷಣೆಗಳಿಗೆ ಒಳಗಾದರು.

ಪವಿತ್ರ ಕುರ್‌ಆನ್ ವಿವರಿಸುವಂತೆ ಜನರ ಬೆಂಬಲ ಲಭಿಸಿದ ಪ್ರವಾದಿಗಳು ಕೆಲವರು ಮಾತ್ರ. ಜನತೆಯ ನಾಯಕತ್ವ ಮತ್ತು ನಾಡಿನ ಅಧಿಕಾರ ಗಳಿಸಲು ಸಾಧ್ಯವಾದವರು ಬಹು ವಿರಳ. ದಿವ್ಯ ಸಂದೇಶ ಮತ್ತು ಮಾನವಾತೀತ ದೃಷ್ಟಾಂತ ಗಳೊಂದಿಗೆ ಆಗಮಿಸಿದ ಪ್ರವಾದಿಗಳು ಧಿಕ್ಕಾರಕ್ಕೆ ಒಳಗಾದ ಉದಾಹರಣೆಯೇ ಹೆಚ್ಚು. ಹಾಗಾದರೆ ಪ್ರವಾದಿಗಳ ಹಿಂಬಾಲಕರಾಗಿ, ಅವರು ಕಲಿಸಿರುವ ಮೌಲ್ಯಗಳನ್ನೂ ಆದರ್ಶಗಳನ್ನೂ ಮುನ್ನಡೆಸುತ್ತಾ ಸಾಗುತ್ತಿರುವವರಿಗೆ ಜನತೆಯ ಬೆಂಬಲ ಲಭಿಸುತ್ತಿಲ್ಲ ಎಂಬುದರಲ್ಲಿ ಆಶ್ಚರ್ಯವೇನಿದೆ?

ಪ್ರವಾದಿ ಮುಹಮ್ಮದ್(ಸ), ಯೂಸುಫ್(ಅ), ಸುಲೈಮಾನ್(ಅ), ದಾವೂದ್(ಅ) ಮೊದಲಾದವ ರಿಗೆ ಜನತೆಯ ನಾಯಕತ್ವವನ್ನೂ ನಾಡಿನ ಅಧಿಕಾರವನ್ನೂ ಗಳಿಸಲು ಸಾಧ್ಯವಾಗಿತ್ತು. ಹಲವು ದೌರ್ಜನ್ಯಕ್ಕೆ ಒಳಗಾದ ನಂತರ ಪ್ರವಾದಿ ಯವರ(ಸ) ಕ್ರಾಂತಿಯು ಯಶಕಂಡಿತು.

**ಜನರ ಪ್ರತಿಕ್ರಿಯೆ ಹೇಗಿತ್ತು?**

ಪವಿತ್ರ ಕುರ್‌ಆನನ್ನು ಒಮ್ಮೆ ಓದಿ ನೋಡಿ. ಮಹಾನ್ ಪ್ರವಾದಿಗಳೊಂದಿಗೆ ಜನರು ಪ್ರತಿಕ್ರಿಯಿ ಸಿದ ರೀತಿ ನೋಡಿ ನಮಗೆ ಆಶ್ಚರ್ಯವಾಗ ಬಹುದು. ಪ್ರಪಂಚದ ಸೃಷ್ಟಿಕರ್ತನೂ ಸರ್ವಶಕ್ತನೂ ಆದ ಅಲ್ಲಾಹನು ಜನರಿಂದ ಆರಿಸಿದ ಆ ಸಂದೇಶ ವಾಹಕರನ್ನು ಜನರು ಧಿಕ್ಕರಿಸಿದರು. ಅವರಿಂದ ವಿಮುಖರಾದರು. ಅವರನ್ನು ಹುಚ್ಚ, ಜಾದೂಗಾರ, ಕವಿ, ಜೋತಿಷ್ಯ ಎಂದು ಕೂಗಿ ಕರೆದು ಸಮಾಜದಲ್ಲಿ ಒಡಕುಂಟುಮಾಡುವವರು ಎಂಬ ಪಟ್ಟ ಕಟ್ಟಿದರು. ಅವರನ್ನು ತಮ್ಮ ನಾಡಿನಿಂದ ಓಡಿಸಿದರು. ಕೆಲವರನ್ನು ಕೊಂದು ಹಾಕಿದರು.

ಅಲ್ಲಾಹನು ಆ ಇತಿಹಾಸವನ್ನೆಲ್ಲಾ ಇಸ್ಲಾಮಿನ ಹೋರಾಟಗಾರರಿಗೆ ಹಲವು ಸಂದರ್ಭಗಳಲ್ಲೂ ವಿಭಿನ್ನ ಶೈಲಿಗಳಲ್ಲೂ ಮತ್ತೆ ಮತ್ತೆ ನೆನಪಿಸಿದ್ದಾನೆ. ಅಲ್ಲಾಹನು ಹೇಳುತ್ತಾನೆ, "ನಾವು ಮೂಸಾರಿಗೆ ಗ್ರಂಥವನ್ನು ನೀಡಿದೆವು. ತರುವಾಯ ನಿರಂತರ ಸಂದೇಶವಾಹಕರನ್ನು ಕಳುಹಿಸಿದೆವು. ಕೊನೆಗೆ ವ್ಯಕ್ತವಾದ ದೃಷ್ಟಾಂತಗಳನ್ನು ಕೊಟ್ಟು ಮರ್ಯಮರ ಪುತ್ರ ಈಸಾರನ್ನು ಕಳುಹಿಸಿ ಪವಿತ್ರಾತ್ಮನ ಮೂಲಕ ಅವರಿಗೆ ಸಹಾಯ ನೀಡಿದೆವು. ದೇವ ಸಂದೇಶವಾಹಕರು ನಿಮ್ಮ ಚಿತ್ತಾಕಾಂಕ್ಷೆಗಳಿಗೆ ವಿರೋಧವಾದುದನ್ನು ನಿಮಗೆ ತಂದಾಗಲೆಲ್ಲ ನೀವು ಅವರಿಗೆದುರು **(6ನೇ ಪುಟಕ್ಕೆ)**

# ಹೆಂಡ ಕುಡಿಯುವುದು ಅಪರಾಧವಲ್ಲ ಮಾಂಸ ತಿನ್ನುವುದು ಅಪರಾಧವೆ?



ಪ್ರಪಂಚದಲ್ಲಿ ಸೃಷ್ಟಿಕರ್ತನನ್ನು ನಂಬುವವರು ಇದ್ದಾರೆ, ನಂಬದೇ ಇರುವವರು ಇದ್ದಾರೆ. ಎಲ್ಲರೂ ಬಾಳಿ ಬದುಕುತ್ತಿದ್ದಾರೆ. ಪ್ರಕೃತಿಯು ಸರಿಸಮಾನವಾಗಿ, ಯಾವ ಭೇದವೂ ತೋರದೆ ಎಲ್ಲರಿಗೂ ಗಾಳಿ, ಬೆಳಕು, ನೀರು ಮತ್ತು ಭೂಮಿಯನ್ನು ಧಾರೆ ಎರೆಯುತ್ತಿದೆ. ಪ್ರಕೃತಿಯಲ್ಲಿ ತನ್ನದೇ ಆದ ನೀತಿ ನಿಯಮಗಳಿವೆ. ಉದಾಹರಣೆಗೆ ಕಾಡಿನಲ್ಲಿ ಒಂದು ಪ್ರಾಣಿ ಇನ್ನೊಂದು ಪ್ರಾಣಿಯನ್ನು ತಿಂದು ಜೀವಿಸು ತ್ತದೆ. ರೇಷ್ಮೆಯ ಹುಳು ತನ್ನ ಜೀವವನ್ನು ಕಳೆದುಕೊಂಡು ನಮಗೆ ರೇಷ್ಮೆ ಗೂಡನ್ನು ನೀಡುತ್ತದೆ. ರೇಷ್ಮೆ ಸೀರೆಯನ್ನು ಎಲ್ಲಾ ಧರ್ಮದವರು ಬಹಳ ಪ್ರೀತಿಯಿಂದ ಉಡುತ್ತಾರೆ. ಜೇನುಹುಳುಗಳು ಸಾವಿರಾರು ಹೂಗಳಿಂದ ರಸವನ್ನು ಸಂಗ್ರಹ ಮಾಡಿ ಜೇನು ಗೂಡನ್ನು ಕಟ್ಟುತ್ತವೆ. ತನಗಾಗಿ ಕಷ್ಟಪಟ್ಟು ಸೇರಿಸಿದ ಜೇನನ್ನು ಮನುಷ್ಯ ತನ್ನ ನಾಲಿಗೆಯ

**ಜಬೀವುಲ್ಲಾ ಖಾನ್, ಬೆಂಗಳೂರು**

ರುಚಿಗಾಗಿ ತಿಂದು ಬಿಡುತ್ತಾನೆ. ಜೇನು ಸಹ ಒಂದೇ ಧರ್ಮಕ್ಕೆ ಸೀಮಿತ ವಾಗಿಲ್ಲ. ಎಲ್ಲಾ ಧರ್ಮದವರು ತಿನ್ನುತ್ತಾರೆ. ಮನೆಗಳಲ್ಲಿ, ಹೊಲಗದ್ದೆ ಗಳಲ್ಲಿ ಇಲಿಗಳ ಮತ್ತು ಹೆಗ್ಗಣಗಳ ಕಾಟ ತಪ್ಪಿಸಲು ವಿಷವನ್ನು ಇಡು ತ್ತಾರೆ. ವಿಷ ಪೂರಿತ ಹಾವನ್ನು ಅಥವಾ ಚೇಳನ್ನು ಕಂಡರೆ ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಅದರ ಪ್ರಾಣವನ್ನು ತೆಗೆದುಕೊಳ್ಳುತ್ತೇವೆ. ಹಾವು ಕಪ್ಪೆಯನ್ನು, ಕಪ್ಪೆ ಇತರೆ ಸಣ್ಣಪುಟ್ಟ ಕೀಟಗಳನ್ನು ತಿನ್ನುತ್ತದೆ. ಸಮುದ್ರದಲ್ಲಿ ದೊಡ್ಡ ಮೀನು ಸಣ್ಣ ಮೀನುಗಳನ್ನು ಭಕ್ಷಿಸಿ ಜೀವಿಸುತ್ತದೆ. ರೈತರ ಬೆಳೆ ನಾಶವಾಗದೆ ಇರಲಿ ಎಂದು ಕ್ರಿಮಿ ನಾಶಕಗಳನ್ನು ಸಿಂಪಡಿಸಿ ಆ ಹುಳುಗಳನ್ನು ಸಾಯಿಸುತ್ತೇವೆ. ಇಂತಹ ನೂರಾರು ವಿಷಯಗಳನ್ನು ನಾವು ನಮ್ಮ ಜೀವನದಲ್ಲಿ ಗಮನಿಸಬಹುದು. ಕೊನೆಗೆ ಸಿಗುವ ಉತ್ತರ ಇಷ್ಟೇ-ಪ್ರಕೃತಿ ನಿಯಮ. ಹಾಗಾದರೆ ಪ್ರಾಣಿಗಳ ಕಿರೀಟನಾದ ಮನುಷ್ಯ ಬೇರೆ ಪ್ರಾಣಿಗಳ ಮಾಂಸ ತಿನ್ನುವುದು ತಪ್ಪೇ? ಮನುಷ್ಯ ಮಾಂಸ ತಿನ್ನಬಾರದು ಎಂಬುದು ಕೆಲವರ ವಾದ. ಒಂದು ನಿಮಿಷ ಅವರ ಮಾತನ್ನು ಒಪ್ಪಿಕೊಳ್ಳೋಣ. ಮನುಷ್ಯ ಮಾಂಸ ತಿನ್ನದೇ ಹೋದರೆ ಏನಾಗುತ್ತದೆ? ಪ್ರಪಂಚದಲ್ಲಿ ಸಾವಿರಾರು ಕುರಿಗಳಿವೆ, ದನಕರುಗಳಿವೆ. ಅವನ್ನು ತಿನ್ನದೆ ಹಾಗೆ ಬಿಟ್ಟರೆ ಏನಾಗುವುದು ಗೊತ್ತೆ? ಸ್ವಲ್ಪ ಊಹೆ ಮಾಡಿ ನೋಡಿ. ನಿಮಗೇ ತಿಳಿಯುತ್ತದೆ. ಅಷ್ಟು ಕೋಟ್ಯಾಂತರ ಪ್ರಾಣಿ ಗಳಿಗೆ ಹುಲ್ಲು ಎಲ್ಲಿಂದ ತರುತ್ತೀರ? ಹುಲ್ಲಿನ ವಿಷಯ ಹಾಗಿರಲಿ, ಎಲ್ಲ ರಿಗೂ ಸಾವು ಇದೆ, ಅವುಗಳ ಸಾಮಾನ್ಯ ಸಾವನ್ನು ಎಂದಾದರೂ ನೋಡಿದ್ದೀರಾ? ಮನುಷ್ಯ ಪ್ರಾಣ ಬಿಡುವುದನ್ನು ನೀವು ನೋಡಿರ ಬಹುದು. ಒಂದು ದನ ಪ್ರಾಕೃತಿಕವಾಗಿ ಸಾವನ್ನಪ್ಪುವುದನ್ನು ಎಂದಾದರು ನೋಡಿ. ಆಗ ನಿಮಗೇ ತಿಳಿಯುತ್ತದೆ.

ಮನುಷ್ಯ ಎಲ್ಲ ದಿಕ್ಕುಗಳಿಂದಲೂ ಪ್ರಕೃತಿಯ ಕಾನೂನಿನ ಚೌಕಟ್ಟಿ ನಲ್ಲಿ ಬಂಧಿತನಾಗಿದ್ದಾನೆ. ಅದರಿಂದ ಆತ ಹೊರಬರಲು ಸಾಧ್ಯವೇ ಇಲ್ಲ. ನಾಯಿ ಒಮ್ಮೆಗೆ ಎಂಟು ಹತ್ತು ಮರಿಗಳನ್ನು ಹಾಕುತ್ತದೆ, ಬೆಕ್ಕು ಪ್ರತಿ ಮೂರು ತಿಂಗಳಿಗೆ ಐದು ಆರು ಮರಿಗಳಿಗೆ ಜನ್ಮ ನೀಡುತ್ತದೆ. ಕುರಿ ಆರು ತಿಂಗಳಿಗೆ ಎರಡೇ ಎರಡು ಮರಿಗಳನ್ನು ಜನ್ಮಿಸುತ್ತದೆ. ಎಂದಾ ದರೂ ನಾಯಿಗಳ ಐವತ್ತು ಅರವತ್ತು ಮಂದೆಗಳನ್ನು ನೋಡಿದ್ದೀರ? ಬೆಕ್ಕುಗಳ ಹಿಂಡನ್ನು ನೋಡಿದ್ದೀರಾ? ಇಲ್ಲ. ಕುರಿಗಳ, ದನಕರುಗಳ ಮಂದೆ ಮಂದೆಗಳನ್ನು ಕಾಣಬಹುದು. ಕುರಿಗಳನ್ನು ದನಕರುಗಳನ್ನು ಮನುಷ್ಯ ಪ್ರತಿದಿನ ಭಕ್ಷಿಸುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಎಷ್ಟು ಭಕ್ಷಿಸುತ್ತಿದ್ದರೂ ಅವುಗಳ ಸಂಖ್ಯೆ ಕಡಿಮೆಯಾಗುತ್ತಿಲ್ಲ. ಏಕೆ? ಸೃಷ್ಟಿಕರ್ತನ ಪ್ರಕೃತಿಯ ನಿಯಮ. ಬೆಕ್ಕು, ನಾಯಿಯನ್ನು ಯಾರು ತಿನ್ನುವುದಿಲ್ಲ, ಆದರೆ ದಿನವೂ ಬೀದಿಯಲ್ಲಿ ಅವುಗಳ ಮಂದೆ ಕಾಣಸಿಗು ವುದು ಕಡಿಮೆ. ಏಕೆ? ಅದು ಸಹ ಪ್ರಕೃತಿಯ ನಿಯಮ.

ಕುರಿಯ ಮಾಂಸಕ್ಕೆ ಮುನ್ನೂರು ರೂಪಾಯಿ, ದನದ ಮಾಂಸಕ್ಕೆ ನೂರು ರೂಪಾಯಿ. ಬಡವರಂತೂ ಮುನ್ನೂರು ರೂ. ಕೊಟ್ಟು ಕುರಿಯ ಮಾಂಸ ತಿನ್ನುವುದಿಲ್ಲ. ಆದುದರಿಂದ ಅವರು ದನದ ಮಾಂಸದ ಕಡೆಗೆ ವಾಲಿದ್ದಾರೆ. ನಾವು ದನದ ಮಾಂಸ ತಿನ್ನುವುದನ್ನು ಬಿಡುತ್ತೇವೆ, ನೀವು ನಮಗೆ ಕುರಿ ಮಾಂಸ ಉಚಿತವಾಗಿ ಕೊಡಿ ಎನ್ನುವವರೂ ಇದ್ದಾರೆ. ಹೆಂಡ ಕುಡಿಯಬೇಡಿ ಎಂದು ಯಾರು ಹೇಳುವುದಿಲ್ಲ. ಸರ್ಕಾರವೇ ಅನುಮತಿ ನೀಡಿದೆ. ಮಾಂಸ ತಿನ್ನ ಬೇಡಿ ಎನ್ನುವುದು ಸರಿಯೇ? ಹೆಂಡದಿಂದ ಆರೋಗ್ಯ ಕೆಡುತ್ತದೆ. ದನದ ಮಾಂಸ ಆರೋಗ್ಯಕ್ಕೆ ಒಳ್ಳೆಯದು ಎಂದು ಕ್ಷಯರೋಗ ಆಸ್ಪತ್ರೆಯ ವೈದ್ಯರು ಹೇಳುತ್ತಾರೆ.

ಮಾಂಸ ತಿನ್ನುವ ಸಂಸ್ಕೃತಿ ಬೆಳೆದು ಬಂದು ಬಿಟ್ಟಿದೆ. ಅದನ್ನು ತಡೆಯುವುದು ಕಷ್ಟ ಸಾಧ್ಯದ ಕೆಲಸ. ಲಕ್ಷ್ಮೀದೇವಿ ಎಂದೂ ಪಟಾಕಿ ಸಿಡಿಸಿಲ್ಲ. ಹಾಗಂತ ದೀಪಾವಳಿ ಹಬ್ಬಕ್ಕೆ ಜನ ಪಟಾಕಿ ಸಿಡಿಸುವುದಿಲ್ಲವೆ? ನೀವು ಹಬ್ಬ ಮಾಡಿ ಪರಿಸರ ಮಾಲಿನ್ಯ ಮಾಡು ತ್ತಿದ್ದೀರಿ ಎಂದು ಹೇಳುವುದು ಸರಿಯಾದೀತೆ? ಅವರ ಧರ್ಮ, ಅವರ ಸಂಸ್ಕೃತಿ. ಹಾಗೆಯೇ ಬೇರೆಯವರ ಧರ್ಮ ಮತ್ತು ಸಂಸ್ಕೃತಿ ಯನ್ನು ಗೌರವಿಸುವುದನ್ನು ತಿಳಿದುಕೊಳ್ಳಬೇಕು. ಧರ್ಮದ ಹೆಸರಿನಲ್ಲಿ ಕೆಲ ಕಿಡಿಗೇಡಿಗಳು ಗಲಭೆಗಳನ್ನು ನಡೆಸಲು ಹುನ್ನಾರ ಹಾಕುತ್ತಿರುತ್ತಾರೆ. ಅದಕ್ಕೆ ನಾವು ಅವಕಾಶ ಕಲ್ಪಿಸಿ ಕೊಡಬಾರದು. ರಾಜಕೀಯದವರು ತಮ್ಮ ಕುರ್ಚಿಗಾಗಿ ಏನು ಬೇಕಾದರೂ ಮಾಡಲು ಸಿದ್ಧವಿರುವರು. ನಮ್ಮ ವಿಮೋಚನೆ ಎಲ್ಲಿಗೆ ಹೋಯಿತು?

ಸುಮಾರು ಎರಡೂವರೆ ಲಕ್ಷ ರೈತರು ಸಾಲದ ಹೊರೆಯನ್ನು ಹೊರಲಾರದೆ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ. ತಮ್ಮ ಜಾನು ವಾರುಗಳನ್ನು ಬೆಳೆಸಿ ಅದನ್ನು ಮಾರಾಟ ಮಾಡಿದಾಗ ರೈತರಿಗೆ ಜೀವನ ನಡೆಸಲು ಹಣವಾದರೂ ಲಭಿಸುತ್ತದೆ. ಸರ್ಕಾರವೂ ಮಾಂಸವನ್ನು ಮತ್ತು ಜಾನುವಾರುಗಳ ಚರ್ಮವನ್ನು ರಫ್ತು ಮಾಡಿ ಹೆಚ್ಚಿನ ಲಾಭಗಳಿಸು ತ್ತಿದೆ. ಎಲ್ಲರೂ ಸಸ್ಯಹಾರಿಗಳಾಗಿಬಿಟ್ಟರೆ ರೈತರ ಜೀವನದ ಗತಿ ಏನಾಗ ಬಹುದು ಎಂಬುದರ ಬಗ್ಗೆಯೂ ಸ್ವಲ್ಪ ಯೋಚಿಸಬೇಕಾಗುತ್ತದೆ.



ಮುಹಮ್ಮದ್ ಅಬ್ದುಲ್ಲಾ ಜಾವೀದ್

# ಭಯ-ದೇವ ಭಯ

**ಭ**ಯ ಒಂದು ವಿಶಿಷ್ಟವಾದ ಪ್ರತ್ಯಕ್ಷ ಅವಸ್ಥೆಯಾಗಿದೆ. ಅದರಲ್ಲಿ ಯಾವುದೇ ತೋರಿಕೆಯಿರುವುದಿಲ್ಲ. ಬದಲಾಗಿ, ರೂಢಿಗಿಂತ ವಿರುದ್ಧವಾದ ಘಟನೆ ಕೇಳಿ ಅಥವಾ ಭಯಂಕರವಾದ ವಸ್ತುವನ್ನು ಕಂಡು ಮಾನವನ ಅಂಗಾಂಗಗಳು ಹೊಂದುವ ಪ್ರಭಾವವಿದೆಯಲ್ಲ, ಅದರ ಪ್ರಕಟನೆಯು ಅಸಾಮಾನ್ಯವಾದ ಸ್ಥಿತಿಯಲ್ಲಾಗುತ್ತದೆ. (Fear- an abnormal state of mind).

ಭಯ-ಭೀತಿಗೆ ಬೇರೆ ಬೇರೆ ಕಾರಣಗಳಿರುತ್ತವೆ. ಒಬ್ಬರ ಮುಂದೆ ಉತ್ತರದಾಯಿಯಾಗಿರುವ ಭಾವನೆ, ಯಾರದಾದರೂ ಘನ ವ್ಯಕ್ತಿತ್ವ-ದರ್ಪ, ದುಃಸ್ವಪ್ನ, ಒತ್ತಡ-ಗೊಂದಲದಿಂದ ಕೂಡಿದ ಪರಿಸರ, ಭ್ರಮೆ ಮತ್ತು ನೇತ್ಯಾತ್ಮಕ ಚಿಂತನೆ ಇತ್ಯಾದಿ. ಈ ಎಲ್ಲ ಅವಸ್ಥೆಗಳಲ್ಲಿ ಭಯವನ್ನು ಮರೆಮಾಚಲು ಸಾಧ್ಯವಿಲ್ಲ. ಇದು ಒಂದು ಸ್ವಾಭಾವಿಕ ಕ್ರಿಯೆಯಾಗಿದೆ.

ಅಲ್ಲಾಹನ ಭಯ (ದೇವ ಭಯ) ಇತರೆಲ್ಲ ಭಯಗಳಿಗಿಂತ ಭಿನ್ನವಾದುದು. ಅಲ್ಲಾಹನ ಮೇಲಿನ ಭಯವು, ಅಲ್ಲಾಹನನ್ನು ನೋಡದೆಯೇ ಉಂಟಾಗುವಂತಹುದು. ವಸ್ತುತಃ ಭಯವು ಸಾಮಾನ್ಯವಾಗಿ ಗೋಚರ ವಸ್ತು/ವಿಷಯಗಳಿಂದ ಪ್ರಭಾವಿತಗೊಳ್ಳುವಂತಹದ್ದಾಗಿದೆ. ಅಂದರೆ ದೇವಭಯವೆನ್ನುವುದು ಮನಸ್ಸಿನ ಒಂದು ನಿರ್ದಿಷ್ಟ ಸಹ್ಯ ಅವಸ್ಥೆಯಾಗಿದೆ. (Fear of Allah- a normal desirable state of mind).

ಪ್ರೀತಿಯು ಅಲ್ಲಾಹನೊಂದಿಗಿನ ಸಂಬಂಧದ ಒಂದು ಮುಖವಾದರೆ, ಭಯವು ಅದರ ಇನ್ನೊಂದು ಮುಖವಾಗಿದೆ. ಒಬ್ಬರ ಮೇಲೆ ಮನದಲ್ಲಿ ಪ್ರೀತಿ ಹುಟ್ಟಿದರೆ, ಅದರ ಕಾರಣವಾಗಿ ಹಿತಕರವಾದ ಅನುಭೂತಿಯುಂಟಾಗುತ್ತದೆ. ಪ್ರೀತಿಪೂರ್ವಕವಾದ ಸಮರ್ಪಣಾ ಭಾವ, ಗೌರವ, ಮಾನ್ಯತೆ ಎಲ್ಲವೂ ಅದೇ ಕಾರಣದಿಂದಾಗಿರುತ್ತದೆ. ಅದೇ ವೇಳೆ, ಕೇವಲ ಸಮರ್ಪಣಾ ಭಾವವಿದ್ದು ಮನದಲ್ಲಿ ಗೌರವ-ಮಾನ್ಯತೆ ಇಲ್ಲದಿದ್ದರೆ ಅದು ಪ್ರೀತಿಯೆಂದು ಅನ್ನಿಸುವುದೇ ಇಲ್ಲ. ಇದುವೇ ಪ್ರೀತಿಯ ವ್ಯಾಖ್ಯಾನವಾಗಿದೆ.

ಅಲ್ಲಾಹನು ತನ್ನ ಸಜ್ಜನ ದಾಸರ ಬಗ್ಗೆ ಹೇಳಿರುವುದು, "ಅವರು ಅಲ್ಲಾಹನನ್ನು ಕಾಣದೆಯೇ ಭಯಪಡುತ್ತಾರೆ" ಎಂದಾಗಿದೆ. ಅಂದರೆ ಅವರ ಭಯವು ಅಲ್ಲಾಹನ ದಯಾಪರತೆಗೆ ಸಂಬಂಧಿಸಿದ್ದಾಗಿದೆ. ಈ ಅವಸ್ಥೆಯು ದಾಸನನ್ನು ದೇವನೊಂದಿಗೆ ತೀರಾ ನಿಕಟಗೊಳಿಸುತ್ತದೆ. ಅಲ್ಲಾಹನ ಮೇಲಿನ ಪ್ರೀತಿಯೊಂದಿಗೆ ಭಯವು ವಸ್ತುತಃ ದಾಸ್ಯತನದ ಒಂದು ಉನ್ನತವಾದ ಮಾನದಂಡವಾಗಿದೆ. ಪ್ರೀತಿ ಮತ್ತು ಭಯದ ನಡುವೆ ಗಾಢವಾದ ಸಂಬಂಧವಿದೆ. ಎಲ್ಲಿ ಪ್ರೀತಿ ಇರುತ್ತದೋ ಅಲ್ಲಿ ಪ್ರೀತಿ ಕಡಿಮೆಯಾಗುವ ಭಯವಿರುತ್ತದೆ ಮತ್ತು ಪ್ರೀತಿಪಾತ್ರರು ಕೋಪಗೊಳ್ಳುವ ಭೀತಿಯಿರುತ್ತದೆ. ಹಾಗಾಗಿ ಸತ್ಯ ವಿಶ್ವಾಸಿಯಾಗಿರುವ ದಾಸನು ದೇವಸಾನಿಧ್ಯದಲ್ಲಿ ನಿಲ್ಲಬೇಕಾದ ಮತ್ತು ತನ್ನ ಕರ್ಮಗಳ ವಿಚಾರಣೆ ನಡೆಸಲ್ಪಡುವ ಕಲ್ಪನೆ; ಅನುಗ್ರಹಗಳಿಂದ ವಂಚಿತನಾಗುವ, ನರಕದ ವೇದನಾಜನಕ ಶಿಕ್ಷೆ, ಕರ್ಮಗಳ ಸ್ವೀಕೃತಿ ಇತ್ಯಾದಿ ಭಾವನೆಗಳು ಸದಾ ಮನದಲ್ಲಿ ಸುಳಿಯುತ್ತಾ ಇರುತ್ತದೆ.

ಈ ಅವಸ್ಥೆಯನ್ನು ಪವಿತ್ರ ಕುರ್‌ಆನಿನಲ್ಲಿ ಬಹಳ ವ್ಯವಸ್ಥಿತವಾಗಿ ಪ್ರಸ್ತಾಪಿಸಲಾಗಿದೆ. "ನಿಮ್ಮ ಪ್ರಭುವಿನಲ್ಲಿ ತಕ್ವಾ ಇರಿಸಿಕೊಳ್ಳಿರಿ ಮತ್ತು ಅವನ ಮೇಲೆ ಭಯವಿರಿಸಿರಿ." (ಲುಕ್ಮಾನ್: 33)

ಕೆಲವೆಡೆ ಆ ಬಗ್ಗೆ ಹುರಿದುಂಬಿಸಲಾಗಿದೆ, "ಕಣ್ಣಾರೆ ಕಾಣದೆ ತಮ್ಮ ಪ್ರಭುವನ್ನು ಭಯಪಡುವವರಿಗಾಗಿ ಖಂಡಿತವಾಗಿಯೂ ಕ್ಷಮೆ ಮತ್ತು ದೊಡ್ಡ ಪ್ರತಿಫಲವಿದೆ." (ಅಲ್ ಮುಲ್ಕ್: 12)

ಇನ್ನೊಂದೆಡೆ ವಿವೇಕವುಳ್ಳವರೇ ಅಲ್ಲಾಹನ ಭಯವನ್ನಿರಿಸಿಕೊಳ್ಳುತ್ತಾರೆ ಎನ್ನಲಾಗಿದೆ. "ವಾಸ್ತವದಲ್ಲಿ ಅಲ್ಲಾಹನ ದಾಸರ ಪೈಕಿ ಜ್ಞಾನವುಳ್ಳವರು ಮಾತ್ರ ಅವನನ್ನು ಭಯಪಡುತ್ತಾರೆ." (ಫಾತಿರ್: 28)

ಕೆಲವೆಡೆ ಎರಡು ತದ್ವಿರುದ್ಧ ಅವಸ್ಥೆಗಳನ್ನು ಪ್ರಸ್ತಾಪಿಸುತ್ತಾ, ಅಲ್ಲಾಹನನ್ನು ನಿರೀಕ್ಷೆ ಮತ್ತು ಭಯಮಿಶ್ರಿತ ಭಾವನೆಯೊಂದಿಗೆ ಕರೆದು ಪ್ರಾರ್ಥಿಸಲು ಕಲಿಸಲಾಗಿದೆ. "ಭಯದೊಂದಿಗೂ ಆಶೆಯೊಂದಿಗೂ ಅಲ್ಲಾಹನನ್ನು ಕೂಗಿ ಪ್ರಾರ್ಥಿಸಿರಿ." (ಅಲ್ ಅಅ್‌ರಾಫ್: 56)

ಯಾರಲ್ಲಿ ದೇವಪ್ರೀತಿಯೊಂದಿಗೆ ದೇವಭಯವೂ ತತ್ಸಮಾನವಾಗಿ ಬೆಳೆಯುತ್ತದೋ ಆ ಅವಸ್ಥೆಯು ಪರಮ ಪ್ರಕಾಶವಾಗಿ ಪರಿಣಮಿಸುವುದು. ಜೀವನದ ಪ್ರತಿಕ್ಷಣ, ಪ್ರತಿಘಳಿಗೆ, ಪ್ರತಿಯೊಂದು ತಿರುವುಗಳಲ್ಲಿಯೂ ಈ ಅವಸ್ಥೆಯು ವಿಶ್ವಾಸದಲ್ಲಿ ಹೆಚ್ಚಳವನ್ನುಂಟು ಮಾಡುತ್ತದೆ. ಎಲ್ಲಿಯ ವರೆಗೆಂದರೆ ಶತ್ರುಗಳ ಜನಬಾಹುಳ್ಯ ಕಂಡೂ ವಿಶ್ವಾಸ ಇನ್ನಷ್ಟು ವೃದ್ಧಿಯಾಗುತ್ತದೆ.

"ನಿಮ್ಮ ವಿರುದ್ಧ ದೊಡ್ಡ ಸೈನ್ಯವೊಂದು ಜಮೆಯಾಗಿದೆ. ಅದನ್ನು ಭಯಪಡಿರಿ" ಎಂದು ಜನರು ಅವರೊಡನೆ ಹೇಳಿದಾಗ, ಅವರ ಸತ್ಯವಿಶ್ವಾಸ ವರ್ಧಿಸಿತು. (ಆಲಿ ಇಮ್ರಾನ್: 173)

ಯಾರ ಹೃದಯದಲ್ಲಿ ದೇವಸ್ಮರಣೆ, ದೇವಪ್ರೀತಿ ಮತ್ತು ದೇವಭಯ ಇರುವುದಿಲ್ಲವೋ ಅಂತಹವರು ತಮ್ಮಂತಹ ಮಾನವರಿಗೇ ಭಯಪಡುತ್ತಾರೆ. ಅವರನ್ನೇ ತನ್ನ ಸರ್ವಸ್ವವೆಂದೂ ಭಾವಿಸುವಷ್ಟರ ಮಟ್ಟಿಗೆ ಅದು ತಲುಪುತ್ತದೆ. ಅವರ ಈ ನೀತಿಯು ಕೊನೆಗೆ ಅವರನ್ನು ಅಜ್ಞಾನದ ಗಾಢಾಂಧಕಾರ ಕೂಪಕ್ಕೆ ತಳ್ಳುತ್ತದೆ.

ವಿಶ್ವಾಸಿಯು ತನ್ನ ಹೃದಯದಲ್ಲಿ ದೇವಸ್ಮರಣೆ, ದೇವಪ್ರೀತಿ ಮತ್ತು ದೇವಭಯವನ್ನು ಇರಿಸಿಕೊಂಡಲ್ಲಿ ಅವನ ಜೀವನವು ಖಂಡಿತ ಸಾರ್ಥಕವಾಗುತ್ತದೆ. ನಿಶ್ಚಯವಾಗಿಯೂ ಅವನ ಪ್ರತಿಫಲವು ಸ್ವರ್ಗದ ಶಾಶ್ವತ ಅನುಗ್ರಹಗಳಾಗಿವೆ.

ಈ ನಿಟ್ಟಿನಲ್ಲಿ ಪ್ರವಾದಿವರ್ಯರು(ಸ) ಕಲಿಸಿದ ಪ್ರಾರ್ಥನೆ ತುಂಬಾ ಸಹಕಾರಿ:

"ಅಲ್ಲಾಹುಮ್ಮ ಅಕ್ಸಿಮ್‌ನಾ ಲನಾ ಮಿನ್ ಖಷಿಯತಿಕ, ಮಾತಹೂಲು ಬಿಹೀ, ಬೈನನಾ ವಬೈನ ಮಅ್‌ಸಿಯತಿಕ."

ಅರ್ಥಾತ್: ಓ ಅಲ್ಲಾಹ್! ನಮ್ಮ ಮತ್ತು ನಿನ್ನ ಆಜ್ಞೋಲ್ಲಂಘಕ ದಾಸರ ಮಧ್ಯೆ ಒಂದು ದೊಡ್ಡ ತಡೆಯಾಗುವಂತಹ ರೀತಿಯಲ್ಲಿ ನಮ್ಮ ಭಯ ಮತ್ತು ಭೀತಿಯಲ್ಲಿ ಹೆಚ್ಚಳವನ್ನುಂಟು ಮಾಡು." [ವರದಿ: ಅಬ್ದುಲ್ಲಾ ಬಿನ್ ಅಮ್ರ್(ರ), ತಿರ್ಮಿದಿ]

## ವರದಕ್ಷಿಣೆ

ವರದಕ್ಷಿಣೆಯೆಂಬ
ಪೆಡಂಭೂತಕ್ಕೆ ಸಿಲುಕಿ
ಮಗಳಿಗೆ
ವರ ಹುಡುಕಿ ಹುಡುಕಿ
ಆಯುಷ್ಯ ಕಡಿಮೆಯಾಗುತ್ತಾ
ಬಂತು ತಂದೆಗೆ ದಿನಗಳಿದಂತೆ
ವಯಸ್ಸು ಮಗಳಿಗೆ
ಹೆಚ್ಚಾಗುತ್ತಾ ಹೋಯಿತು

ಜಲೀಲ್ ಮುಕ್ರಿ

## ಹಾಗಾದರೆ ಅದರರ್ಥ ಪ್ರವಾದಿಗಳೆಲ್ಲ ಪರಾಜಿತರು ಎಂದೇ?

(5ನೇ ಪುಟದಿಂದ)

ಉದ್ಧಟತನವನ್ನೇ ತೋರಿದಿರಲ್ಲವೇ? ಕೆಲವರನ್ನು ಸುಳ್ಳಾಗಿಸಿದಿರಿ. ಇನ್ನು ಕೆಲವರನ್ನು ವಧಿಸಿಬಿಟ್ಟಿರಿ." (ಅಲ್‌ಬಕರ: 87)

ಇನ್ನೊಂದು ಸೂಕ್ತ ಹೀಗಿದೆ, "ಇವರಿಗಿಂತ ಮುಂಚೆ ನೂಹರ ಜನಾಂಗವೂ ಸುಳ್ಳಾಗಿಸಿದೆ. ಆ ಬಳಿಕ ಇತರ ಅನೇಕ ಪಂಗಡಗಳೂ ಹೀಗೆ ಮಾಡಿವೆ. ಪ್ರತಿಯೊಂದು ಜನಾಂಗವೂ ತನ್ನ ಸಂದೇಶವಾಹಕರನ್ನು ಸೆರೆಹಿಡಿಯಲಿಕ್ಕಾಗಿ ಅವನ ಮೇಲೆ ಎರಗಿತು. ಅವರೆಲ್ಲರೂ ಮಿಥ್ಯದ ಅಸ್ತ್ರಗಳಿಂದ ಸತ್ಯವನ್ನು ಕೀಳಾಗಿಸಲು ಪ್ರಯತ್ನಿಸಿದರು. ಆದರೆ ಕೊನೆಗೆ ನಾನು ಅವರನ್ನು ಹಿಡಿದು ಬಿಟ್ಟೆನು. ನನ್ನ ಶಿಕ್ಷೆಯು ಎಷ್ಟು ಕಠಿಣವಾಗಿತ್ತೆಂದು ನೋಡಿರಿ." (ಅಲ್‌ಮೂಮಿನೂನ್: 5)

ಪ್ರವಾದಿಗಳು ಅವರ ಜನತೆಯಿಂದ ಅನುಭವಿಸಿದ ಕಹಿ ಅನುಭವಗಳನ್ನು ಕುರ್‌ಆನ್ ಪ್ರಸ್ತುತ ಪಡಿಸುತ್ತದೆ. ಪ್ರತೀ ಪ್ರವಾದಿಯೊಂದಿಗೆ ಅವರ ಜನತೆ ಹೇಳಿದ ಚುಚ್ಚುನುಡಿಗಳನ್ನೂ, ಅವರ ಮೇಲೆ ಎಸಗಿದ ದೌರ್ಜನ್ಯಗಳನ್ನೂ ಇದು ನಮಗೆ ವಿವರಿಸುತ್ತದೆ. ಆ ಇತಿಹಾಸವೆಲ್ಲವೂ ಈಗ ವರ್ತಮಾನದಲ್ಲಿ ಪುನರಾವರ್ತನೆಯಾಗುತ್ತಿದೆ. ಪ್ರವಾದಿಗಳಿಗೆ ವ್ಯಕ್ತವಾದ ವಿರೋಧಗಳೆಲ್ಲವೂ ನಮ್ಮ ಈ ಕಾಲದಲ್ಲೂ ವ್ಯಕ್ತವಾಗುತ್ತಿದೆ. ಸ್ಟೇಜುಗಳಲ್ಲೂ, ಪೇಜುಗಳಲ್ಲೂ, ವೀಡಿಯೋ ಕ್ಲಿಪ್ಪಿಂಗ್‌ಗಳಲ್ಲೂ ಅಂದಿನ ಚುಚ್ಚು ಮಾತುಗಳು ಇಂದು ಹೊಸ ರೂಪದಲ್ಲಿ ಬಿತ್ತರಣೆಯಾಗುತ್ತಿದೆ.

ಮಕ್ಕಾದಲ್ಲಿ, ಮದೀನದಲ್ಲಿ, ತಾಯಿಫ್‌ನಲ್ಲಿ, ಈಜಿಪ್ಟ್‌ನಲ್ಲಿ, ಇರಾಕಿನಲ್ಲಿ ಪ್ರವಾದಿಗಳು ಎದುರಿಸಿದ ಆಕ್ರೋಶವು ಅವರ ಹಿಂಬಾಲಕರಾದ ಇಸ್ಲಾಮೀ ಆಂದೋಲನದ ಹೋರಾಟಗಾರರೂ ಆಲಿಸುತ್ತಿದ್ದಾರೆ. 'ನೀನು ದುರ್ಬಲನೂ ನಿಸ್ಸಹಾಯಕನೂ ಆಗಿದ್ದಿ' ಎಂದು ಶುಐಬ್‌ರನ್ನು(ಅ) ಗೇಲಿಮಾಡಿದ ಮದ್‌ಯನ್ ಪಟ್ಟಣ ನಿವಾಸಿಗಳ ಧ್ವನಿ, 'ನನ್ನನ್ನಲ್ಲದೆ ಇನ್ನಾರನ್ನಾದರೂ ಆರಾಧಿಸಿದರೆ ನಿನ್ನನ್ನು ಜೈಲಿಗಟ್ಟುತ್ತೇನೆ' ಎಂದ ಸರ್ವಾಧಿಕಾರಿ ಫರೋವನ ಬೆದರಿಕೆ, 'ನಾವು ಅಧಿಕಾರವಿರುವವರೂ ವಿಜಯಿಗಳೂ ಆಗಿದ್ದೇವೆ' ಎಂಬ ಗರ್ವದ ಮಾತುಗಳು... ಇಂದು ನಮ್ಮ ಬೀದಿ ಬೀದಿಗಳಲ್ಲೂ ಮಾರ್ದನಿಸುತ್ತಿಲ್ಲವೆ?

'ನಿಮ್ಮ ಕೈಕಾಲುಗಳನ್ನು ವಿರುದ್ಧ ದಿಕ್ಕುಗಳಿಂದ ಕಡಿಸಿ ಬಿಡುವೆನು' ಎಂದು ವಿಶ್ವಾಸಿಗಳನ್ನು ಬೆದರಿಸಿದ ಫರೋವನ ಮಾತುಗಳು ಇಂದು ಗೆಲುವು ಸಾಧಿಸಿದವರ ವಿಜಯೋತ್ಸವಗಳಲ್ಲಿ "ಕೈಯನ್ನೂ ಕಡಿಯುವೆವು ಕಾಲನ್ನೂ ಕಡಿಯುವೆವು. ಅಗತ್ಯ ಬಿದ್ದರೆ ನಿಮ್ಮ ತಲೆಯನ್ನೂ ಕಡಿಯುವೆವು" ಎಂಬ ಘೋಷಣೆಗಳ ಮೂಲಕ ಪುನರಾವರ್ತನೆಯಾಗುತ್ತಿಲ್ಲವೇ? ಇಂದು ನಾವು ಸಂಕಷ್ಟ ಅನುಭವಿಸುತ್ತಿದ್ದರೂ ಗತಕಾಲದ ಪ್ರವಾದಿಗಳ ಕಡೆಗೆ ಕಣ್ಣೋಡಿಸಲೇ ಬೇಕು.

ಪ್ರವಾದಿ ಹೂದ್‌ರನ್ನು(ಅ) ಜನತೆಯು ಕಳ್ಳನೆಂದೂ, ತಿಳಿಗೇಡಿ ಎಂದೂ ಕರೆದರು. ಅಲ್ಲಾಹನ ಮಿತ್ರ ಎಂಬ ಗೌರವಕ್ಕೆ ಪಾತ್ರರಾದ ಇಬ್ರಾಹೀಮ್‌ರೊಂದಿಗೆ(ಅ) ನಮ್ರೂದ್ ಎಂಬ ಸ್ವೇಚ್ಛಾಧಿಕಾರಿಯ ಮತ್ತು ಆಝರ್ ಎಂಬ ಧರ್ಮ ಪುರೋಹಿತನ ಬೆಂಬಲದೊಂದಿಗೆ ಜನರು ಹೇಗೆ ವರ್ತಿಸಿದರು ಎಂಬುದನ್ನು ಕುರ್‌ಆನ್ ಹಲವು ಕಡೆಗಳಲ್ಲಿ ಪ್ರಸ್ತಾಪಿಸಿದೆ. ಲೂತ್(ಅ), ಶುಐಬ್(ಅ), ಮೂಸಾ(ಅ) ಮುಂತಾದವರ ಸ್ಥಿತಿಯೂ ಭಿನ್ನವಲ್ಲ. ಅರೇಬಿಯಾದಲ್ಲಿ ಗೌರವಾರ್ಹವಾದ ವ್ಯಕ್ತಿಯಾಗಿದ್ದರು ಪ್ರವಾದಿ ಮುಹಮ್ಮದ್(ಸ). ಅವರ ಜನತೆಯೇ ಅವರಿಗೆ 'ಅಲ್ ಅಮೀನ್' ಎಂಬ ಬಿರುದನ್ನೂ ನೀಡಿದ್ದರು. ಆ ಜನತೆಗೆ ಅವರು ಪ್ರೀತಿ ಪಾತ್ರರಾದ ವ್ಯಕ್ತಿಯಾಗಿದ್ದರು. ಆದರೆ ಅವರಿಗೆ ಪ್ರವಾದಿತ್ವ ಲಭಿಸಿದಾಗ ಅಲ್ಲಿ ಸಂಭವಿಸಿದ್ದು ಏನು ಎಂದು ಇತಿಹಾಸವು ತಿಳಿಸುತ್ತಿಲ್ಲವೇ?

**ಬಹುಸಂಖ್ಯಾತರ ಬೆಂಬಲವು ಸತ್ಯದ ಮಾನದಂಡವೇ?**

ಸತ್ಯವು ಪ್ರವಾದಿಗಳ ಕಡೆಯಲ್ಲಾಗಿತ್ತು. ಒಳಿತಿಗೂ ಮೌಲ್ಯಗಳಿಗೂ ಧರ್ಮಕ್ಕೂ ನ್ಯಾಯಕ್ಕೂ ಮಹತ್ವ ನೀಡಿದ್ದು ಕೂಡಾ ಅವರೇ ಆಗಿದ್ದರು. ಆದರೂ ಜನರಲ್ಲಿ ಬಹುಮಂದಿ ಅವರನ್ನು ಬೆಂಬಲಿಸಲಿಲ್ಲ. ಮತ್ತು ಆಡಳಿತ ವರ್ಗವು, ಪುರೋಹಿತ ವರ್ಗವು ಪ್ರವಾದಿಗಳ ವಿರುದ್ಧ ಪರಸ್ಪರ ಕೈ ಜೋಡಿಸಿದ್ದರು. ಅಧಿಕಾರ, ಸಂಪತ್ತು, ಹೆಣ್ಣು, ಮದ್ಯ ಮುಂತಾದವುಗಳನ್ನೆಲ್ಲ ಅವರು ಸಮರ್ಥವಾಗಿ ಪ್ರಯೋಗಿಸಿದರು. ಸುಳ್ಳಾರೋಪಗಳ್ನೂ ಅಪಪ್ರಚಾರಗಳನ್ನೂ ನಡೆಸಿದರು. ಮತಾಂತರ, ತೀವ್ರವಾದ ಎಂದೆಲ್ಲಾ ಹೇಳಿ ಜನರನ್ನು ಹೆದರಿಸಿದರು. ಇವರ ಮಾತಿಗೆ ಜನರು ಮರುಳಾದರು. ಜನರು ಪ್ರವಾದಿಗಳ ವಿರುದ್ಧ ತಿರುಗಲು ಇದುವೇ ಕಾರಣವಾಗಿತ್ತು.

ಬಹುಸಂಖ್ಯಾತರ ಬೆಂಬಲಗಿಟ್ಟಿಸಲಿಲ್ಲ ಎಂಬ ಕಾರಣಕ್ಕೆ ಒಂದು ಆಂದೋಲನ ಅಥವಾ ಅದರ ಸಿದ್ಧಾಂತವು ವಿಫಲವಾಯಿತು ಎಂದು ಅರ್ಥವೇ? ಹಾಗಾದರೆ ಪ್ರವಾದಿಗಳಲ್ಲಿ ಹೆಚ್ಚಿನವರು ಪರಾಜಿತರಾಗಿದ್ದಾರೆ ಎಂದು ಹೇಳಬೇಕಾದೀತು. ಕಾರಣ ಪ್ರವಾದಿಗಳಿಗೆ ಲಭಿಸಿದ್ದು ಕೆಲವೇ ಕೆಲವು ಅನುಯಾಯಿಗಳು ಮಾತ್ರ. ಅವರು ಪ್ರತಿಪಾದಿಸಿದ ಸಿದ್ಧಾಂತಗಳನ್ನು ಅನುಸರಿಸಿದ್ದು ಬೆರಳೆಣಿಕೆಯಷ್ಟು ಮಂದಿ ಮಾತ್ರ. ಒಂದು ಲಕ್ಷಕ್ಕಿಂತಲೂ ಹೆಚ್ಚು ಪ್ರವಾದಿಗಳು ಈ ಭೂಮಿಗೆ ಆಗಮಿಸಿದ್ದಾರೆ ಎಂದು ಇಸ್ಲಾಮ್ ಕಲಿಸುತ್ತದೆ. ಇವರಲ್ಲಿ ಜನರ ಬೆಂಬಲ, ಜನತೆಯ ನಾಯಕತ್ವ ಮತ್ತು ನಾಡಿನ ಅಧಿಕಾರ ಲಭಿಸಿದವರು ಕೇವಲ ಕೆಲವು ಪ್ರವಾದಿಗಳು ಮಾತ್ರ. ಇದರ ಆಧಾರದಲ್ಲಿ ಪ್ರವಾದಿಗಳು ತಮ್ಮ ಕಾರ್ಯರಂಗದಲ್ಲಿ ವಿಫಲರಾಗಿದ್ದಾರೆ ಎಂದು ತೀರ್ಮಾನಿಸಲು ಸಾಧ್ಯವಿಲ್ಲ. ಪ್ರವಾದಿಗಳು ಜನರ ಮುಂದಿರಿಸಿದ ಸಂದೇಶವು ಅಪ್ಪಟ ಸತ್ಯವಾಗಿತ್ತು. ಆದರೆ ಅದನ್ನು ಸ್ವೀಕರಿಸಲು ಜನರ ಮನಸ್ಸು ಒಪ್ಪಲಿಲ್ಲ. ಅವರ ನಾಯಕರು ಅದನ್ನು ಸ್ವೀಕರಿಸಲು ಅನುಮತಿಸಲಿಲ್ಲ. ಆಗ ಪರಾಜಿತರಾದದ್ದು ಪ್ರವಾದಿಗಳಲ್ಲ ಬದಲಾಗಿ ಜನರಾಗಿದ್ದರು.

ಜಗತ್ತಿನಲ್ಲಿ ಅತ್ಯುನ್ನತವಾದ ಸತ್ಯ ಎಂಬುದು ಏಕದೇವತ್ವವಾಗಿದೆ. ಪವಿತ್ರ ಕುರ್‌ಆನ್ ಬೋಧಿಸುವ ತೌಹೀದ್‌ಗಿಂತ ಮಿಗಿಲಾದದ್ದು ಬೇರೊಂದಿಲ್ಲ. ಆದರೆ ಆ 'ಏಕದೇವತ್ವ'ವನ್ನು ಅಂಗೀಕರಿಸದ ಒಂದು ದೊಡ್ಡ ಜನ ಸಮೂಹವೇ ಇದೆ. ಹಾಗಾದರೆ ಏಕದೇವತ್ವವು ಕಪೋಲ ಕಲ್ಪಿತ ಸಿದ್ಧಾಂತ ಎಂದು ತೀರ್ಮಾನಿಸಲು ಸಾಧ್ಯವೇ? ಅದು ಪರಾಜಿತಗೊಂಡಿತು ಎಂದರ್ಥವೇ?

ಅನು: ಇಮ್ತಿಯಾಝ್ ಪೆರ್ಲ

# ಧರ್ಮ ಕಾರ್ಯಗಳು?

— ಯೂಸುಫ್ ಉಡುಪಿ

**● ಸಮಾಜ ಸೇವಾ ಕಾರ್ಯಗಳು ಉದಾ: ಬಡವರಿಗೆ ಮನೆ ಕಟ್ಟಿಸಿ ಕೊಡುವುದು ಅಥವಾ ರಿಪೇರಿ ಮಾಡಿ ಕೊಡುವುದು, ಆಹಾರ ಸಾಮಗ್ರಿಗಳನ್ನು ಒದಗಿಸುವುದು, ಬಟ್ಟೆ ವಿತರಿಸುವುದು, ಶಾಲೆ, ಅಸ್ಪತ್ರೆಗಳ ಫೀಸ್‌ಗೆ ಸಹಾಯ ಮಾಡುವುದನ್ನು ಧರ್ಮ ಕಾರ್ಯಗಳಾಗಿ ಜಮಾಅತೆ ಇಸ್ಲಾಮಿಯ ಬಿಂಬಿಸುತ್ತದೆ. ಅವೆಲ್ಲ ಅಪ್ಪಟ ಲೌಕಿಕ ಕಾರ್ಯಗಳೆಂದು ಕೆಲವರ ಅಭಿಪ್ರಾಯವಾಗಿದೆ. ಅವು ಧರ್ಮ ಕಾರ್ಯಗಳಾದರೆ ನಮಾಝ್, ಉಪವಾಸ, ಹಜ್ಜ್, ಝಕಾತ್‌ಗಳು, ದಿಕ್ರ್, ತಸ್ಬೀಹ್, ತಿಲಾವತ್‌ಗಳು ಯಾವ ವರ್ಗದಲ್ಲಿ ಬರುತ್ತದೆ? ದಯವಿಟ್ಟು ತಿಳಿಸಿ.**

❍ ನಮಾಝ್, ಉಪವಾಸ, ಹಜ್ಜ್, ಝಕಾತ್‌ಗಳು ಹಾಗೆಯೇ ತಸ್ಬೀಹ್, ದಿಕ್ರ್, ತಿಲಾವತ್‌ಗಳೂ ಅಪ್ಪಟ ಧರ್ಮ ಕಾರ್ಯಗಳೆಂಬುದರಲ್ಲಿ ಎರಡು ಮಾತಿಲ್ಲ. ಆದರೆ ಧರ್ಮ ಕಾರ್ಯಗಳು ಅಷ್ಟಕ್ಕೆ ಮಾತ್ರ ಸೀಮಿತವಲ್ಲವೆಂಬುದನ್ನು ತಿಳಿದಿರಬೇಕು. ಕುರ್‌ಆನ್-ಹದೀಸ್‌ಗಳಲ್ಲಿ ಇದಕ್ಕೆ ಸಾಕಷ್ಟು ಉದಾಹರಣೆಗಳು ದೊರಕುತ್ತವೆ.

ಅಲ್ಲಾಹನು ಕಳಿಸಿದ ಪ್ರವಾದಿಗಳೆಲ್ಲ ಕೇವಲ ಆರಾಧನಾ ಕರ್ಮಗಳನ್ನು ಕಲಿಸಲಿಕ್ಕೆ ಬಂದವರಾಗಿರಲಿಲ್ಲ. ಅವರು ಅವುಗಳನ್ನು ಜನರಿಗೆ ಬೋಧಿಸುವುದರ ಜೊತೆಗೆ ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವವರಾಗಿದ್ದರು. ಉದಾ: ಶುಐಬ್(ಅ) ಕಾಲದಲ್ಲಿ ಜನತೆಯಲ್ಲಿದ್ದ ಅತಿದೊಡ್ಡ ಕೆಡುಕು ತೂಕಳತೆಯಲ್ಲಿ ವಂಚನೆಯಾಗಿತ್ತು. ಅದರ ವಿರುದ್ಧ ಶುಐಬ್‌ರು ಧ್ವನಿಯೆತ್ತಿದ್ದಾಗ ಅವರು ಹೇಳಿದ್ದು, "ನಾವು ನಮ್ಮ ಆರ್ಥಿಕ ವ್ಯವಹಾರದಲ್ಲಿ ಮನಬಂದಂತೆ ವ್ಯವಹರಿಸಬಾರದೆಂದು ನಿನ್ನ ನಮಾಝ್ ನಿನಗೆ ಬೋಧಿಸುತ್ತದೆಯೋ?" ಎಂದಾಗಿತ್ತು.

ಮೂಸಾರ(ಅ) ಕಾಲದಲ್ಲಿ ಫಿರ್‌ಔನನು ಬನೀ ಇಸ್ರಾಈಲರ ಮೇಲೆ ದಬ್ಬಾಳಿಕೆ ನಡೆಸಿ ಅವರನ್ನು ತನ್ನ ಹಿಡಿತದಲ್ಲಿಟ್ಟಿದ್ದನು. ಅವರನ್ನು ವಿಮೋಚಿಸುವುದು ಮೂಸಾರ ದೌತ್ಯದಲ್ಲಿ ಸೇರಿತ್ತು. ಅವರು ತೌಹೀದ್ ಸಂದೇಶವನ್ನಿಡುವ ಜೊತೆಗೆ ಅವರ ಜನತೆಯನ್ನು ವಿಮೋಚಿಸಲು ಹೋರಾಡಿದರು.

ಪ್ರವಾದಿ ಮುಹಮ್ಮದ್‌ರ(ಸ) ಜನಸೇವೆಯಂತೂ ಜನಜನಿತವಾಗಿದೆ. ಪ್ರವಾದಿತ್ವ ಲಭಿಸುವುದಕ್ಕೆ ಮುಂಚೆಯೇ ಅವರು ತಮ್ಮನ್ನು ಸಮಾಜಸೇವೆಯಲ್ಲಿ ತೊಡಗಿಸಿದ್ದರು. ನಾಡಿನಲ್ಲಿ ಶಾಂತಿ ಸ್ಥಾಪನೆಯ ಉದ್ದೇಶದಿಂದ 'ಹುಬ್ಬುಲ್ ಫುಝೂಲ್' ಒಪ್ಪಂದದಲ್ಲಿ ಪಾಲ್ಗೊಂಡಿದ್ದರು. ಅವರಿಗೆ ಪ್ರವಾದಿತ್ವದ ಪ್ರಥಮ ದಿವ್ಯವಾಣಿ ಅವತೀರ್ಣಗೊಂಡಾಗ ಅವರು ಹೆದರಿ ಕಂಪಿಸಿ ಮನೆಗೆ ಬಂದು ಪತ್ನಿ ಖದೀಜಾರಿಗೆ ವಿಷಯ ತಿಳಿಸಿದಾಗ ಅವರು ಹೇಳಿದ ಸಾಂತ್ವನದ ನುಡಿಗಳು ಇತಿಹಾಸದಲ್ಲಿ ಅಮರವಾಗಿದೆ. ಅವರು, "ನೀವು ಬಹಳ ಧ್ಯಾನ ಮಾಡುವವರು, ರಾತ್ರಿ ನಮಾಝ್ ಮಾಡುವವರು, ಉಪವಾಸ ಆಚರಿಸುವವರು" ಎಂದು ಹೇಳಲಿಲ್ಲ. ಬದಲಾಗಿ ಅವರು ಹೇಳಿದ್ದು, "ಅಲ್ಲಾಹನು ನಿಮ್ಮ ಕೈ ಬಿಡಲಾರನು. ನೀವು ಬಡವರಿಗೆ ಸಹಾಯ ಮಾಡುತ್ತೀರಿ. ವಿಧವೆಯರು, ದುರ್ಬಲರು

**ಕೇಳಿದಿರಾ? ಕೇಳಿ ಮುಜೀಬ್**

ಮುಂತಾದವರಿಗೆ ನೆರವಾಗುತ್ತೀರಿ. ಅತಿಥಿಗಳನ್ನು ಸತ್ಕರಿಸುತ್ತೀರಿ" ಎಂದಾಗಿತ್ತು. ಆದ್ದರಿಂದ ಸಮಾಜಸೇವೆ, ಜನಸೇವೆ ಎಲ್ಲಾ ಪ್ರವಾದಿಗಳ ಕಾರ್ಯಭಾರವಾಗಿತ್ತು. ಒಳಿತಿನ ಸ್ಥಾಪನೆ, ಕೆಡುಕಿನ ಉಚ್ಚಾಟನೆಯಲ್ಲಿ ಆರಾಧನೆಗಳ ಜೊತೆ ಜನಸೇವೆಯೂ ಸೇರುತ್ತದೆ. ಅದನ್ನೇ ಪ್ರವಾದಿಗಳು ಮಾಡಿದ್ದು. ಅವೆಲ್ಲವೂ ಒಳಿತಿನ ಕಾರ್ಯಗಳೇ ಎಂಬುದಕ್ಕೆ ಪವಿತ್ರ ಕುರ್‌ಆನ್‌ನ ಈ ಕೆಳಗಿನ ಸೂಕ್ತವು ಸೂಕ್ತ ಪುರಾವೆಯಾಗಿದೆ- ನೀವು ನಿಮ್ಮ ಮುಖಗಳನ್ನು ಪೂರ್ವದಿಕ್ಕಿಗೆ ಅಥವಾ ಪಶ್ಚಿಮ ದಿಕ್ಕಿಗೆ ಮಾಡಿಕೊಳ್ಳುವುದು ಧರ್ಮಶೀಲತೆಯಲ್ಲ. ನಿಜವಾಗಿ ಒಬ್ಬನು ಅಲ್ಲಾಹನನ್ನೂ ನಿರ್ಣಾಯಕ ದಿನವನ್ನೂ ದೇವಚರರನ್ನೂ ಅಲ್ಲಾಹನು ಅವತೀರ್ಣಗೊಳಿಸಿದ ಗ್ರಂಥವನ್ನೂ ಅವನ ಸಂದೇಶವಾಹಕರನ್ನೂ ಹೃತ್ಪೂರ್ವಕ ಒಪ್ಪಿಕೊಳ್ಳುವುದೂ ಅಲ್ಲಾಹನ ಸಂಪ್ರೀತಿಗಾಗಿ ತನ್ನ ಮನಮೆಚ್ಚುಗೆಯ ಸಂಪತ್ತನ್ನು ಬಂಧುಗಳಿಗೂ ಅನಾಥರಿಗೂ ನಿರ್ಗತಿಕರಿಗೂ ಪ್ರಯಾಣಿಕರಿಗೂ ಸಹಾಯಾರ್ಥಿಗಳಿಗೂ ದಾಸ್ಯ ವಿಮೋಚನೆಗಾಗಿಯೂ ವ್ಯಯಿಸುವುದೂ ನಮಾಝನ್ನು ಸಂಸ್ಥಾಪಿಸುವುದೂ ಝಕಾತನ್ನು (ಕಡ್ಡಾಯ ದಾನವನ್ನು) ನೀಡುವುದೂ ವಾಗ್ದಾನ ಮಾಡಿದರೆ ಪೂರೈಸುವುದೂ ಕಷ್ಟಕಾರ್ಪಣ್ಯಗಳಲ್ಲಿಯೂ ಸತ್ಯಾಸತ್ಯಗಳ ಸಮರವಾಗುತ್ತಿರುವಾಗಲೂ ಸಹನೆಯಿಂದಿರುವುದೂ ಧರ್ಮ ಶೀಲತೆಯಾಗಿರುತ್ತದೆ. ಇವರೇ ಸತ್ಯಸಂಧರು ಮತ್ತು ಇವರೇ ಧರ್ಮನಿಷ್ಠರು. (ಅಲ್‌ಬಕರ:177)

## ಕಮಿಷನ್ ವ್ಯಾಪಾರ

ನಝೀರ್ ಅಹ್ಮದ್, ದಾವಣಗೆರೆ

**● ನಾವು ಹಣ್ಣಿನ ಸಗಟು ಮಾರಾಟಗಾರರಾಗಿದ್ದು, ರೈತರು ಮತ್ತು ವ್ಯಾಪಾರಸ್ಥರು ಹಣ್ಣುಗಳನ್ನು ನಮ್ಮ ಅಂಗಡಿಗೆ ತರುತ್ತಾರೆ. ಅದನ್ನು ನಾವು ವ್ಯಾಪಾರ ಮಾಡುವ ಸರಕಿನ ಮಾರಾಟದ ಮೊತ್ತಕ್ಕೆ ಶೇ. 10ರಂತೆ ಗಿರಾಕಿಗಳಿಗೆ ಕಮಿಷನ್ ಕೊಡುತ್ತೇವೆ. (ಶೇ. 90 ಉದ್ರಿ ವ್ಯಾಪಾರ) ಕಮಿಷನ್ ವ್ಯಾಪಾರ ಧರ್ಮ ಸಮ್ಮತವೇ? ತಿಳಿಸಿ. ನಾವು ನಡೆಸುವ ಈ ವಿಧಾನ ಸರಿಯಲ್ಲವೆಂದಾದರೆ ಯಾವ ವಿಧಾನವನ್ನು ಅನುಸರಿಸಬೇಕು? ತಿಳಿಸಿ.**

❍ ಈ ವ್ಯವಹಾರದಲ್ಲಿ ಎರಡು ಮುಖಗಳಿವೆ. ಒಂದನೆಯದು, ರೈತರು ಮತ್ತು ಸಣ್ಣ ವ್ಯಾಪಾರಿಗಳು ಸರಕನ್ನು ನಿಮ್ಮ ಮಳಿಗೆಗೆ ತಂದು ಕೊಡುವುದು. ನೀವು ಇತರ ವ್ಯಾಪಾರಿಗಳಿಗೆ, ರೈತರ ಮತ್ತು ಸಣ್ಣ ವ್ಯಾಪಾರಿಗಳ ಪರವಾಗಿ ಮಾರಾಟ ಮಾಡುವುದು. ಆಗ ನಿಮಗೆ ದೊರಕುವ ಸರಕಿನ ಬೆಲೆಯ ಶೇ. 10 ಕಡಿತ ಮಾಡಿ ಅವರಿಗೆ ನೀಡುವುದು. ಇದು ಕಮಿಷನ್ ಏಜನ್ಸಿಯ ವ್ಯವಹಾರವಾಗಿದೆ. ಸರಕು ನಿಮ್ಮದಾಗಿರದೆ ನಿಮಗೆ ತಂದು ಕೊಡುವವರದ್ದಾಗಿದೆ. ಇತರ ವ್ಯಾಪಾರಿಗಳು ನಿಮ್ಮೊಂದಿಗೆ ವ್ಯವಹಾರ ನಡೆಸುತ್ತಾರೆ.

ಎರಡನೆಯ ಮುಖವೆಂದರೆ ರೈತರು ಮತ್ತು ಸಣ್ಣ ವ್ಯಾಪಾರಿಗಳು ತರುವ ಸರಕನ್ನು ಅವರಿಂದ ನೀವು ಖರೀದಿಸುವುದು. ಅದನ್ನು ನೀವು ಶೇ. 10 ಲಾಭವಿಟ್ಟು ಇತರ ವ್ಯಾಪಾರಿಗಳಿಗೆ ಮಾರಾಟ ಮಾಡುವುದು. ಆಗ ನಿಮ್ಮದು ಖರೀದಿ ಮತ್ತು ಮಾರಾಟವಾಗುವುದು. ಕಮಿಷನ್ ವ್ಯವಹಾರವಲ್ಲ. ರೈತರು ಮತ್ತು ಸಣ್ಣ ವ್ಯಾಪಾರಿಗಳಿಗೆ ಅವರ ಸರಕಿನ ದರ ದೊರೆಯುತ್ತದೆ. ಇಲ್ಲಿ ಲಾಭಾಂಶ ಶೇ. 10 ಮಾತ್ರ ಆಗಬೇಕೆಂದಿಲ್ಲ. ಹೆಚ್ಚು ಕಡಿಮೆಯೂ ಆಗಬಹುದು.

ಈ ಎರಡೂ ವ್ಯವಹಾರಗಳು ಶರೀಅತ್ ಪ್ರಕಾರ ಧರ್ಮಸಮ್ಮತವಾಗಿದೆ.

# ಮೌಲಾನಾ ಕಾಲಮ್

## ನಮಾಝ್‌ನಲ್ಲಿ ಕೈಕಟ್ಟುವುದು



ಮೌಲಾನ ಯಹ್ಯಾ ತಂಙಳ್ ಮದನಿ

● ನಮಾಝ್ ನಿರ್ವಹಿಸುವಾಗ ಕೈಕಟ್ಟುವ ಬಗ್ಗೆ ಸಮುದಾಯದ ಕೆಲವು ವಿಭಾಗಗಳ ಮಧ್ಯೆ ಭಿನ್ನಾಭಿಪ್ರಾಯವಿದೆ. ಈ ಕುರಿತು ಉತ್ತರಿಸುವಿರಾ?

❍ ನಮಾಝ್‌ನಲ್ಲಿ ಕೈಯನ್ನು ಎಲ್ಲಿ, ಯಾವ ರೀತಿ ಕಟ್ಟಬೇಕೆಂದು ಕುರ್‌ಆನಿನಲ್ಲಿ ಎಲ್ಲಿಯೂ ವಿವರಿಸಲಾಗಿಲ್ಲ. ಹಾಗಾದರೆ ಈ ಕುರಿತು ಹದೀಸಿನಲ್ಲಿ ಏನು ಹೇಳಲಾಗಿದೆ ಎಂಬುದನ್ನು ಪರಾಮರ್ಶಿಸೋಣ. ಪ್ರವಾದಿ(ಸ) ಹೇಳಿದರು; ನಾನು ನಮಾಝ್ ನಿರ್ವಹಿಸುವ ರೀತಿಯಲ್ಲಿ ನೀವೂ ನಿರ್ವಹಿಸಿರಿ.

ಈ ಪ್ರವಾದಿ ವಚನದಿಂದ ವ್ಯಕ್ತವಾಗುವುದೇನೆಂದರೆ ಪ್ರವಾದಿವರ್ಯರು(ಸ) ಯಾವ ರೀತಿ ನಮಾಝ್ ನಿರ್ವಹಿಸಿದ್ದರು ಎಂಬುದನ್ನು ಅವರ ಸಹಾಬಿಗಳ ಮುಖಾಂತರ ತಿಳಿಯುವುದಾಗಿದೆ. ಉಮರ್‌ರ(ರ) ಮೊಮ್ಮಗ ಸಾಲಿಮ್(ರ) ಹೇಳುತ್ತಾರೆ, ನನ್ನ ಅಜ್ಜ ನಮಾಝ್ ನಿರ್ವಹಿಸುವಾಗ ಎರಡೂ ಕೈಯನ್ನು ಕಿವಿಯ ತನಕ ಮೇಲೆತ್ತಿ ನಂತರ ಕೈಕಟ್ಟುತ್ತಿದ್ದರು. ಇಮಾಮ್ ಬುಖಾರಿ ತನ್ನ ಸಹೀಹ್‌ನಲ್ಲಿ ಅನೇಕ ಕಡೆಗಳಲ್ಲಿ ವಿವಿಧ ಸಹಾಬಿಗಳಿಂದ ಬಂದ ವರದಿಯನ್ನು ಅನುಸರಿಸಿ ಕೈ ಎತ್ತುವ ವಿಚಾರವಾಗಿ ತಿಳಿಸಿದ್ದಾರೆ. ಒಂದು ಕಡೆ ಸಹ್‌ಲ್ ಬಿನ್ ಸಅ್‌ದ್(ರ) ಹೇಳಿದ್ದಾರೆಂದು ಈ ರೀತಿ ತಿಳಿಸಿದ್ದಾರೆ- ಹೇಗೆಂದರೆ ನಮಗೆ ಪ್ರವಾದಿವರ್ಯರಿಂದ ಈ ರೀತಿ ಆದೇಶವಿತ್ತು. ನಮಾಝ್ ನಿರ್ವಹಿಸುವವರು ಕೈಕಟ್ಟುವಾಗ ತನ್ನ ಎಡ ಮುಂಗೈಯ ಮೇಲೆ ಬಲಗೈಯನ್ನು ಇಡಬೇಕು.

ಇಮಾಮ್ ಮುಸ್ಲಿಮ್‌ರು(ರ) ತನ್ನ ಸಹೀಹ್‌ನಲ್ಲಿ ವಾಇಲ್ ಬಿನ್ ಹುಜ್‌ರ್(ರ) ಹೇಳಿರುವುದಾಗಿ ಹೀಗೆ ಉಲ್ಲೇಖಿಸಿದ್ದಾರೆ- ಪ್ರವಾದಿಯವರು(ಸ) ನಮಾಝನ್ನು ಆರಂಭಿಸುವಾಗ ಕೈಯನ್ನು ಕಿವಿಯ ತನಕ ಎತ್ತುತ್ತಿದ್ದರು. ಎಡ ಮುಂಗೈಯ ಮೇಲೆ ಬಲ ಮುಂಗೈ ಕಟ್ಟಿರುವುದನ್ನು ನೋಡಿರುವುದಾಗಿ ತಿಳಿಸಿರುತ್ತಾರೆ. ಆಗ ಅವರ ಕೈಯು ವಸ್ತ್ರದಿಂದ ಹೊದೆಯಲ್ಪಟ್ಟಿತ್ತು. ರುಕೂಅ್‌ಗೆ ಬಾಗುವಾಗ ವಸ್ತ್ರದಿಂದ ಕೈಯನ್ನು ಹೊರಗೆ ತೆಗೆದಿದ್ದರು. ಇಮಾಮ್ ನವವಿಯವರು(ರ) ಈ ಹದೀಸನ್ನು ವ್ಯಾಖ್ಯಾನಿಸುತ್ತಾ ನಾಭಿಯ ಮೇಲೆ ಕೈ ಇಡಲು ಇದನ್ನು ಆಧಾರವಾಗಿ (ವಾಇಲ್ ಬಿನ್ ಹುಜ್‌ರ್) ತಿಳಿಸಿದ ಮತ್ತೊಂದು ವರದಿಯನ್ನು ಉಲ್ಲೇಖಿಸಿರುತ್ತಾರೆ.

ನಾನು ಪ್ರವಾದಿವರ್ಯರೊಂದಿಗೆ(ಸ) ನಮಾಝ್ ನಿರ್ವಹಿಸಿದ್ದೆ. ಪ್ರವಾದಿಯವರು(ಸ) ಆಗ ತನ್ನ ಬಲಗೈಯನ್ನು ಎಡಗೈಯ ಮೇಲೆ ಇಡುತ್ತಾ ಎದೆಯ ಮೇಲೆ ಇಟ್ಟರು ಎಂದು ತಿಳಿಸಿದ್ದಾರೆ. ಈ ಹದೀಸನ್ನು ಪ್ರಸಿದ್ಧ ವಿದ್ವಾಂಸರಾದ ಇಬ್ನು ಖುಝೈಮ ತನ್ನ ಸಹೀಹ್‌ನಲ್ಲಿ ತಿಳಿಸಿರುತ್ತಾರೆ. ಎದೆಯ ಮೇಲೆ ಅಂದರೆ ನಾಭಿಗಿಂತ ಮೇಲೆ ಆಗಿದೆ. ಇಲ್ಲಿ ಭಿನ್ನಾಭಿಪ್ರಾಯವಿರುವುದು ನಾಭಿಯ ಮೇಲೆ ಮತ್ತು ಕೆಳಗೆ ಕೈಕಟ್ಟುವ ಕುರಿತಾಗಿದೆ. ಈ ವಿಚಾರವಾಗಿ ಕೆಲವರು 'ಅಲಾ ಸದ್‌ರಿಹೀ' (ಅವನ ಎದೆಯ ಮೇಲೆ) ಎಂಬ ಶಬ್ದವನ್ನು ಹಿಡಿದು ಎದೆಯ ಮೇಲೆಯೇ ಕಟ್ಟಬೇಕೆಂದು ಹಠ ಹಿಡಿಯುತ್ತಾರೆ. ಈ ಹದೀಸನ್ನು ಅಧ್ಯಯನ ಮಾಡಿದ ವಿದ್ವಾಂಸರುಗಳ ಅಭಿಪ್ರಾಯ ಪ್ರಕಾರ ಅದು ಕೊರಳಿನ ಬಳಿ ಅಲ್ಲ ಬದಲು ಎದೆಯ ಹತ್ತಿರ ಕಟ್ಟಬೇಕೆಂದು ತಿಳಿಸಿದ್ದಾರೆ. ಅಲಾ ಎಂದರೆ ಮೇಲೆ ಎಂಬ ಅರ್ಥ ಮಾತ್ರವಲ್ಲ ಹತ್ತಿರ ಎಂಬರ್ಥವೂ ಬರುತ್ತದೆ. ಇದಕ್ಕೆ ಕುರ್‌ಆನ್ ಮತ್ತು ಹದೀಸ್‌ಗಳಲ್ಲಿ ಧಾರಾಳ ಉದಾಹರಣೆಗಳಿವೆ.

ಆರಂಭದ ಹದೀಸ್‌ನಲ್ಲಿ ಅಂದರೆ ಸಹಲ್ ಬಿನ್ ಸಅದ್‌ರ ವರದಿಯಲ್ಲಿ ತಿಳಿದು ಬರುವುದೆಂದರೆ ಕೈಕಟ್ಟುವಾಗ ತನ್ನ ಎಡ ಮುಂಗೈಯ ಮೇಲೆ ಬಲಗೈಯನ್ನು ಇಟ್ಟ ಎದೆಯ ಮೇಲೆ ಕಟ್ಟಲು ಸಾಧ್ಯವಾಗುವುದಿಲ್ಲ. ವಾಇಲ್ ಬಿನ್ ಹುಜ್‌ರ್‌ರವರು(ರ) ಈ ವಿಷಯವಾಗಿ ಅನೇಕ ವರದಿಗಳಲ್ಲಿ ತಿಳಿಸಿದ್ದರೂ ಒಂದು ಹದೀಸ್‌ನಲ್ಲಿ ಮಾತ್ರ 'ಅಲಾ ಸದ್‌ರಿಹೀ'

**ನಿರೂಪಣೆ: ಸಲೀಮ್ ಬೋಳಂಗಡಿ**

(ಎದೆಯ ಮೇಲೆ ಕೈಕಟ್ಟುವ ಕುರಿತು) ತಿಳಿಸಿದ್ದಾರೆ. ಇಬ್ನು ಖುಝೈಮರನ್ನು(ರ) ಹೊರತುಪಡಿಸಿ ಸಿಹಾಸಿತ್ತದ ಬೇರೆ ಯಾರೂ 'ಅಲಾ ಸದ್‌ರಿಹೀ' ಎಂಬುದನ್ನು ವರದಿ ಮಾಡಿಲ್ಲ.

ಇನ್ನು ಇಬ್ನು ಹುಜರ್‌ರವರ ಪುತ್ರ ಅಲ್‌ಖಮರವರು ತನ್ನ ತಂದೆಯವರು ಈ ರೀತಿ ವರದಿ ಮಾಡಿದ್ದಾಗಿ ತಿಳಿಸಿದ್ದಾರೆ, "ಪ್ರವಾದಿವರ್ಯರು ನಮಾಝ್‌ನಲ್ಲಿ ಕೈ ಕಟ್ಟುವುದನ್ನು ನಾನು ನೋಡಿದ್ದೇನೆ. ಎಡಕೈಯ ಮೇಲೆ ಬಲಕೈಯನ್ನು ನಾಭಿಯ ಕೆಳಗೆ ಕಟ್ಟಿದ್ದರು." ಅಲ್ ಹಾಫಿಲ್ ಅಲ್ ಖಾಸಿಮ್‌ರವರು ಈ ಹದೀಸ್‌ನ ಪಾರಂಪರ್ಯವನ್ನು ಸಹೀಹ್ ಮತ್ತು ಅತ್ಯುತ್ತಮ ಎಂದಿದ್ದಾರೆ. ತಿರ್ಮಿದಿಯವರ ವ್ಯಾಖ್ಯಾನ ಗ್ರಂಥದಲ್ಲಿ ಅಬೂತಯ್ಯಿಬಿಲ್ ಮದನಿ ಈ ಹದೀಸ್‌ನ ಕುರಿತು ಸುನ್ನತ್‌ನ ದೃಷ್ಟಿಯಲ್ಲಿ ಉತ್ತಮ ಹದೀಸ್ ಎಂದಿದ್ದಾರೆ. ಇದರ ವರದಿಗಾರರು ಹೆಚ್ಚು ವಿಶ್ವಾಸಾರ್ಹ ವರದಿಗಾರರಾಗಿದ್ದಾರೆ ಎಂದು ಅಶೈಖ್ ಆಬಿದುಸ್ಸಿಂಧಿ ತಿಳಿಸಿದ್ದಾರೆ. ಇಬ್ನು ಅಭೀಶೈಬ ಇದೇ ವರದಿಯನ್ನು ಹಜ್ಜಾಜ್‌ರಿಂದ ವರದಿ ಮಾಡಿರುತ್ತಾರೆ. ಇನ್ನು ನಾಭಿಯ ಕೆಳಗೆ ಕೈಕಟ್ಟುವ ವರದಿಯನ್ನು ಇಮಾಮ್ ನವವಿ ದುರ್ಬಲವೆಂದಿದ್ದಾರೆ. ಕಾರಣ ಅದರ ವರದಿಗಾರರು ವಿಶ್ವಾಸಾರ್ಹರಲ್ಲ. ಇಲ್ಲಿ ಚರ್ಚೆ ಇರುವುದು ನಾಭಿಯ ಕೆಳಗೆ ಅಥವಾ ನಾಭಿಯ ಮೇಲೆ ಅಲ್ಲ. ಮುಖ್ಯವಾಗಿ ಚರ್ಚೆ ಇರಬೇಕಾದುದು ವರದಿಯ ವಿಶ್ವಾಸಾರ್ಹತೆಯ ಕುರಿತಾಗಿದೆ. ಇದರ ಕುರಿತು ಹೆಚ್ಚಿನ ವಿವರಣೆಗೆ ನಸಾಈಯವರ ವ್ಯಾಖ್ಯಾನ ಗ್ರಂಥ ನೋಡಿದರೆ ತಿಳಿಯಬಹುದು.

ಇಮಾಮ್ ಬುಖಾರಿಯವರ ಶಿಷ್ಯರಾದ ಇಮಾಮ್ ತಿರ್ಮಿದಿಯವರು ಈ ಕುರಿತು ಹಲವು ಹದೀಸ್‌ಗಳನ್ನು ವರದಿ ಮಾಡಿರುತ್ತಾರೆ. ಈ ಹದೀಸ್‌ನ ಕುರಿತು ವಿವರಿಸಿರುವ ತಿರ್ಮಿದಿಯವರು ಅಗಾಧ ಪಾಂಡಿತ್ಯ ಹೊಂದಿದವರಾಗಿದ್ದಾರೆ. ಈ ಕುರಿತು ಅವರು ಹೇಳುವುದೇನೆಂದರೆ ಈ ಕುರಿತು ವರದಿಯಾದ ಹದೀಸ್‌ಗಳೆಲ್ಲವೂ ವಿಶಾಲ ಮನೋಭಾವನೆಯ ಚಿಂತನೆಗೆ ನಿಲುಕಿದ್ದಾಗಿದೆ. ಪ್ರವಾದಿವರ್ಯರ ಚರ್ಯೆಯ ಪ್ರಕಾರ ಅವರವರ ಇಷ್ಟದಂತೆ (ಸಹೀಹ್ ಹದೀಸ್‌ಗಳ ಆಧಾರದಂತೆ) ಕೈಕಟ್ಟಬಹುದು. ಇದರ ಕುರಿತು ಸಮುದಾಯದಲ್ಲಿ ಅನಗತ್ಯ ಗೊಂದಲ ಮೂಡಿಸುವುದಕ್ಕಿಂತ ಪ್ರವಾದಿವರ್ಯರ ಚರ್ಯೆ ಕುರಿತು ಅಧ್ಯಯನ ನಡೆಸಬೇಕಾಗಿದೆ. ಇಂತಹ ಹಲವಾರು ಸಣ್ಣ ಪುಟ್ಟ ವಿಷಯಗಳಲ್ಲಿ ಸಲಫು ಸ್ವಾಲಿಹೀನ್‌ಗಳ ಜೀವನ ಮತ್ತು ನಡೆ ನುಡಿಯನ್ನು ಮಾದರಿಯಾಗಿ ಸ್ವೀಕರಿಸುವುದು ನಮಗೆಲ್ಲರಿಗೂ ಉತ್ತಮ. ಅದುವೇ ಪ್ರವಾದಿಚರ್ಯೆ.

# ಕುರ್‌ಆನ್ ಅಧ್ಯಯನ 542

## ಅಧ್ಯಾಯ: 4

# ಅನ್ನಿಸಾ

### ವಚನ 86ರ ಟಿಪ್ಪಣಿಯ ಮುಂದುವರಿದ ಭಾಗ

ಬುಖಾರಿ ಮತ್ತು ಮುಸ್ಲಿಮ್ ಉದ್ಧರಿಸಿದ ಒಂದು ಹದೀಸ್‌ನಲ್ಲಿ ಹೀಗಿದೆ: ಅಪರಿಚಿತರಿಗೂ ಸಲಾಮ್ ಹೇಳುವುದು, ಇಸ್ಲಾಮಿನಲ್ಲಿ ಅತ್ಯಂತ ವಿಶಿಷ್ಟ ಮತ್ತು ಪುಣ್ಯದಾಯಕ ಕರ್ಮವಾಗಿದೆ. ಪ್ರವಾದಿಚರ್ಯೆಯ ಆಧಾರದಲ್ಲಿ ಕರ್ಮಶಾಸ್ತ್ರಜ್ಞರು ಸಲಾಮ್ ಹೇಳುವುದಕ್ಕೆ ಕೆಲವು ಕ್ರಮಗಳನ್ನು ಆದೇಶಿಸಿದ್ದಾರೆ. ಕುಳಿತಿರುವವರ ಅಥವಾ ನಿಂತಿರುವವರ ಬಳಿಗೆ, ಹೋಗುವವರು ಸಲಾಮ್ ಹೇಳಬೇಕು. ಮನೆಗೆ ಬರುವವರು ಮನೆಯವರಿಗೆ ಸಲಾಮ್ ಹೇಳಬೇಕು. ಸಭೆಗೆ ಬರುವವರು ಸಭೆಯಲ್ಲಿರುವವರಿಗೆ, ವಾಹನದಲ್ಲಿ ಸಂಚರಿಸುತ್ತಿರುವವರು ನಡೆದುಕೊಂಡು ಹೋಗುವವರಿಗೆ, ಕಿರಿಯರು ಹಿರಿಯರಿಗೆ, ಆಶ್ರಿತನು ನಾಯಕನಿಗೆ, ಸಣ್ಣ ತಂಡವು ದೊಡ್ಡ ತಂಡಕ್ಕೆ ಸಲಾಮ್ ಹೇಳಬೇಕು. ಕ್ರಮ ಪ್ರಕಾರ ಮೊದಲು ಸಲಾಮ್ ಹೇಳಬೇಕಾದವರು ಅದರಲ್ಲಿ ಲೋಪ ತೋರಿದರೆ ಇನ್ನೊಂದು ತಂಡವು ಅವರಿಗೆ ಮೊದಲು ಸಲಾಮ್ ಹೇಳಬಹುದು. ಮೊದಲು ಸಲಾಮ್ ಹೇಳಿರುವುದಕ್ಕಿಂತ ಉತ್ತಮವಾಗಿ ಪ್ರತಿ ಸಲಾಮ್ ಹೇಳುವ ರೂಪವನ್ನು ಸಲ್ಮಾನುಲ್ ಫಾರ್ಸಿಯವರಿಂದ ಇಬ್ನು ಜರೀರ್ ಉದ್ಧರಿಸಿದ್ದಾರೆ. ಅವರು ಹೇಳಿದ್ದರು: ಒಮ್ಮೆ ಓರ್ವರು ಪ್ರವಾದಿಯವರ ಬಳಿಗೆ ಬಂದು 'ಅಸ್ಸಲಾಮು ಅಲೈಕುಮ್ ಯಾ ರಸೂಲುಲ್ಲಾಹ್' ಎಂದು ಅಭಿನಂದಿಸಿದರು. ಪ್ರವಾದಿಯವರು 'ವಅಲೈಕುಮುಸ್ಸಲಾಮು ವರಹ್ಮತುಲ್ಲಾಹಿ' ಎಂದು ಪ್ರತಿ ಅಭಿನಂದನೆ ಸಲ್ಲಿಸಿದರು. ಆ ಬಳಿಕ ಮತ್ತೊಬ್ಬರು ಬಂದು, 'ಅಸ್ಸಲಾಮು ಅಲೈಕ ಯಾ ರಸೂಲಲ್ಲಾಹ್ ವ ರಹ್ಮತುಲ್ಲಾಹಿ' ಎಂದು ಅಭಿನಂದಿಸಿದರು. 'ವ ಅಲೈಕುಮುಸ್ಸಲಾಮು ವರಹ್ಮತುಲ್ಲಾಹಿ ವಬರಕಾತುಹು' ಎಂದು ಪ್ರವಾದಿಯವರು ಪ್ರತಿ ಅಭಿನಂದಿಸಿದರು. ಬೇರೊಬ್ಬರು ಬಂದು ಅಭಿನಂದಿಸಿದರು, 'ಅಸ್ಸಲಾಮು ಅಲೈಕ ಯಾ ರಸೂಲಲ್ಲಾಹ್ ವರಹ್ಮತುಲ್ಲಾಹಿ ವಬರಕಾತುಹು'. ಆಗ ಪ್ರವಾದಿಯವರು 'ವ ಅಲೈಕ' ಎಂದು ಪ್ರತಿ ಅಭಿನಂದಿಸಿದರು. ಇದನ್ನು ಕೇಳಿ ಆಗಂತುಕ ಪ್ರವಾದಿಯವರೊಡನೆ ಕೇಳಿದರು, 'ಪ್ರವಾದಿಯವರೇ, ಇಂತಹವನು ನಿಮಗೆ ಸಲಾಮ್ ಹೇಳಿದಾಗ ನೀವು ನನಗೆ ಪ್ರತಿ ಸಲಾಮ್ ಹೇಳಿರುವುದಕ್ಕಿಂತ ಹೆಚ್ಚು ಮಾತುಗಳನ್ನು ಹೇಳಿರುವಿರಲ್ಲವೇ?' ಪ್ರವಾದಿಯವರು ಹೀಗೆ ಉತ್ತರಿಸಿದರು, 'ಅದಕ್ಕಾಗಿ ನೀವು ನಮಗೇನೂ ಉಳಿಸಿಲ್ಲವಷ್ಟೆ. ಅಲ್ಲಾಹನು ಹೀಗೆ ಹೇಳಿರುತ್ತಾನೆ: 'ನಿಮಗೆ ಸಲಾಮ್ ಹೇಳಿದರೆ ಅದಕ್ಕಿಂತ ಉತ್ತಮವಾಗಿ ಪ್ರತಿಸಲಾಮ್ ಹೇಳಿರಿ. ಅಥವಾ ಅದನ್ನು ಮರಳಿಸಿರಿ.'

ಈ ಹದೀಸ್‌ನಿಂದ ವ್ಯಕ್ತವಾಗುವುದೇನೆಂದರೆ, ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಹಿ ವಬರಕಾತುಹು, ಇದು ಅಭಿನಂದನೆಯ ಪೂರ್ಣ ರೂಪವಾಗಿದೆ. ಪೂರ್ಣ ರೂಪದಲ್ಲಿ ಅಭಿನಂದಿಸಿದರೆ ಪೂರ್ಣ ರೂಪದಲ್ಲಿ ಪ್ರತಿ ಅಭಿನಂದನೆ ಹೇಳಬೇಕು. ಅದಕ್ಕಾಗಿ ಆ ಮಾತುಗಳನ್ನು ಪುನರಾವರ್ತಿಸಬೇಕಾಗಿಲ್ಲ. ವ ಅಲೈಕುಮ್ (ಅವೆಲ್ಲವೂ ನಿಮಗೂ ಆಗಲಿ) ಎಂದು ಹೇಳಿದರೆ ಸಾಕಾಗುವುದು. 'ಅಸ್ಸಲಾಮು ಅಲೈಕುಮ್' ಎಂಬ ಅಭಿನಂದನೆಗೆ 'ವ ಅಲೈಕುಮುಸ್ಸಲಾಮ್ ವರಹ್ಮತುಲ್ಲಾಹಿ' ಎಂಬುದು ಉತ್ತಮ ಪ್ರತಿ ಅಭಿನಂದನೆಯಾಗಿದೆ. ಹಾಗೆಯೇ 'ಅಸ್ಸಲಾಮ್ ಅಲೈಕುಮ್ ವರಹ್ಮತುಲ್ಲಾಹಿ' ಎಂದರೆ 'ವ ಅಲೈಕುಮುಸ್ಸಲಾಮ್ ವರಹ್ಮತುಲ್ಲಾಹಿ ವಬರಕಾತುಹು' ಎನ್ನುವುದು ಉತ್ತಮ ಪ್ರತಿಅಭಿನಂದನೆಯಾಗಿದೆ. ಪೂರ್ಣ ರೂಪದ ಅಭಿನಂದನೆಯನ್ನು, 'ವ ಫದ್ಲುಹು, ವ ಮಗ್ಫಿರತುಹು, ವಜನ್ನತುಹು' (ಆತನ ಅನುಗ್ರಹ, ಪಾಪವಿಮೋಚನೆ ಮತ್ತು ಸ್ವರ್ಗ ದೊರೆಯಲಿ) ಎಂದು ಹೆಚ್ಚಿಸಿ ಹೇಳುವುದಕ್ಕೆ ಅಡ್ಡಿಯಿಲ್ಲ. ಹೀಗೆ ಅಭಿನಂದನೆಯು ಸುದೀರ್ಘ ಭಾಷಣ ಅಥವಾ ಪ್ರಾರ್ಥನೆಯಾದಾಗಲೂ 'ವ ಅಲೈಕ' ಎಂದರೆ ಸಾಕಾಗುವುದು.

ವಚನದ 'ವ ಇದಾ ಹುಯ್ಯಿತುಮ್ ಫ ಹಯ್ಯೂ' ಎಂಬ ಮಾತುಗಳಲ್ಲಿಯೂ ಅದಕ್ಕೆ ಸಂಬಂಧಿಸಿದ ಹದೀಸ್‌ಗಳಲ್ಲಿಯೂ ವ್ಯಕ್ತವಾಗುವುದೇನೆಂದರೆ, ಅಭಿನಂದನೆ–ಪ್ರತಿ ಅಭಿನಂದನೆಗಳಲ್ಲಿ ಲಿಂಗ–ಜಾತಿ ಅಥವಾ ಮತ ವ್ಯತ್ಯಾಸವನ್ನು ಇಸ್ಲಾಮ್ ಪರಿಗಣಿಸುವುದಿಲ್ಲ. ಆದರೆ ಕರ್ಮಶಾಸ್ತ್ರಜ್ಞರು ಈ ವಿಷಯದಲ್ಲಿ ವಿಭಿನ್ನ ಅಭಿಪ್ರಾಯಗಳನ್ನು ಹೊಂದಿದ್ದಾರೆ. ಸ್ತ್ರೀಯರು ಸ್ತ್ರೀಯರಿಗೆ ಸಲಾಮ್ ಹೇಳಿದರೆ ಸಾಕು, ರಕ್ತ ಸಂಬಂಧಿಕರು ಅಥವಾ ಪತಿ–ಪತ್ನಿಯರಲ್ಲದ ಸ್ತ್ರೀ–ಪುರುಷರು ಪರಸ್ಪರ ಸಲಾಮ್ ಹೇಳಬೇಕಾಗಿಲ್ಲವೆಂಬ ಅಭಿಪ್ರಾಯವಿದೆ. ಪುರುಷರು ಯುವತಿಯರಿಗೆ ಸಲಾಮ್ ಹೇಳುವುದು ಮಾತ್ರ ಸೂಕ್ತವಲ್ಲವೆಂಬುದು ಇಮಾಮ್ ಮಾಲಿಕಿಯವರ ಅಭಿಪ್ರಾಯ. ಪರಸ್ತ್ರೀಯರ ಜತೆಯಲ್ಲಿ ಪುರುಷನ ರಕ್ತ ಸಂಬಂಧಿಕ ಸ್ತ್ರೀಯರಿಲ್ಲದಿದ್ದರೆ ಅವರಿಗೆ ಸಲಾಮ್ ಹೇಳಬಾರದೆಂದು ಹನಫಿ ಮದ್ಹಬ್. ಪರಸ್ತ್ರೀಯರನ್ನು ವಿಶೇಷತಃ ಯುವತಿಯರನ್ನು ಸಂಧಿಸಲು ಮತ್ತು ಅವರೊಂದಿಗೆ ಸಲ್ಲಾಪ ನಡೆಸಲು ಸಲಾಮನ್ನು ನೆಪವಾಗಿ ಬಳಸಬಾರದೆಂಬುದು ನಿರ್ವಿವಾದ. ಸ್ತ್ರೀಯರಿಗೆ ಪುರುಷರು ಅಥವಾ ಪುರುಷರಿಗೆ ಸ್ತ್ರೀಯರು ಸಲಾಮ್ ಹೇಳಬಾರದೆಂಬ ದೃಷ್ಟಿಕೋನವು ಸ್ತ್ರೀಯರ ಲೈಂಗಿಕ ಅಂಶಕ್ಕೆ ಹೆಚ್ಚಿನ ಪ್ರಧಾನ್ಯ ನೀಡಿರುವುದೇ ಕಾರಣವೆಂದು ವ್ಯಕ್ತವಾಗುತ್ತದೆ. ಆದರೆ ಪ್ರವಾದಿಯವರು ಅಂಥ ಆದೇಶ ನೀಡಿಲ್ಲ. ತಿರ್ಮಿದಿ ಉದ್ಧರಿಸಿದ ಹದೀಸ್ ಇದಕ್ಕೆ ವ್ಯತಿರಿಕ್ತವಾಗಿದೆ.

ಯಝೀದ್‌ರ ಪುತ್ರಿ ಅಸ್ಮಾ ವರದಿ ಮಾಡಿದ್ದಾರೆ: ಒಂದು ದಿನ ಪ್ರವಾದಿಯವರು(ಸ) ಮಸೀದಿಯಲ್ಲಿ ಹಾದು ಹೋಗುತ್ತಿರುವಾಗ ಕೆಲವು ಮಹಿಳೆಯರು ಕುಳಿತು ಕೊಂಡಿದ್ದರು. ಆಗ ಅವರು ಸಲಾಮ್ ಹೇಳುತ್ತಾ ಕೈ ಬಗ್ಗಿಸಿದರು.

ಕಾಲಕ್ರಮೇಣ ಮಹಿಳೆಯರಿಗೆ ಮಸೀದಿಯನ್ನೇ ನಿಷಿದ್ಧಗೊಳಿಸಲಾಗಿದೆಯಲ್ಲವೇ? ಆ ಹಿನ್ನೆಲೆಯಲ್ಲಿ ಸಲಾಮ್ ಕೂಡಾ ನಿಷಿದ್ಧವಾಗಿರುವುದರಲ್ಲಿ ಅಚ್ಚರಿಯಿಲ್ಲ.



## ಲೋಲುಪ್ತ

ಎಳೆತನದ ಸಿರಿತನದಲಿ
ಚೆಂದಾಗಿ ಒಂದಾಗಿ ಕೂಡಿ
ಬೀಳುತ ಏಳುತ ಅಂಬೆಗಾಲನಿಡುತ
ಯೌವನದಲಿ ಸಿರಿ ಸಂಪತ್ತಿನೊಳು
ಲೋಲುಪ್ತನಾಗಿ ಸ್ವಾರ್ಥದಿಂದ
ಮೆರೆಯುತಿರುವೆ

ಎಲ್ಲವೂ ನನ್ನದಾಗಲೆಂದು ಬಯಸುತ
ಅನ್ಯರ ಏಳ್ಗೆ ಸಹಿಸದೇ ಸ್ವಾರ್ಥಿಯಾಗಿ
ಸಹಾಯ ಸಹಕಾರ ಮಾಡಿದ
ಎಲ್ಲರಲೂ ತನ್ನನ್ನೇ ತಾನು ಮರೆತು
ಗರ್ವದಿಂದ ವರ್ತಿಸುತಿರುವನು

ಬಂಧು–ಭಗಿನಿಯರ ಸಹಾಯವಿಲ್ಲದೆ
ಸಾಧನೆ ನನ್ನದೆಂಬ ಭ್ರಾಂತಿಯಲಿ
ಮುಳುಗಿರುವನು ಹಣದ
ಮದದೊಳು ಕಣ್ಣಿಗೆ ಕಾಣರು
ನೆಂಟರಿಷ್ಟರು

ಉಮರ್ ಶರೀಫ್ ಎನ್.
ಕುಂಟೋಜಿ, ಬಿಜಾಪುರ

# ಸಹೀಹ್ ಬುಖಾರಿ

ಅನುವಾದ: ಎಂ.ಎಸ್.ಕೆ.

## ಈದ್ ಪ್ರವಚನ

**504.** ಅಬೂ ಸಈದ್ ಖುದ್ರೀ ಹೇಳುತ್ತಾರೆ- ಪ್ರವಾದಿ(ಸ) ಈದುಲ್ ಅಝ್‌ಹಾ ಮತ್ತು ಈದುಲ್ ಫಿತ್ರ್‌ನಂದು ಈದ್‌ಗಾಕ್ಕೆ ಹೋಗುತ್ತಿದ್ದರು. ಪ್ರಪ್ರಥಮವಾಗಿ ನಮಾಝ್ ಮಾಡುತ್ತಿದ್ದರು. ತರುವಾಯ ಮರಳಿ ಬಂದು ಜನರ ಮುಂದೆ ನಿಲ್ಲುತ್ತಿದ್ದರು. ಜನರು ಪಂಕ್ತಿ ಬದ್ಧರಾಗಿ ಕುಳಿತಿರುತ್ತಿದ್ದರು. ಪ್ರವಾದಿಯವರು ಅವರಿಗೆ ಉಪದೇಶ ನೀಡುತ್ತಿದ್ದರು. ದೇವಾಜ್ಞೆಗಳ ಪಾಲನೆಗೆ ಆದೇಶಿಸುತ್ತಿದ್ದರು. ಯಾವುದಾದರೂ ಸೇನೆಯನ್ನು ಸಜ್ಜುಗೊಳಿಸಬಯಸಿದರೆ ಮಾಡುತ್ತಿದ್ದರು ಅಥವಾ ಇನ್ನಾವುದಾದರೂ ವಿಷಯದ ಆಜ್ಞೆ ನೀಡಬಯಸಿದರೆ ನೀಡುತ್ತಿದ್ದರು.

ಅಬೂ ಸಈದ್ ಹೇಳುತ್ತಾರೆ- ಜನರು(ಮರ್ವಾನ್‌ರ ಕಾಲದವರೆಗೆ) ಅದೇ ಸ್ಥಿತಿಯಲ್ಲಿದ್ದರು. ಎಲ್ಲಿಯವರೆಗೆಂದರೆ ಈದುಝ್ಝುಹಾ ಅಥವಾ ಈದುಲ್ ಫಿತ್ರ್ ನಮಾಝ್‌ಗಾಗಿ ನಾನು ಮರ್ವಾನ್‌ನೊಂದಿಗೆ ಹೊರಟು (ಆಗ ಮರ್ವಾನ್ ಮದೀನದ ಆಡಳಿತಾಧಿಕಾರಿಯಾಗಿದ್ದರು) ನಾವು ಈದ್‌ಗಾಕ್ಕೆ ಬಂದಾಗ ಅಲ್ಲಿ ಕಸೀರ್ ಬಿನ್ ಸಲತ್‌ರಿಂದ ಮಾಡಲಾದ ಒಂದು ಮಿಂಬರ್ ಇತ್ತು. ಮರ್ವಾನ್ ನಮಾಝ್‌ಗೆ ಮುಂಚೆ ಅದಕ್ಕೆ ಹತ್ತ ಬಯಸಿದಾಗ, ನಾನು ಅವರ ಬಟ್ಟೆಯನ್ನು ಹಿಡಿದುಕೊಂಡೆ. ಆದರೆ ಅವರು ಕೈಕೊಡವಿ ವೇದಿಕೆಯೇರಿ ನಮಾಝ್‌ಗಿಂತ ಮುಂಚೆ ಪ್ರವಚನ ನೀಡಿದರು. ನಾನು ಹೇಳಿದೆ- ನೀವು ಪ್ರವಾದಿಯವರ ಕ್ರಮವನ್ನು ಬದಲಿಸಿದಿರಿ. ಮರ್ವಾನ್ ಹೇಳಿದರು- ಅಬೂ ಸಈದ್! ನಿಮ್ಮಲ್ಲಿದ್ದ ಜ್ಞಾನ ಈಗ ಹೋಗುತ್ತಾ ಇದೆ. ನಾನು ಹೇಳಿದೆ- ಅಲ್ಲಾಹನಾಣೆ! ನಾನು ತಿಳಿದಿರುವುದಕ್ಕಿಂತ ಉತ್ತಮವಾದುದು ನನಗೆ ತಿಳಿದಿಲ್ಲ. ಆತ ಹೀಗೆ ಉತ್ತರಿಸಿದರು- ಜನರು ನಮ್ಮ ಕಾರಣದಿಂದ ನಮಾಝ್‌ನ ನಂತರ ಕುಳಿತುಕೊಳ್ಳುವುದಿಲ್ಲ. ಆದ್ದರಿಂದ ನಾನು ಪ್ರವಚನವನ್ನು ನಮಾಝ್‌ಗಿಂತ ಮುಂಚೆ ಮಾಡಿದೆ.

## ಈದ್ ಅದಾನ್

**505.** ಇಬ್ನು ಅಬ್ಬಾಸ್ ಮತ್ತು ಜಾಬಿರ್ ಬಿನ್ ಅಬ್ದುಲ್ಲಾ ಹೇಳುತ್ತಾರೆ ಈದ್‌ಝ್ಝುಹಾ ಮತ್ತು ಈದುಲ್ ಫಿತ್ರ್‌ನಂದು ಅದಾನ್ ಕೊಡಲಾಗುತ್ತಿರಲಿಲ್ಲ.

## ಹಬ್ಬದ ನಮಾಝ್

**506.** ಇಬ್ನು ಅಬ್ಬಾಸ್ ಹೇಳುತ್ತಾರೆ- ನಾನು ಈದ್‌ನ ದಿವಸ ಪ್ರವಾದಿ(ಸ), ಅಬೂಬಕರ್ ಸಿದ್ದೀಕ್, ಉಮರ್ ಮತ್ತು ಉಸ್ಮಾನ್‌ರ ಜೊತೆಯಲ್ಲಿದ್ದೆ. ಅವರೆಲ್ಲರೂ ಖುತ್ಬಾಕ್ಕಿಂತ ಮುಂಚೆ ನಮಾಝ್ ಮಾಡುತ್ತಿದ್ದರು.

## ಕುರ್ಬಾನಿ

**507.** ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ- ಪ್ರವಾದಿ(ಸ) ಹೇಳಿದರು- ಯಾವುದೇ ಕರ್ಮವು ಯಾವುದೇ ಕಾಲದಲ್ಲಿ ಈ ದಶದಿನಗಳಲ್ಲಿ ಇದಕ್ಕಿಂತ (ಕುರ್ಬಾನಿ) ಹೆಚ್ಚು ಶ್ರೇಷ್ಠವಾದುದಿಲ್ಲ. ಜನರು ಕೇಳಿದರು- ಜಿಹಾದ್? ಪ್ರವಾದಿ(ಸ) ಹೇಳಿದರು- ಜಿಹಾದ್ ಕೂಡಾ. ಆದರೆ, ಜೀವ-ಸೊತ್ತುಗಳನ್ನು (ಅಲ್ಲಾಹನಿಗಾಗಿ) ಅಪಾಯದಲ್ಲಿ ಹಾಕಿ ಯಾವುದೇ ರೀತಿಯಲ್ಲಿ ಮರಳಿ ಬಾರದವನ ಹೊರತು(ಅವನು ಹುತಾತ್ಮನಾಗಿದ್ದಾನೆ)

## ತಲ್ಬಿಯ

**508.** ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ- ಅವರೊಂದಿಗೆ ಕೇಳಲಾಯಿತು. ನೀವು ಪ್ರವಾದಿಯವರ ಜೊತೆಯಲ್ಲಿ ತಲ್ಬಿಯ ಹೇಗೆ ಹೇಳುತ್ತಿದ್ದಿರಿ. ಅವರು ಹೇಳಿದರು ತಲ್ಬಿಯ ಹೇಳುವವನನ್ನು ತಲ್ಬಿಯ ಹೇಳುವಾಗ ಆಕ್ಷೇಪಿಸಲಾಗುತ್ತಿರಲಿಲ್ಲ. ಅವರು ತಕ್ಬೀರ್ ಹೇಳುತ್ತಿದ್ದಾಗ ಅದನ್ನು ಆಕ್ಷೇಪಿಸಲಾಗುತ್ತಿರಲಿಲ್ಲ.

## ಈದ್ಗಾದಲ್ಲಿ ದಿಬಹ್

**509.** ಇಬ್ನು ಉಮರ್ ವರದಿ ಮಾಡುತ್ತಾರೆ- ಪ್ರವಾದಿ(ಸ) ಈದ್‌ಗಾದಲ್ಲಿ ನಹರ್ ಅಥವಾ ದಿಬಹ್ (ಕುರ್ಬಾನಿ) ಮಾಡುತ್ತಿದ್ದರು.

## ಈದ್ಗಾದ ದಾರಿ

**510.** ಜಾಬಿರ್ ಬಿನ್ ಅಬ್ದುಲ್ಲಾ ವರದಿ ಮಾಡುತ್ತಾರೆ- ಈದ್‌ನ ದಿವಸ ಪ್ರವಾದಿ(ಸ) ನಮಾಝ್ ಮಾಡಿ ಮರಳುವಾಗ ದಾರಿ ಬದಲಾಯಿಸುತ್ತಿದ್ದರು.

**511.** ಆಯಿಶಾ(ರ) ವರದಿ ಮಾಡುತ್ತಾರೆ- ಇಥಿಯೋಪಿಯನ್ ಹುಡುಗಿಯರ ಹಾಡಿನ ಕುರಿತು ಹದೀಸ್ ಮೇಲೆ ಬಂದಿದೆ. ಇಲ್ಲಿ ಹೆಚ್ಚುವರಿಯಾಗಿ ಆಯಿಶಾ ಹೇಳುತ್ತಾರೆ- ಉಮರ್(ರ) ಅವರನ್ನು ಜರೆದರು. ಆಗ ಪ್ರವಾದಿ(ಸ) ಹೇಳಿದರು- ಅರ್ಫಿ ದಾವರೆ! ನಿಶ್ಚಿಂತೆಯಿಂದ ಹಾಡಿರಿ. (ಉಮರ್, ಅವರನ್ನು ಹಾಡಲು ಬಿಡಿ)

# ಮುಜ್ಜಾಅರ ಬಂಧನದ ಮಾರನೆ ದಿನ



ಇದೇ ಘಟ್ಟದಲ್ಲಿ ಮುಜ್ಜಾಅ ಬಿನ್ ಮುರಾದ್‌ರ ರಂಗ ಪ್ರವೇಶವಾಯಿತು. ಮುಜ್ಜಾಅ ಬನೂ ಹನೀಫಾಕ್ಕೆ ಸೇರಿರುವ ಒಂದು ಗೋತ್ರದ ನಾಯಕನಾಗಿದ್ದರು. ಈಗ ಅವರು ಬನೂ ಆಮಿರ್, ಬನೂ ತಮೀಮ್ ವಿಭಾಗಗಳೊಡನಿದ್ದ ಹಳೇ ವೈಷಮ್ಯವನ್ನು ತೀರಿಸುವುದಕ್ಕಾಗಿ ಹೊರಟು ಬಂದಿದ್ದರು. ಅವರು ಮತ್ತು ಅವರ ಸಂಗಡಿಗರಿಗೆ ಈ ಕೆಲಸವನ್ನು ಅತಿಬೇಗನೇ ಮಾಡಿ ಮುಗಿಸಬೇಕಾಗಿದೆ. ಖಾಲಿದ್ ಮತ್ತು ಸಂಗಡಿಗರು ಯಮಾಮವನ್ನು ತಲುಪಿದರೆ ಅವರಿಗೆ ತಮ್ಮ ಈ ಉದ್ದೇಶವನ್ನು ಸಾಧಿಸುವುದಕ್ಕೆ ಅಸಾಧ್ಯವಾಗಬಹುದು. ಆದುದರಿಂದ ಅವರು ಬೇಗನೇ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಹೊರಟುಬಂದಿದ್ದಾರೆ.

ತಮ್ಮ ಉದ್ದೇಶವನ್ನು ಪೂರೈಸಿ ಮುಜ್ಜಾಅ ತನ್ನ ಸಂಗಡಿಗರೊಂದಿಗೆ ಹಿಂದಕ್ಕೆ ಮರಳುತ್ತಿದ್ದಾರೆ. ಈ ರೀತಿ ಅವರು ತುಂಬ ದೂರಕ್ಕೆ ಬಂದು ಬಿಟ್ಟಿದ್ದಾರೆ. ಆಯಾಸವಾಗಿರುವುದರಿಂದ ಸ್ವಲ್ಪ ಸಮಯ ವಿಶ್ರಾಂತಿ ಪಡೆಯೋಣವೆಂದು ನಿರ್ಧರಿಸಿದರು. ಖಾಲಿದ್‌ರ ಸೇನೆ ಈ ವಿಶ್ರಾಂತಿಯ ಸಮಯದಲ್ಲಿ ಮಿಂಚಿನ ದಾಳಿ ನಡೆಸಿತು. ಖಾಲಿದ್‌ರಾದರೋ ಮುಜ್ಜಾಅ ಮತ್ತು ಅವರ ಸಂಗಡಿಗರು ತಮ್ಮನ್ನು ಆಕ್ರಮಿಸಲು ಅಡಗಿ ನಿಂತಿರುವ ಶತ್ರು ಸೈನ್ಯವೆಂದು ಭಾವಿಸಿದ್ದರು. ಆದರೆ ಮುಜ್ಜಾಅರಿಗೆ ಖಾಲಿದ್‌ರ ಸೇನೆ ಸಮೀಪಕ್ಕೆ ಬಂದ ಮೇಲೆಯೇ ಮುಸ್ಲಿಮ್ ಸೇನೆ ಅಲ್ಲಿಗೆ ತಲುಪಿರುವುದು ತಿಳಿಯಿತು. ಶತ್ರುಗಳ ಸೈನ್ಯವೇ ಆಗಿರಬೇಕೆಂದು ತಪ್ಪಾಗಿ ಭಾವಿಸಿದ ಖಾಲಿದ್‌ರು ಅವರನ್ನು ವಧಿಸುವಂತೆ ಆಜ್ಞಾಪಿಸಿದರು.

ಖಾಲಿದ್ ಹೀಗೆ ಏಕಾಏಕಿಯಾಗಿ ವಿವೇಚನಾ ರಹಿತ ಆಜ್ಞೆಯನ್ನು ನೀಡಿರಲಿಲ್ಲ. ಮುಜ್ಜಾಅ ಮತ್ತು ಸಂಗಡಿಗರು ಖಾಲಿದ್‌ರಿಗೆ ನೀಡಿದ ವಿವರಣೆಯಿಂದ ಯಾವುದೇ ಉಪಕಾರವಿರಲಿಲ್ಲ. ಅವರ ವಿವರಣೆಯು ಅಪಾಯದಿಂದ ಪಾರುಗೊಳಿಸುವುದಕ್ಕಿಂತ ಅವರ ಬಗ್ಗೆ ಇನ್ನಷ್ಟು ಸಂದೇಹವನ್ನು ಹೆಚ್ಚಿಸುವಂತಿತ್ತು.

ಖಾಲಿದ್ ಅವರನ್ನು ಪ್ರಶ್ನಿಸಿದರು,

"ಇಸ್ಲಾಮಿನ ಕುರಿತು ನಿಮ್ಮ ಅಭಿಪ್ರಾಯವೇನು?"

ಅವರು ಅದಕ್ಕೆ ಹೀಗೆ ಉತ್ತರಿಸಿದರು.

"ನಿಮಗೋರ್ವ ಪ್ರವಾದಿಯಿರುವಂತೆ ನಮಗೂ ಓರ್ವ ಪ್ರವಾದಿಯಿದ್ದಾರೆ."

ಸಾರಿಯ ಬಿನ್ ಆಮೀರ್ ಎಂಬವರು ಮುಜ್ಜಾಅರ ತಂಡದಲ್ಲಿದ್ದ ಓರ್ವ ವ್ಯಕ್ತಿಯಾಗಿದ್ದರು. ಅವರಿಗೆ ತಮ್ಮ ಕೊರಳನ್ನು ಖಾಲಿದ್‌ರ ಖಡ್ಗವು ಸೀಳುತ್ತದೆ ಎಂದು ಮನವರಿಕೆಯಾದಾಗ ಅವರು ಮುಜ್ಜಾಅರನ್ನು ತೋರಿಸುತ್ತಾ ಖಾಲಿದ್‌ರನ್ನು ಉದ್ದೇಶಿಸಿ ಹೇಳಿದರು,

"ಹೇ ಮನುಷ್ಯಾ, ಒಳ್ಳೆಯದೋ ಕೆಟ್ಟದೋ ಯಾವುದೇ ಇರಲಿ ನೀವು ಈ ನಾಡಿಗೆ ಏನು ಬಯಸುವುದಾಗಿರಲಿ. ಈ ವ್ಯಕ್ತಿಯನ್ನು ನೀವು ಜೀವಂತವಾಗಿ ಉಳಿಸಿರಿ."

ಮುಜ್ಜಾಅರಿಗೆ ಜನರ ಮೇಲಿರುವ ಪ್ರಭಾವವನ್ನು ಸಾರಿಯತ್‌ರ ಮಾತುಗಳು ಸ್ಪಷ್ಟಪಡಿಸುತ್ತಿವೆ. ಆದುದರಿಂದ ಖಾಲಿದ್ ಸದ್ಯಕ್ಕೆ ಮುಜ್ಜಾಅರನ್ನು ವಧಿಸುವುದು ಬೇಡವೆಂದು ಆಜ್ಞಾಪಿಸಿದರು ಮತ್ತು ಮುಜ್ಜಾಅರನ್ನು ಒಂದು ಅಡಮಾನ ಸೊತ್ತಿನಂತೆ ಜತನದಿಂದ ನೋಡಿಕೊಳ್ಳಬೇಕೆಂದು ತನ್ನ ಸಂಗಡಿಗರಿಗೆ ಆದೇಶಿಸಿದರು. ಮುಜ್ಜಾಅರ ಕಾವಲಿಗೆ ತನ್ನ ಪತ್ನಿ ಉಮ್ಮು ತಮೀಮ್‌ರನ್ನು ನೇಮಿಸಿದರು.

ಯಮಾಮಾದ ಉತ್ತರ ಭಾಗದಲ್ಲಿ ಅಕ್ರಿಬಾ ಎಂಬ ಪ್ರದೇಶವಿದೆ. ಮುಸೈಲಿಮ ಸೇನೆಯನ್ನು ಅಲ್ಲಿ ಸಜ್ಜುಗೊಳಿಸಿ ನಿಲ್ಲಿಸಿದ್ದಾನೆ. ಖಾಲಿದ್‌ರ ಸೇನೆ ಮುಜ್ಜಾಅರನ್ನು ಬಂಧಿಸಿದ ಮಾರನೆಯ ದಿನ ಮುಸೈಲಿಮನ ಸೇನೆಯ ಎದುರು ಬಂದು ನೆರೆಯಿತು.

ಮುಸೈಲಿಮ ಮತ್ತು ಖಾಲಿದ್‌ರ ಎರಡು ಸೇನೆಗಳು ಆಕ್ರಮಣವನ್ನು ಪ್ರಾರಂಭಿಸುವ ಸೂಚನೆಗಾಗಿ ಕಾಯುತ್ತಿವೆ. ಯುದ್ಧದಲ್ಲಿ ಮೊದಲನೆಯ ದಿವಸ ಅತಿಪ್ರಾಮುಖ್ಯವಾಗಿರುತ್ತದೆಂದು ಈ ಎರಡೂ ಸೇನೆಗಳು ಅರಿತಿದ್ದವು. ಆರಂಭ ಘಟ್ಟದಲ್ಲಿ ಯಶಸ್ವಿಯಾದವರಿಗೆ ಯುದ್ಧರಂಗವನ್ನು ತಮ್ಮ ನಿಯಂತ್ರಣದಲ್ಲಿಡಲು ಸಾಧ್ಯವಾಗಬಹುದು. ಮಾತ್ರವಲ್ಲ ಶತ್ರುಗಳನ್ನು ಸಂಪೂರ್ಣವಾಗಿ ನಿಸ್ತೇಜಗೊಳಿಸಿ ಅವರೇ ವಿಜಯಿಗಳೂ ಆಗಬಹುದು. ವಿಜಯ ಪತಾಕೆಯನ್ನು ಅವರೇ ಹಾರಿಸಬಹುದು.

ಇಲ್ಲಿ ರಾಷ್ಟ್ರವಿರೋಧಿ ಚಟುವಟಿಕೆಗಳಿಗೆ ಮುಸೈಲಿಮನು ನೇತೃತ್ವವನ್ನು ನೀಡುತ್ತಿದ್ದಾನೆ... ಹಿಂದಡಿಯಿಡದೆ ಅದರಲ್ಲೇ ಅವನು ದೃಢವಾಗಿದ್ದಾನೆ. ಅವನನ್ನು ಪ್ರಶ್ನಿಸುವವರಿಗೆ ಯುದ್ಧದ ಮೂಲಕ ಉತ್ತರ ನೀಡುವ ಖಚಿತ ನಿರ್ಧಾರ ಹೊಂದಿದ್ದಾನೆ.

ಇವರು ಜಗಳಗಂಟರು. ಮುಹಮ್ಮದ್‌ರ ಪ್ರವಾದಿತ್ವವು ಕೇವಲ ಹಿಜಾಸಿಗಳಿಗೆ (ಮಕ್ಕಾ ಮದೀನಾ ನಿವಾಸಿಗಳಿಗೆ) ಮಾತ್ರ ಸೀಮಿತವಾಗಿದ್ದು ಆ ಪ್ರದೇಶದ ಹೊರಗಿನವರಾದ ಯಾರಿಗೂ ಅನ್ವಯವಲ್ಲವೆಂದು ಪ್ರತಿಪಾದಿಸಿ ಇಸ್ಲಾಮೀ ರಾಷ್ಟ್ರಕ್ಕೆ ಇವರು ಬೆದರಿಕೆಯನ್ನು ಒಡ್ಡುತ್ತಿದ್ದಾರೆ. ಇವರ ಸೇನೆಯಲ್ಲಿ ನಲ್ವತ್ತು ಅಥವಾ ಐವತ್ತು ಸಾವಿರ ಸೈನಿಕರಿದ್ದರೆಂಬುದಾಗಿ ಉಲ್ಲೇಖಿಸಲ್ಪಟ್ಟಿದೆ. ಮುಸೈಲಿಮನೇ ಈ ಬೃಹತ್ ಸೇನೆಗೆ ನಾಯಕನಾಗಿದ್ದಾನೆ...!

ಈಗ ಮುಸೈಲಿಮನ ಭವಿಷ್ಯವನ್ನು ನೋಡಲು ಕಾದು ಕುಳಿತಿರುವ ಕೆಲವು ಪ್ರದೇಶಗಳು ಈಗ ಹಿಜಾಸ್‌ನ ದಕ್ಷಿಣ ಭಾಗದಲ್ಲಿದ್ದವು. ಯಮನ್, ಮಹರಾ, ಬಹ್ರೈನ್, ಹಝುರುಲ್ ಮೌತ್ ಈ ರೀತಿ ಕಾಯುತ್ತಾ ನಿಂತಿರುವ ಪ್ರದೇಶಗಳು. ಮುಸ್ಲಿಮರ ಕೈಯಲ್ಲಿ ಮುಸೈಲಿಮನಿಗೆ ಸಂಭವಿಸುವ ಪರಿಸ್ಥಿತಿಯನ್ನು ನೋಡಿ ಅವು ತಮ್ಮ ಭವಿಷ್ಯವನ್ನು ರೂಪಿಸುವುದೆಂದು ಕಾದು ಕುಳಿತಿದ್ದವು.

ಮುಸ್ಲಿಮ್ ಸೇನೆಗೆ ಖಾಲಿದ್‌ರು ನಾಯಕರಾಗಿರುವಷ್ಟೇ ಅವರ ಸೇನೆಯಲ್ಲಿ ಪವಿತ್ರ ಕುರ್‌ಆನನ್ನು ಕಂಠಪಾಠ ಮಾಡಿರುವ ಹಲವಾರು ಮಂದಿಯಿದ್ದಾರೆ. ನಿಜವಾಗಿ ಇಸ್ಲಾಮೀ ರಾಷ್ಟ್ರದ ಭವಿಷ್ಯವೇ ಈ ಸೇನೆಯ ವಿಜಯ ಪರಾಜಯವನ್ನು ಆಧರಿಸಿ ನಿಂತಿತ್ತು. ಖಾಲಿದ್, ಒಂದು ಜೀವನ್ಮರಣ ಹೋರಾಟಕ್ಕೆ ಸಿದ್ಧವಾಗಿಯೇ ಇಲ್ಲಿಗೆ ಬಂದಿರುವರು. ಯಾವ ಬೆಲೆ ತೆತ್ತಾದರೂ ವೀರಾವೇಶದಿಂದ ಸೆಣಸುವುದು ಅವರಿಗೆ ಅನಿವಾರ್ಯವಾಗಿದೆ.

## ಸಿದ್ದೀಕುಲ್ ಅಕ್ಬರ್ - 36

ಇ.ಎನ್. ಇಬ್ರಾಹೀಮ್

ಅದೇ ವೇಳೆ ಎದುರು ಪಕ್ಷವೂ ಈ ರೀತಿಯೇ ಸಿದ್ಧವಾಗಿ ನಿಂತಿದೆ. ಮುಸೈಲಿಮನ ಪುತ್ರ ಶುರಹ್‌ಬೀಲ್ ತಮ್ಮ ಸೇನೆಯನ್ನು ಯುದ್ಧಕಿಚ್ಚಿನಲ್ಲಿ ವಿಲೀನಗೊಳಿಸುವ ತಂತ್ರಗಳನ್ನು ಪ್ರಯೋಗಿಸುತ್ತಿದ್ದಾನೆ. ಅವನು ತನ್ನ ಸೈನಿಕರಿಗೆ ನೀಡುತ್ತಿದ್ದ ಉಪನ್ಯಾಸವು ಮನಸ್ಸಿನ ಆಳವನ್ನು ಹೊಕ್ಕು ಭಾವನೆಗಳನ್ನು ಪುಟಿದೆಬ್ಬಿಸುವ ರೀತಿಯಲ್ಲಿತ್ತು.

ಶುರಹ್‌ಬೀಲ್ ಹೇಳಿದನು,

"ಬನೂ ಹನೀಫಾದವರೇ ಇಂದು ಯುದ್ಧದ ದಿನವಾಗಿದೆ. ಇಂದು ನೀವು ಸೋತರೆ ನಿಮ್ಮ ಮಹಿಳೆಯರು ಸೆರೆಯಾಳುಗಳಾಗುವರು. ಮುಸ್ಲಿಮರಿಗೆ ದಾಸಿಗಳಾಗುವರು ಮತ್ತು ಅವರು ನತದೃಷ್ಟರಾಗುತ್ತಾರೆ.

ಆದುದರಿಂದ ಯುದ್ಧವನ್ನು ಮಾಡಿರಿ. ನಿಮ್ಮ ಅಭಿಮಾನವನ್ನು ಸಂರಕ್ಷಿಸಿರಿ. ನಿಮ್ಮ ಮಹಿಳೆಯರನ್ನು ರಕ್ಷಿಸಿರಿ."

ಅಂತೂ ಯುದ್ಧವು ಆರಂಭಗೊಂಡಿತು. ಈಗ ಎರಡೂ ಸೇನೆಗಳು ಮುಖಾಮುಖಿಗಿಳಿದಿವೆ. ಆದರೂ ಮುಸ್ಲಿಮರ ಸೇನೆ ಅಗತ್ಯವಿರುವಷ್ಟು ಉತ್ಸಾಹವನ್ನು ಪ್ರದರ್ಶಿಸುತ್ತಿರಲಿಲ್ಲ. ಈ ಮೊದಲು ಮುಸ್ಲಿಮರ ನಡುವೆಯೇ ಪರಸ್ಪರರನ್ನು ಹಂಗಿಸಿ ಸಂಭಾಷಣೆಯು ನಡೆದಿದ್ದವು. ಅವರು ಪರಸ್ಪರರ ಮುಂದೆ ತಮ್ಮ ದೊಡ್ಡಸ್ತಿಕೆಯನ್ನು ಹೇಳಿಕೊಂಡಿದ್ದರು. ನಗರ ವಾಸಿಗಳು ಮತ್ತು ನಗರದ ಹೊರಗೆ ವಾಸಿಸುತ್ತಿರುವವರು ತಮ್ಮ ಹೆಚ್ಚುಗಾರಿಕೆಯನ್ನು ಬಣ್ಣಿಸುತ್ತಿದ್ದಾರೆ.

"ನಾವು ನಗರ ವಾಸಿಗಳು. ನಮಗೆ ನಗರ ವಾಸಿಗಳೊಂದಿಗೆ ಮಾತ್ರ ಯುದ್ಧವನ್ನು ಮಾಡಲು ಬರುತ್ತದೆ. ಆಗ ನಗರದ ಹೊರಗಿನವರು ಸುಮ್ಮನೆ ಕೂರುವರೇ? ಅವರು ಕೂಡ ಮಾತಿನ ಚಾಟಿಯೇಟು ಬೀಸಿದರು. ನಗರ ವಾಸಿಗಳಿಗೆ ಯುದ್ಧದ ಪಟ್ಟುಗಳೇ ಗೊತ್ತಿಲ್ಲ. ಅಷ್ಟೇ. ಅವರಿಗೆ ಯುದ್ಧವೆಂದರೆ ಏನೆಂದು ಗೊತ್ತೇ ಇಲ್ಲ" ಎಂದರು.

## ಅಂಧಕಾರ ಅಳಿಯಲಿದೆ

ದೇವನ ವಿಶ್ವದಲ್ಲಿ ಮನುಷ್ಯನು ಬಾಹ್ಯನೋಟಕ್ಕೆ ಒಂದು ವಿರೋಧಾಭಾಸವಾಗಿದ್ದಾನೆ. ಈ ವಿಶ್ವದಲ್ಲಿ ಪ್ರತಿದಿನ ಸರಿಯಾದ ಸಮಯಕ್ಕೆ ಸೂರ್ಯನು ಉದಿಸುತ್ತಾನೆ. ಆದರೆ ಮನುಷ್ಯನು ಇಂದು ಒಂದು ಮಾತನ್ನು ಹೇಳಿದರೆ ನಾಳೆ ಅದರಿಂದ ಹಿಂಜರಿಯುತ್ತಾನೆ. ಈ ವಿಶ್ವದಲ್ಲಿ ಬಂಡೆ ಕಲ್ಲುಗಳಿಂದಲೂ ನೀರು ಹೊರಡುತ್ತದೆ. ಆದರೆ ಮನುಷ್ಯನು ಇತರ ಮನುಷ್ಯರ ಜೊತೆ ಘೋರ ಅನ್ಯಾಯವೆಸಗುತ್ತಾನೆ. ಈ ವಿಶ್ವದಲ್ಲಿ ಚಂದ್ರನು ಕ್ರಮ ಪ್ರಕಾರ ಎಲ್ಲ ಸೃಷ್ಟಿಗಳ ಮೇಲೆ ಬೆಳಗುತ್ತದೆ. ಆದರೆ ಮನುಷ್ಯನು ಕೆಲವರ ಜೊತೆ ಒಳ್ಳೆಯದಾಗಿ ವರ್ತಿಸಿದರೆ ಇನ್ನು ಕೆಲವರ ಜೊತೆ ಕೆಟ್ಟದಾಗಿ ವರ್ತಿಸುತ್ತಾನೆ. ಈ ವಿಶ್ವವು ಪುಷ್ಪಗಳ ಮೂಲಕ ತನ್ನ ಕಂಪನ್ನು ಸೂಸುತ್ತದೆ. ಆದರೆ ಮನುಷ್ಯನು ಮುಳ್ಳಿಗಿಂತಲೂ ಕಡೆಯಾದ ವರ್ತನೆಯನ್ನು ತೋರುತ್ತಾನೆ. ಈ ವಿಶ್ವದಲ್ಲಿ ತಂಗಾಳಿಯು ಎಲ್ಲರಿಗಾಗಿ ಬೀಸುತ್ತದೆ. ಆದರೆ ಮನುಷ್ಯನು ಇಲ್ಲಿ ತನ್ನ ಸ್ವಾರ್ಥದ ಬಗ್ಗೆಯೇ ಚಿಂತಿತನಾಗಿರುತ್ತಾನೆ. ಈ ವಿಶ್ವದಲ್ಲಿ ಒಂದು ಮರವು ಇನ್ನೊಂದು ಮರಕ್ಕೆ ತೊಂದರೆ ಕೊಡುವುದಿಲ್ಲ. ಆದರೆ ಮನುಷ್ಯನು ಇತರರಿಗೆ ತೊಂದರೆ ಕೊಡುತ್ತಾನೆ. ಒಬ್ಬ ವ್ಯಕ್ತಿ ಇನ್ನೊಬ್ಬನನ್ನು ನಾಶ ಮಾಡುವುದರಲ್ಲಿ ಸಂತೋಷವನ್ನು ಕಾಣುತ್ತಾನೆ.

ಚಿಂತನೆ



ಇಬ್ರಾಹೀಮ್ ಸಈದ್

ಇವೆಲ್ಲವೂ ಈ ಲೋಕದಲ್ಲಿ ದಿನನಿತ್ಯ ನಡೆಯುತ್ತದೆ. ಆದರೆ ದೇವನು ಇದರಲ್ಲಿ ಹಸ್ತಕ್ಷೇಪ ನಡೆಸುವುದಿಲ್ಲ. ಅವನು ಈ ವಿರೋಧಾಭಾಸವನ್ನು ಕೊನೆಗೊಳಿಸುವುದಿಲ್ಲ. ವಿಶ್ವ ಸೃಷ್ಟಿಗಳಲ್ಲಿನ ದೇವನ ದರ್ಶನವು ಎಷ್ಟು ಸುಂದರವಾಗಿದೆ. ಆದರೆ ಮನುಷ್ಯ ಜೀವನದ ಕಳವಳಕಾರಿ ರಂಗದಲ್ಲಿ ಅವನ ದರ್ಶನವು ಎಷ್ಟು ಭಿನ್ನವಾಗಿದೆ. ದೇವನ ಮುಂದೆ ಮನುಷ್ಯನ ಕ್ರೌರ್ಯದ ಘಟನೆಗಳು ನಡೆಯುತ್ತವೆ. ಆದರೆ ಅವನು ಅದಕ್ಕೆ ಸ್ಪಂದಿಸುವಂತೆ ಕಾಣುವುದಿಲ್ಲ. ದೇವನು ಮನುಷ್ಯರ ಕಗ್ಗೊಲೆಯಾಗುವುದನ್ನು ನೋಡುತ್ತಾನೆ. ಆದರೆ ಅವನಿಗೆ ಅದರ ಬಗ್ಗೆ ಯಾವ ಪರಿವೆಯೂ ಇರುವುದಿಲ್ಲ. ಅವನು ವಿಶ್ವದ ಅತ್ಯಂತ ಸಂವೇದನಾಶೀಲ ಸೃಷ್ಟಿಗಳ ಜೊತೆ ಮೃಗೀಯ ವರ್ತನೆಯಾಗುವುದನ್ನು ಪರೀಕ್ಷಿಸುತ್ತಾನೆ. ಆದರೆ ಅದರಿಂದ ಅವನು ಚಿಂತಿತನಾದಂತೆ ಭಾಸವಾಗುವುದಿಲ್ಲ. ಎಲ್ಲವನ್ನು ಕಂಡೂ ಕಾಣದಂತೆ ಇರಲು ಅವನೇನು ಕಲ್ಲಿನ ಪ್ರತಿಮೆಯೇ?

ಈ ಪ್ರಶ್ನೆಯು ಎಲ್ಲ ಕಾಲದ ಮನುಷ್ಯನನ್ನು ಬಹಳವಾಗಿ ಕಾಡಿದೆ. ಆದರೆ ಈ ಪ್ರಶ್ನೆ ಏಕೆ ಉದ್ಭವಿಸುತ್ತದೆ? ಇದಕ್ಕೆ ಕಾರಣ ಸೃಷ್ಟಿಗಳ ಬಗೆಗಿನ ಸೃಷ್ಟಿಕರ್ತನ ನೀತಿಯು ನಮಗೆ ತಿಳಿಯದಿರುವುದಾಗಿದೆ. ಸೃಷ್ಟಿಕರ್ತನ ಯೋಜನೆಯಂತೆ ಈ ಲೋಕವು ಪರೀಕ್ಷಾ ಗೃಹವಾಗಿದೆ. ನಾವು ಅದನ್ನು ಪ್ರತಿಫಲದ ಸ್ಥಳವಾಗಿ ಕಾಣಬಯಸುತ್ತೇವೆ. ನಾಳೆ ಸಂಭವಿಸಲಿಕ್ಕಿರುವುದನ್ನು ನಾವು ಇಂದೇ ನಮ್ಮ ಕಣ್ಣಾರೆ ನೋಡಲು ಬಯಸುತ್ತೇವೆ.

ರಾತ್ರಿಯ ಕತ್ತಲೆಯ ಬಳಿಕ ಹಗಲಿನ ಬೆಳಕು ಹರಿಯುತ್ತದೆ. ಅದೇ ರೀತಿ ಜೀವನದ ಈ ಅಂಧಕಾರವೂ ಖಂಡಿತ ಅಳಿಯಲೇಬೇಕು. ಅನ್ಯಾಯಗಾರನು ಮತ್ತು ಅನ್ಯಾಯಕ್ಕೊಳಗಾದವನು, ಶೋಷಕನು ಮತ್ತು ಶೋಷಿತನು ಬೇರ್ಪಡಬೇಕು. ವಿದ್ರೋಹಿಗಳ ಕತ್ತು ಕಡಿಯಲ್ಪಡಬೇಕು. ಸತ್ಯವಂತರಿಗೆ ಅವರ ಸತ್ಯದ ಪ್ರತಿಫಲ ದೊರಕಬೇಕು. ಇವೆಲ್ಲವೂ ಪೂರ್ಣರೂಪದಲ್ಲಿ ನಡೆಯಲಿರುವುದು. ಆದರೆ ಈ ಲೋಕದಲ್ಲಲ್ಲ. ಪರಲೋಕದಲ್ಲಿ, ಇಂದಲ್ಲ ನಾಳೆ. ಮರಣಕ್ಕಿಂತ ಮುಂಚೆಯಲ್ಲ, ಮರಣಾನಂತರ.

# ಫಿರ್‌ಔನನ ಆರೋಪಗಳು

**ಮೂಸಾ V/S ಫಿರ್‌ಔನ್- 22**

**ಅಖ್ಲಾಕ್ ಹುಸೈನ್**

ಓರ್ವ ಸಾಮಾನ್ಯ ಬುದ್ಧಿಯ ವ್ಯಕ್ತಿಯ ಮಟ್ಟಿಗೆ ಮೂಸಾ(ಅ) ಫಿರ್‌ಔನನ ತುಂಬಿದ ಸಭೆಯಲ್ಲಿ ತೋರಿಸಿದ ಪವಾಡಗಳು ಸಾಕಾಗಿತ್ತು. ಆದರೆ ಓರ್ವ ಹಠಮಾರಿ, ಉದ್ಧಟ ವ್ಯಕ್ತಿಗೆ ಎಷ್ಟೇ ಸ್ಪಷ್ಟ ಪುರಾವೆ ತೋರಿಸಿದರೂ, ದೃಷ್ಟಾಂತ ಕಂಡರೂ ಅದು ಅವನ ಮೇಲೆ ಪ್ರಭಾವ ಬೀರುವುದಿಲ್ಲ. ಇದೇ ಅವಸ್ಥೆ ಫಿರ್‌ಔನ್‌ನದೂ ಆಯಿತು. ಅವನ ಈ ಮನೋವೃತ್ತಿಯ ಚಿತ್ರಣವನ್ನು ಪವಿತ್ರ ಕುರ್‌ಆನ್ ಈ ರೀತಿ ವಿವರಿಸಿದೆ,

ನಾವು ಫಿರ್‌ಔನನಿಗೆ ನಮ್ಮ ಎಲ್ಲ ನಿದರ್ಶನಗಳನ್ನೂ ತೋರಿಸಿದೆವು. ಆದರೆ ಅವನು ಸುಳ್ಳಾಗಿಸುತ್ತಲೇ ಹೋದನು ಮತ್ತು ನಿರಾಕರಿಸಿದನು. (ತಾಹಾ: 56)

ಈ ಸೂಕ್ತದಲ್ಲಿ ಫಿರ್‌ಔನನಂತಹವರ ನೈಜ ಕೊಂಕು ಮತ್ತು ಮೂಲಭೂತ ಕೆಡುಕನ್ನು ಬೆಟ್ಟು ಮಾಡಲಾಗಿದೆ. ಅಧಿಕಾರ ಮದದಿಂದ ಪ್ರಮತ್ತನಾಗಿರುವವನು, ಅವನ ಕೈಯಲ್ಲಿ ಎಲ್ಲ ಅಧಿಕಾರಗಳಿರುವಾಗ, ಅವನ ಎದುರು ಪಕ್ಷದವನು ಬಾಹ್ಯ ನೋಟಕ್ಕೆ ದುರ್ಬಲ, ಅಸಹಾಯಕನಾಗಿದ್ದರೆ, ಅಂತಹವನ ಮುಂದೆ ಪುರಾವೆಗಳ ರಾಶಿಯನ್ನೇ ಹಾಕಿ ಅವನ ಮನಪರಿವರ್ತನೆ ಮಾಡಲು ಪ್ರಯತ್ನಿಸಿದರೂ ಯಾವುದೇ ಮಾತು ಅವನನ್ನು ಪ್ರಭಾವಿತಗೊಳಿಸಲಾರದು. ಬದಲಾಗಿ ತೈಲಕ್ಕೆ ಪೆಟ್ರೋಲು ಸುರಿದಂತೆ ಅವನ ಕೋಪ ಇನ್ನಷ್ಟು ಪ್ರಜ್ವಲಿಸುತ್ತದೆ. ಮೂಸಾ(ಅ) ಫಿರ್‌ಔನನಿಗೆ ಮನಮುಟ್ಟುವ ಶೈಲಿಯಲ್ಲಿ ಪುರಾವೆಗಳನ್ನೂ, ಲಾಠಿ ಮತ್ತು ಪ್ರಕಾಶ ಹಸ್ತಗಳಂತಹ ಪುರಾವೆಗಳಿಂದಲೂ ಅವನ ಸಂಶಯಗಳಿಗೆ ಸೂಕ್ತ ಉತ್ತರದಿಂದಲೂ ಸತ್ಯವನ್ನು ಮನವರಿಕೆ ಮಾಡಿಸಲು ಪ್ರಯತ್ನಿಸಿದರು. ಆದರೆ ಚಿಕಿತ್ಸೆ ಹೆಚ್ಚಿದಂತೆ ರೋಗವೂ ಉಲ್ಬಣಗೊಳ್ಳುತ್ತಾ ಹೋಯಿತು.

ದೃಷ್ಟಾಂತಗಳು ನೋಡಿದಂತೆಲ್ಲ ಅವನ ಉದ್ಧಟತನ ಹೆಚ್ಚುತ್ತಲೇ ಸಾಗಿತು. ತನ್ನ ಅಪಪ್ರಚಾರದ ಬತ್ತಳಿಕೆಯಿಂದ ಸಕಲ ಅಸ್ತ್ರಗಳನ್ನೂ ತೆಗೆದು ಹೇಳತೊಡಗಿದ.

ಈ ವ್ಯಕ್ತಿ ಖಂಡಿತ ಓರ್ವ ನುರಿತ ಜಾದೂಗಾರ. ತನ್ನ ಜಾದೂವಿನ ಬಲದಿಂದ ನಿಮ್ಮ ನಾಡಿನಿಂದ ಹೊರಹಾಕ ಬಯಸಿದ್ದಾನೆ. ಪವಿತ್ರ ಕುರ್‌ಆನ್ ಅವನ ಈ ಮಾತನ್ನು ಈ ರೀತಿ ಹೇಳಿದೆ,



ಅವನು ಹೀಗೆಂದನು- "ಓ ಮೂಸಾ, ನೀನು ನಿನ್ನ ಜಾದೂವಿನ ಬಲದಿಂದ ನಮ್ಮನ್ನು ನಮ್ಮ ದೇಶದಿಂದ ಹೊರಕ್ಕಟ್ಟಲಿಕ್ಕಾಗಿ ಬಂದಿರುವೆಯೋ? (ತಾಹಾ: 57)

ಈ ಒಂದು ವಾಕ್ಯದಲ್ಲಿ ಅವನ ಕುತಂತ್ರದ ಎಲ್ಲ ಅಸ್ತ್ರಗಳನ್ನೂ ಬಹಳ ಚಾಣಾಕ್ಷತನದಲ್ಲಿ ಪ್ರಯೋಗಿಸಿದ.

ಅವನು ಮೂಸಾರ ಮೇಲೆ, ನೀನು ಪ್ರವಾದಿಯಲ್ಲ. ಕೇವಲ ಓರ್ವ ಜಾದೂಗಾರ ಎಂದು ಆರೋಪ ಹೊರಿಸಿ ಅವರನ್ನು ಸುಳ್ಳುಗಾರನೆಂದು ಸಾಬೀತು ಪಡಿಸಲು ಪ್ರಯತ್ನಿಸಿದನು. ಮಾತ್ರವಲ್ಲ, ಮೂಸಾರ ಸತ್ಯಪರತೆ, ಧೈರ್ಯ-ಸ್ಥೈರ್ಯ ಮತ್ತು ದಿಟ್ಟತನದಿಂದಾಗಿ ಮೂಡಿದ್ದ ನೈತಿಕ ಪ್ರಭಾವವನ್ನು ಅಳಿಸಿ ಹಾಕಲೂ ಪ್ರಯತ್ನಿಸಿದನು.

ಇನ್ನೊಂದೆಡೆ, ಈ ಎಲ್ಲ ತಂತ್ರಗಾರಿಕೆಯು ಅಧಿಕಾರವನ್ನು ಗಳಿಸುವ ಹುನ್ನಾರವಾಗಿದ್ದು, ಈ ಜಾದೂವಿನ ಮರೆಯಲ್ಲಿ ಸ್ವಯಂ ಸಾಮ್ರಾಟನಾಗುವ ಅಭಿಲಾಷೆ ಅಡಗಿದೆ ಎಂಬ ಆರೋಪವನ್ನೂ ಹೊರಿಸಿದನು.

ಮತ್ತೊಂದೆಡೆ, ತನ್ನ ಆಸ್ಥಾನಿಕರು ಮತ್ತು ಸ್ವಜನಾಂಗದಲ್ಲಿ ಅಪಾಯದ ಪ್ರಜ್ಞೆ ಮತ್ತು ಭೀತಿ ಹುಟ್ಟಿಸಲು ಪ್ರಯತ್ನಿಸಿದನು. ಈ ವ್ಯಕ್ತಿ ಪ್ರಬಲನಾದರೆ ಮತ್ತೆ ನಮ್ಮ ಅಧಿಕಾರ ಹೋದಂತೆ. ಆದ್ದರಿಂದ ನೀವು ಮತ್ತು ನಿಮ್ಮ ಜನಾಂಗದವರ ಅಧಿಕಾರ ಉಳಿಯಬೇಕಾದರೆ ಮೊದಲು ಈ ಅಪಾಯವನ್ನು ನಿರ್ಮೂಲನ ಮಾಡಿರಿ ಎಂದು ಬಿಂಬಿಸಿದನು.

ಇದಕ್ಕಿಂತ ಮುಂಚೆ ಅವನು ತನ್ನ ಆಸ್ಥಾನಿಕರ ಮುಂದೆ, ಈ ವ್ಯಕ್ತಿ ನಿಮ್ಮ ತಂದೆ-ತಾತಂದಿರು ಮತ್ತು ಹಿರಿಯರನ್ನು ಪಥಭ್ರಷ್ಟರೆಂದು ಹೇಳುತ್ತಾನೆಂದು ಹೇಳಿ ಅಜ್ಞಾನಜನ್ಯ ಅಭಿಮಾನವನ್ನು ಮೂಡಿಸಲು ಪ್ರಯತ್ನಿಸಿದ್ದನು. ಇಲ್ಲೀಗ, ಯೂಸುಫ್‌ರವರ(ಅ) ಬಳಿಕ ಇನ್ನೊಮ್ಮೆ ಈ ಕಿಬ್ತಿಗಳ ಆಡಳಿತವನ್ನು ಕೊನೆಗೊಳಿಸಿ ಬನೀ ಇಸ್ರಾಈಲರ ಸರಕಾರವನ್ನು ಸ್ಥಾಪಿಸುವ ಹುನ್ನಾರ ನಡೆಯುತ್ತಿದೆಯೆಂದು ಹೇಳಿ ಜನಾಂಗೀಯ ಪಕ್ಷಪಾತವನ್ನು ಹುಟ್ಟಿಸುವ ಪ್ರಯತ್ನ ಮಾಡುತ್ತಿದ್ದಾನೆ.

### ಆಸ್ಥಾನಿಕರ ವಿಧೇಯತೆ

ಈ ಸಂದರ್ಭದಲ್ಲಿ ಚಕ್ರವರ್ತಿಯ ಚೇಲಾಗಳಾಗಿರುವ ಆಸ್ಥಾನಿಕರು, ತಮ್ಮ ಯಜಮಾನನನ್ನು ಸಂತೋಷಪಡಿಸಲಿಕ್ಕಾಗಿ ಅವನೊಂದಿಗೆ ದನಿಗೂಡಿಸಿದರು. ಅವರು ಒಕ್ಕೊರಳಿನಿಂದ ಹೇಳಿದರು,

ಈ ಕಾರಣಕ್ಕಾಗಿ ಫಿರ್‌ಔನನ ಸರದಾರರು ಪರಸ್ಪರ ಹೇಳಿದರು- "ಖಂಡಿತವಾಗಿಯೂ ಇವನೊಬ್ಬ ನಿಪುಣ ಮಾಟಗಾರನಾಗಿರುತ್ತಾನೆ. ನಿಮ್ಮನ್ನು ನಿಮ್ಮ ಭೂಮಿಯಿಂದ ಹೊರ ಹಾಕಲಿಚ್ಛಿಸುತ್ತಾನೆ. ಈಗ ನೀವೇನು ಹೇಳುತ್ತೀರಿ?" (ಅಲ್ ಅಅ್‌ರಾಫ್: 109-110)

ಸ್ಪಷ್ಟ ಪವಾಡಗಳನ್ನು ಕಂಡ ಬಳಿಕವೂ ಫಿರ್‌ಔನ್ ಮತ್ತವನ ಆಸ್ಥಾನಿಕರು ತೋರಿದ ಉದ್ಧಟತನವನ್ನು ಕುರ್‌ಆನ್ ಹೀಗೆ ವಿವರಿಸಿದೆ,

"ಆ ಪ್ರಕಾರ ಅವರು ನಮ್ಮ ಕಡೆಯಿಂದ ಸತ್ಯವು ಅವರ ಮುಂದೆ ಬಂದಾಗ ಇದು ಸುವ್ಯಕ್ತ ಮಾಟವೆಂದು ಬಿಟ್ಟರು." (ಯೂನುಸ್: 76)

ಫಿರ್‌ಔನ್ ಮತ್ತು ಆಸ್ಥಾನಿಕರು ಕೇವಲ ಉದ್ಧಟತನ ಮತ್ತು ಹಠಮಾರಿತನವನ್ನು ಪ್ರದರ್ಶಿಸಿದ್ದಲ್ಲ. ಬದಲಾಗಿ ಬಹಿರಂಗವಾಗಿ ತಮಾಷೆ ಮಾಡತೊಡಗಿದರು. ತುಂಬಿದ ಆಸ್ಥಾನದಲ್ಲಿ ಅವರು ಮೂಸಾರನ್ನು ಈ ರೀತಿ ಗೇಲಿ ಮಾಡಿದರು,

"ತರುವಾಯ ಮೂಸಾ ನಮ್ಮ ಸುವ್ಯಕ್ತ ನಿದರ್ಶನಗಳೊಂದಿಗೆ ಅವರ ಬಳಿಗೆ ತಲಪಿದರು. ಆಗ ಅವರು, 'ಇದು ಕೃತಕ ಜಾದುವೇ ಹೊರತು ಬೇರೇನೂ ಅಲ್ಲ ಮತ್ತು ನಾವು ಇಂತಹ ಮಾತುಗಳನ್ನು ನಮ್ಮ ಪೂರ್ವಿಕರ ಕಾಲದಲ್ಲಿ ಎಂದೂ ಕೇಳಿರಲಿಲ್ಲ' ಎಂದರು. ಮೂಸಾ ಹೀಗೆಂದರು, 'ನನ್ನ ಪ್ರಭು ತನ್ನ ವತಿಯಿಂದ ಮಾರ್ಗದರ್ಶನ ಪಡೆದು ಬಂದಿರುವವನನ್ನು ಚೆನ್ನಾಗಿ ಬಲ್ಲನು. ಯಾರ ಅಂತಿಮ ಪರಿಣಾಮವು ಉತ್ತಮವಾಗಬೇಕಾಗಿದೆ ಎಂಬುದನ್ನೂ ಅವನೇ ಚೆನ್ನಾಗಿ ತಿಳಿದಿರುವನು. ವಾಸ್ತವದಲ್ಲಿ ಅಕ್ರಮಿಗಳು ಎಂದೂ ಯಶಸ್ವಿಯಾಗುವುದಿಲ್ಲ.' ಫಿರ್‌ಔನನು, 'ಆಸ್ಥಾನಿಕರೇ ನನ್ನ ಹೊರತು ನಿಮ್ಮ ಇನ್ನಾವ ದೇವನನ್ನೂ ನಾನರಿಯೆನು. ಹಾಮಾನ್! ಇಟ್ಟಿಗೆಗಳನ್ನು ಸುಟ್ಟು ನನಗಾಗಿ ಒಂದು ಎತ್ತರವಾದ ಕಟ್ಟಡವನ್ನು ನಿರ್ಮಿಸು. ಬಹುಶಃ ಅದರ ಮೇಲೇರಿದರೆ ನನಗೆ ಮೂಸಾರ ದೇವರು ಕಾಣಿಸಲೂ ಬಹುದು, ನಾನಂತೂ ಇವನನ್ನು ಸುಳ್ಳುಗಾರನೆಂದು ಭಾವಿಸುತ್ತೇನೆ' ಎಂದನು." (ಅಲ್ ಕಸಸ್: 36-38)

ಅಂದರೆ ಮೂಸಾ(ಅ) ಅವನಿಗೆ ತಮ್ಮ ಪವಾಡಗಳನ್ನು- ಲಾಠಿ ಮತ್ತು ಪ್ರಕಾಶಮಯ ಹಸ್ತ- ತೋರಿಸಿದಾಗ ಮೊದಲು ಅವನು ಅದನ್ನು ಜಾದೂ ಎಂದು ಹೇಳಿ ಕಡೆಗಣಿಸಲು ಪ್ರಯತ್ನಿಸಿದನು. ತರುವಾಯ ಅವರ ಬಾಯಿಂದ ತನ್ನ ಪ್ರಭುತ್ವಕ್ಕೆ ಪಂಥಾಹ್ವಾನ ಒಡ್ಡುವುದನ್ನು ಕೇಳಿದಾಗ ಅದನ್ನು ತಿರಸ್ಕರಿಸುತ್ತಾ, ಈ ಜಗತ್ತಿಗೆ ಹೊಸ ಪ್ರಭುವನ್ನು ಎಲ್ಲಿಂದ ಹುಡುಕಿ ತಂದಿರುವೆಯೆಂದು ಹೇಳುತ್ತಾನೆ. ಈ ದೇಶದ ನಿರಂಕುಶ ಪ್ರಭು, ಪರಮಾಧಿಕಾರಿ, ಸಾರ್ವಭೌಮ ಮತ್ತು ಕಾನೂನು ರಚಿಸುವವನಾಗಿದ್ದೇನೆ. ಇಲ್ಲಿ ನನ್ನ ಆಜ್ಞೆ ಕಾನೂನುಗಳಲ್ಲದೆ ಇನ್ನಾರದು ನಡೆಯುತ್ತದೆ. ನಾನಂತೂ ಇಲ್ಲಿ ಪೀಳಿಗೆಗಳಿಂದಲೂ ಆಡಳಿತ ನಡೆಸುತ್ತಾ ಇದ್ದೇನೆ. ಈ ದೇಶದ ಜನತೆಗೆ ಕಾನೂನು ನೀಡುವವನು ಮತ್ತು ತನ್ನಿಚ್ಛೆಯಂತೆ ಅವರನ್ನು ನಡೆಸಲು ನಾನಲ್ಲದೆ ಬೇರೆ ಯಾರಿದ್ದಾರೆ. ಹಾಗಿರುವಾಗ ಇದೆಂತಹ ಹುಚ್ಚು ಮಾತುಗಳು ಎಂದು ಅವನು ಬಡಬಡಿಸುತ್ತಾನೆ.

# ಜಮಾಅತ್‌ನ ಆಭರಣಗಳು- 01

## ಮೌಲಾನ ಅಖ್ತರ್ ಅಹ್ಸನ್ ಇಸ್ಲಾಹಿ

**1901**ರಲ್ಲಿ ಉತ್ತರ ಪ್ರದೇಶದ ಅಝುಮ್‌ಗಢ್ ಜಿಲ್ಲೆಯ ಅಮ್ಲೋಚಕಿಯ ಎಂಬಲ್ಲಿ ಹುಟ್ಟಿದ ಮೌಲಾನಾ ಅಖ್ತರ್ ಅಹ್ಸನ್ ಇಸ್ಲಾಹಿ ಈ ಆಭರಣಗಳಲ್ಲೊಬ್ಬರು. ಇವರು 'ಮದ್ರಸತುಲ್ ಇಸ್ಲಾಹ್'ನಲ್ಲಿ ಶಿಕ್ಷಣ ಮುಗಿಸಿ ದಿ| ಮೌಲಾನಾ ಹಮೀದುದ್ದೀನ್ ಫರಾಹಿಯವರಿಂದ ಶಿಕ್ಷಣ ತರಬೇತಿ ಪಡೆದಿದ್ದರು. ನಂತರ ಮದ್ರಸದಲ್ಲಿ ಶಿಕ್ಷಕನಾಗಿ ಕಾರ್ಯ ನಿರ್ವಹಿಸಿದರು.

**1942**ರಲ್ಲಿ ಜಮಾಅತೆ ಇಸ್ಲಾಮಿಯನ್ನು ಸೇರಿಕೊಂಡ ಇವರು ಜಮಾಅತ್‌ನ ಪ್ರತಿ ಕಾರ್ಯ ಚಟುವಟಿಕೆಯಲ್ಲೂ ಅಪಾರ ಶ್ರದ್ಧೆಯಿಂದ ಭಾಗವಹಿಸುತ್ತಿದ್ದರು. ಭಾರತ–ಪಾಕ್ ವಿಭಜನೆಯ ನಂತರ ಅವರನ್ನು ಜಮಾಅತೆ ಇಸ್ಲಾಮಿ ಹಿಂದ್‌ನ 'ಅಮೀರ್' ಆಗಿ ಸೂಚಿಸಲಾಯಿತಾದರೂ ಅವರು ತನ್ನ ಶಿಷ್ಯರಾದ ಮೌಲಾನಾ ಅಬುಲ್ಲೈಸ್ ಇಸ್ಲಾಹಿ ನದ್ವಿಯವರು ಆ ಜಾಗಕ್ಕೆ ಸೂಕ್ತ ಎಂದರು. ನಿಧನರಾಗುವ ವರೆಗೂ ಇವರು ಕೇಂದ್ರ ಸಲಹಾ ಸಮಿತಿಯ ಸದಸ್ಯರಾಗಿದ್ದರು. **1958**ರಲ್ಲಿ ನಿಧನರಾದರು.

## ವಿ.ಪಿ. ಮುಹಮ್ಮದ್ ಅಲಿ

ಮೌಲಾನಾ ವಿ.ಪಿ. ಮುಹಮ್ಮದ್ ಅಲಿಯವರು ಕೇರಳದ ಮಲಬಾರ್‌ನವರು. ಉರ್ದುವನ್ನು ಚೆನ್ನಾಗಿ ಬಲ್ಲವರೆಂಬ ಹೆಗ್ಗಳಿಕೆಯೂ ಅವರಿಗಿತ್ತು. ತರ್ಜುಮಾನುಲ್ ಕುರ್‌ಆನ್‌ನ ಮೂಲಕ ಮೌಲಾನಾ ಮೌದೂದಿಯವರನ್ನು ಪರಿಚಯಪಟ್ಟುಕೊಂಡವರು ಕೇರಳದಲ್ಲಿ ಇವರೊಬ್ಬರೇ ಆಗಿದ್ದರು. **1945**ರಲ್ಲಿ ಜಮಾಅತನ್ನು ಸೇರಿಕೊಂಡರು.

**1945**ರಲ್ಲಿ ಪಠಾನ್‌ಕೋಟ್‌ನ ದಾರುಲ್ ಇಸ್ಲಾಮ್‌ನಲ್ಲಿ ನಡೆದ ಪ್ರಪ್ರಥಮ ಅಖಿಲ ಭಾರತ ಇಜ್ತಿಮಾದಲ್ಲಿ ಭಾಗವಹಿಸಿದ್ದ ಅವರು ಅದಕ್ಕಿಂತ ಮೊದಲೇ ರಿಸಾಲೆ ದೀನಿಯಾತ್ ಮತ್ತು ಸಲಾಮತಿ ಕಾ ರಾಸ್ತಾ ಎಂಬ ಉರ್ದು ಗ್ರಂಥಗಳನ್ನು ಮಲಯಾಳಂಗೆ ಅನುವಾದಿಸಿದ್ದರು. **1946**ರಲ್ಲಿ ಇವರದೇ ಮೇಲ್ವಿಚಾರಣೆಯಲ್ಲಿ ಕೇರಳದಲ್ಲಿ ಇಸ್ಲಾಮಿಕ್ ಪಬ್ಲಿಷಿಂಗ್ ಹೌಸ್‌ನ್ನು ಜಮಾಅತ್ ಸ್ಥಾಪಿಸಿತು. ಅವರು ಖುತ್‌ಬಾತ್ ಸೇರಿದಂತೆ ಅನೇಕಾರು ಕೃತಿಗಳನ್ನು ತರ್ಜುಮೆಗೊಳಿಸಿದರು. ಅವರು ಅಲಹಾಬಾದ್‌ನಲ್ಲಿ ಏರ್ಪಡಿಸಲಾದ ಅಖಿಲ ಭಾರತ ದ್ವಿತೀಯ ಇಜ್ತಿಮಾದಲ್ಲೂ ಭಾಗವಹಿಸಿದ್ದರು.

ಮುಹಮ್ಮದ್ ಅಲಿಯವರನ್ನು ಮಲಬಾರ್‌ನ ಅಮೀರ್ ಆಗಿ ಮೌದೂದಿಯವರು ನೇಮಿಸಿದರು.

ಮುಹಮ್ಮದ್ ಅಲಿಯವರು ತಮ್ಮದೇ ಪ್ರತ್ಯೇಕ ಶೈಲಿಯಲ್ಲಿ ಸಣ್ಣ ಸಣ್ಣ ಗುಂಪುಗಳನ್ನು ರಚಿಸಿ, ವಿಶೇಷವಾಗಿ ಉಲೆಮಾಗಳನ್ನು ಒಟ್ಟುಗೂಡಿಸಿ ಅಧ್ಯಯನ ತರಗತಿಗಳನ್ನು ನಡೆಸಿದರು.

**1947**ರ ವರೆಗೆ ಕೇರಳದಿಂದ ಅವರೊಬ್ಬರೇ ಜಮಾಅತ್‌ನ ಸದಸ್ಯರಾಗಿದ್ದವರು. ಹಾಗೆಯೇ ಕೇರಳದಲ್ಲಿ ಜಮಾಅತ್ ಪ್ರಬಲವಾಗ ತೊಡಗಿತು. **1948**ರಲ್ಲಿ ಕೇರಳದಲ್ಲಿ **5** ಸದಸ್ಯರು, **9** ಕಾರ್ಯಕರ್ತರು, **15–20** ಹಿತೈಷಿಗಳು ಇದ್ದರು. ಐವರು ಸದಸ್ಯರಲ್ಲಿ ಮೂವರು ಉಲಮಾಗಳಾಗಿದ್ದರು. **1948**ರಲ್ಲಿ ನಡೆದ ಜಮಾಅತ್‌ನ ಮರು ಸಂಘಟನಾ ಸಭೆಯಲ್ಲಿ ಭಾಗವಹಿಸಿದ **42** ಸದಸ್ಯರಲ್ಲಿ ಇವರೂ ಒಬ್ಬರಾಗಿದ್ದರು. ಇವರು **1959**ರ ವರೆಗೆ ಕೇಂದ್ರ ಸಲಹಾ ಮಂಡಳಿಯ ಸದಸ್ಯರಾಗಿದ್ದರು. **1960**ರಲ್ಲಿ ನಿಧನರಾದರು.

ಅನು: ಮಿನಾರ್ಝ್ ತೊಕ್ಕೊಟ್ಟು

ಜಮಾಅತೆ ಇಸ್ಲಾಮಿ ಹಿಂದನ್ನು ಕಟ್ಟುವಲ್ಲಿ, ಅದರ ವರ್ಚಸ್ಸನ್ನು ಹೆಚ್ಚಿಸುವಲ್ಲಿ ಅನೇಕಾರು ವ್ಯಕ್ತಿಗಳು ತಮ್ಮ ಸರ್ವವನ್ನೂ ವಿನಿಯೋಗಿಸಿದ್ದಾರೆ. ಒಂದು ರೀತಿಯಲ್ಲಿ ಅವರೆಲ್ಲಾ ಜಮಾಅತ್‌ನ ಆಭರಣಗಳು. ಹಾಗಂತ ಅವರೆಲ್ಲರನ್ನೂ ಇಂಚಿಂಚೂ ಕಟ್ಟಿಕೊಡುವ ದೊಡ್ಡ ಸಾಹಸ ಇದಲ್ಲ. ಆ ಆಭರಣಗಳಲ್ಲಿ ಕೆಲವು ಆಭರಣಗಳ ಪಟ್ಟಿ ಮತ್ತು ಸಂಕ್ಷಿಪ್ತ ಸೇವೆಯನ್ನು ಮಾತ್ರ ಇಲ್ಲಿ ನೀಡುತ್ತಿದ್ದೇವೆ.



# ಮದುವೆಯನ್ನೇ ತ್ರಾಸ ಮಾಡಿ ಮರ್ಯಾದೆಯ ಬಗ್ಗೆ ಮಾತಾಡುವುದೇ?

**ಮ**ರ್ಯಾದೆ ಎಂದರೇನು?

ಈ ಪ್ರಕರಣವನ್ನು ನೋಡಿ. ರಾಜಸ್ತಾನದ ಸೀತಾಪುರ ಎಂಬಲ್ಲಿ 19 ವರ್ಷದ ಹುಡುಗಿಯನ್ನು ಅವಳ ಅಣ್ಣ ಕೊರಳು ಸೀಳಿ ಕೊಂದು ಹಾಕಿ ಓಡಿ ಹೋಗುತ್ತಾನೆ. ಅವಳು ಚಿಕ್ಕಪ್ಪನ ಮಗನನ್ನೇ ಪ್ರೀತಿಸಿದ್ದಳು ಎಂಬ ಕಾರಣಕ್ಕಾಗಿ. ಮನೆಗೆ ಖರ್ಚು ತಂದುಕೊಡುತ್ತಿದ್ದ ಮಗ ಓಡಿ ಹೋದನಲ್ಲ ಮುಂದೇನು ಎಂದು ಅವಳ ತಾಯಿ ಕೈ ಬಾಯಿ ಹೊಡಕೊಳ್ಳುತ್ತಿದ್ದಳು. ಅಂದರೆ ಮಗಳನ್ನು ಕೊಂದದ್ದಕ್ಕೆ ಅವಳಿಗೆ ದುಃಖವೂ ಇಲ್ಲ. ಪಶ್ಚಾತ್ತಾಪವೂ ಇಲ್ಲ. ಮಗನಿಂದಾದ ಮಗಳ ಕೊಲೆ ಕುಟುಂಬದ ಮರ್ಯಾದೆ ಉಳಿಸಿಕೊಳ್ಳುವ ಘನಕಾರ್ಯವೆಂದೇ ಅವಳು ಹೇಳುತ್ತಿದ್ದಳು.

ಮರ್ಯಾದೆ ಎಂದರೆ ಏನೆಂದು ನಿಮಗೆ ಈಗ ಅರ್ಥವಾಗಿರಬಹುದು. ತಮ್ಮ ಸಂಪ್ರದಾಯಗಳನ್ನು ಮೀರಿ ಹುಡುಗ ಹುಡುಗಿಯನ್ನೋ, ಹುಡುಗಿ ಹುಡುಗನನ್ನೋ ಪ್ರೀತಿಸುವುದೆಂದರೆ ಅವಮಾನ. ಸುಮಾರು ಮೂರು ತಿಂಗಳ ಹಿಂದೆ ನಡೆದಿದ್ದ ಘಟನೆ ಇದನ್ನೇ ವ್ಯಾಖ್ಯಾನಿಸುತ್ತಿದೆ ಅಲ್ಲವೇ? ಅಂತರ್ ಜಾತೀಯ ಮದುವೆಗೆ ಪ್ರೋತ್ಸಾಹ ಕೊಟ್ಟಿರುವ ಭಾರತದಲ್ಲಿ ನಡೆಯುತ್ತಿರುವ ಘಟನೆಯಿದು. ಮರ್ಯಾದಾ ಹತ್ಯೆ. ಯಾವುದೇ ಸರಕಾರಿ ಆಫೀಸಿಗೆ ಹೋದರೂ ಜಾತಿಯನ್ನು ಕೇಳುವುದು ಕೂಡಾ ಇದೇ ನಾಡಿನಲ್ಲಿ ಅಲ್ಲವೇ?

ಅಂತರ್‌ಜಾತಿ ವಿವಾಹವನ್ನು ಒಪ್ಪಿಕೊಳ್ಳದ ತಂದೆ ತಾಯಿಯನ್ನು ದೂರವಿಟ್ಟು ಮದುವೆ ಮಾಡಿಸಿದ ಕರ್ನಾಟಕ ರಕ್ಷಣಾ ವೇದಿಕೆಯಂತಹವರಿರುವುದು ಕೂಡಾ ನಮ್ಮ ನಾಡಿನಲ್ಲಿ. ಪ್ರೇಮಿಗಳು ಒಂದು ದಿನ ಆಚರಿಸೋಣವೆಂದು ಮುಂಬರುವಾಗ ಅವರನ್ನು ಹತ್ತಿಕ್ಕಲು ಹೊಂಚು ಹಾಕುವ ಸೇನೆಗಳಿರುವುದೂ ನಮ್ಮಲ್ಲಿಯೇ. ಇವೆಲ್ಲ ನಮ್ಮ ಮರ್ಯಾದೆಗೆ ಶೋಭಿಸುವ ವಿಚಾರಗಳೇ ಎಂಬ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳುವುದಿಲ್ಲ. ಪ್ರೀತಿಸುವವರು ಪ್ರೀತಿಸುವಾಗ ಯಾವುದನ್ನೂ ತಲೆಗೆ ಹಚ್ಚಿಕೊಳ್ಳದಿರುವಂತೆ ಮನೆಯ ಕುಟುಂಬದ ಗೌರವವೆಂದು ಹೇಳುವವರು ಅದಕ್ಕಾಗಿ ಯಾವ ಮಟ್ಟಕ್ಕೂ ಇಳಿಯಲು ತಯಾರಾಗುತ್ತಾರೆ. ತಾನು ಕೊಲ್ಲುವುದು ಒಡಹುಟ್ಟುಗಳನ್ನೇ ಎಂಬ ವಿವೇಚನೆಯೂ ಇಲ್ಲ. ಮೇಲೆ ವಿವರಿಸಿದ ಘಟನೆ ಅದನ್ನೇ ಸೂಚಿಸುತ್ತಿದೆಯಲ್ಲವೇ?

**ಮ ಹಿ ಳಾ ವೇ ದಿ ಕೆ**

✍ ಸಜಿನಾ

ಹಾಗಾದರೆ ಪ್ರೀತಿಸುವುದು ತಪ್ಪಾ? ಪ್ರೀತಿಸಿದವರು ತಮ್ಮ ನೆಲೆ ಬೆಲೆಗಳನ್ನು ಮರೆತಿದ್ದಾರೆಂದು ಇಟ್ಟುಕೊಳ್ಳೋಣ. ಹಾಗೆಂದು ಆ ತಪ್ಪಿಗಾಗಿ ಅವರು ಸಾಯಬೇಕಾದವರಾ? ದಲಿತ ಮಹಿಳೆ ಎತ್ತಿ ಹಿಡಿದಿರುವಂತೆ ಕುಟುಂಬ ಗೌರವ ಎಂಬುದು ಎಲ್ಲರಿಗೂ ಮುಖ್ಯವೇ? ಬಹುಶ ಇದುವರೆಗೂ ಬಹುತೇಕ ಯಾರಿಂದಲೂ ಜಾತಿಯನ್ನು ಮೀರಿ ನಿಲ್ಲಲು ಸಾಧ್ಯವಾಗಿಲ್ಲ. ಜಾತಿಯನ್ನು ಮೀರಿ ಜಾತಿಯನ್ನು ಕೆಡಿಸಿಕೊಳ್ಳಬೇಕಾದ ಔಚಿತ್ಯವೂ ಅಲ್ಲ.

ಇಲ್ಲಿ ಮುಖ್ಯ ವಿಚಾರವೆಂದರೆ ಯಾವುದಾದರೂ ಜಾತಿ-ಧರ್ಮ ಪ್ರೇಮಿಸುವುದನ್ನು ವಿರೋಧಿಸಿದೆಯೇ ಎಂಬುದಾಗಿದೆ. ಕಾಳಿದಾಸನು ಬರೆದ ಶಾಕುಂತಲಾ ಮಹಾಕಾವ್ಯದಲ್ಲಿ ಶಕುಂತಲೆ ಪ್ರೇಮ ವಿವಾಹವಾಗ್ತಾಳೆ. ರಾಧಾಕೃಷ್ಣರ ಪ್ರೇಮ ಕಥೆಯೂ ಜಗತ್ಪ್ರಸಿದ್ಧ. ಪ್ರೇಮವನ್ನು ಕೇಂದ್ರವಾಗಿಟ್ಟುಕೊಂಡು ಸಿನೆಮಾಗಳು ಬರುತ್ತವೆ. ಅಕ್ಬರ್-ಜೋಧಾ ಬಾಯಿ, ಅನಾರ್ಕಲಿ-ಸಲೀಮ್ ಹೀಗೆ ಇತಿಹಾಸ ಕತೆ-ಸಿನೆಮಾ-ಪುರಾಣಗಳಲ್ಲಿ ಪ್ರೇಮ ಎಂಬ ವಿಚಾರ ನಿರರ್ಗಳವಾಗಿ ಹರಿಯುತ್ತಿದೆ. ಹಾಗಿರುವಾಗ ಭಾರತೀಯ ಸಂಸ್ಕೃತಿಯಲ್ಲಿ ಪ್ರೇಮಿಸುವ ಕಾರಣದಿಂದ ಮರ್ಯಾದೆ ಹೋಗುವುದು ಹೇಗೆ? ಇನ್ನು ಇಸ್ಲಾಮಿನ ಶಿಷ್ಟಾಚಾರಗಳೊಂದಿಗೆ ಇರುವ ಪ್ರೇಮವು ಅಪರಾಧವೇ ಅಲ್ಲ. ಹೆಣ್ಣು ಗಂಡನ್ನು ಇಷ್ಟಪಟ್ಟು ಮದುವೆಗೆ ಮುಂದೆ ಬಂದರೆ ಅವನು ಹೆಣ್ಣಿಗೆ ಇಷ್ಟವೆಂದಾದರೆ ತಂದೆ ತಾಯಿ ಮದುವೆ ಮಾಡಿಸಿಕೊಡಬೇಕು. ಡೇಟಿಂಗ್, ಮರಸುತ್ತುವುದು ಮತ್ತು ಏಕಾಂತದಲ್ಲಿ ವ್ಯವಹರಿಸುವುದು ಇತ್ಯಾದಿಗಳು ಅಲ್ಲಿ ಖಂಡಿತವಾಗಿಯೂ ತಪ್ಪು. ಸೀಮೋಲ್ಲಂಘನೆಯ ವ್ಯವಹಾರವನ್ನು ಇಸ್ಲಾಮ್ ನಿಷೇಧಿಸುತ್ತದೆ. ಹಾಗಾದರೆ ಪ್ರೇಮಿಸಲೇ ಬಾರದು ಎಂದು ಇಸ್ಲಾಮ್ ಕೂಡಾ ಹೇಳುವುದಿಲ್ಲ. ನಿಲ್ಲಿ, ಪ್ರೇಮಿಸುವುದೆಂದರೆ ಕಾಮಿಸುವುದೆಂದರ್ಥವಲ್ಲ. ಹುಡುಗಿಯನ್ನು ಹುಡುಗನೂ, ಹುಡುಗನನ್ನು ಹುಡುಗಿಯೂ ಬಯಸುವುದಾಗಿದೆ.

ಮೊದಲು ವಿವರಿಸಿದ ಘಟನೆಯಲ್ಲಿ ಮರ್ಯಾದೆ ಭಂಗವಾಗಲು ಹುಡುಗಿ ಪ್ರೇಮಿಸಿದ್ದು ಕಾರಣ ಎಂಬುದಕ್ಕಿಂತಲೂ ದೊಡ್ಡಪ್ಪನ ಮಗನನ್ನು ಆಕೆ ಪ್ರೇಮಿಸಿದ್ದಾಳೆ ಎಂಬುದೇ ಕಾರಣವಾಗಿತ್ತು. ಆದ್ದರಿಂದ ಅವಳ ಒಡಹುಟ್ಟಿದ ಅಣ್ಣನೇ ಕೊರಳು ಸೀಳಿ ಕೊಂದು ಹಾಕಿದ್ದ. ಎಂತಹ ಪ್ರಾರಬ್ಧ ಇದು. ಅಕ್ಕನ ಮಗಳನ್ನು ಮದುವೆಯಾಗುವ ಸಂಸ್ಕೃತಿ ಇಟ್ಟುಕೊಂಡಿರುವ ನಮ್ಮೊಳಗೇ ದೊಡ್ಡಪ್ಪನ ಮಗನನ್ನು ಮದುವೆಯಾಗುವುದು ಯಾಕೆ ಅಪರಾಧವಾಗುತ್ತದೆ? ಅಲ್ಲಿ ಕುಟುಂಬ ಗೌರವದ ಪ್ರಶ್ನೆ ಉದ್ಭವಿಸುವುದಾದರೂ ಹೇಗೆ? ರಕ್ತ ಸಂಬಂಧದ ವಿಚಾರವನ್ನೇ ಎತ್ತಿಕೊಂಡರೂ ತಮ್ಮ ಅಕ್ಕನ ಮಗಳನ್ನು ವಿವಾಹವಾಗುವುದು ಮತ್ತು ದೊಡ್ಡಪ್ಪ ಚಿಕ್ಕಪ್ಪಂದಿರ ಮಕ್ಕಳು ವಿವಾಹವಾಗುವುದರಲ್ಲಿ ವ್ಯತ್ಯಾಸವಿದೆ. ಅಕ್ಕನ ಮಗಳಲ್ಲಿ ಕೇವಲ ಒಂದೇ ರಕ್ತದ ಮಿಶ್ರಣ ಅಥವಾ ವೀರ್ಯ ಮಿಶ್ರಣವನ್ನು ಕಾಣಬಹುದು. ಆದರೆ ಚಿಕ್ಕಪ್ಪ ದೊಡ್ಡಪ್ಪರ ಮಕ್ಕಳಲ್ಲಿ ಎರಡೆರಡು ಕುಟುಂಬಗಳ ರಕ್ತ ಮಿಶ್ರಣವನ್ನು ಕಾಣಬಹುದು. ಹಾಗಿರುವಾಗ ಚಿಕ್ಕಪ್ಪ ದೊಡ್ಡಪ್ಪರ ಮಕ್ಕಳ ವಿವಾಹವನ್ನು ಮರ್ಯಾದೆ ಕೇಡೆಂದು ಬಗೆಯು ವುದು ಸಾಧ್ಯವೇ ಅಲ್ಲ. ಹೀಗೆಲ್ಲ ಆಲೋಚಿಸುವವರು ಮಾನವರ ಉತ್ಪತ್ತಿಯ ಮೂಲವನ್ನು ನೋಡಬೇಕು. ಒಂದೇ ದೇಹದಿಂದ ಅದು ಉತ್ಪತ್ತಿಯಾಯಿತು. ಬೈಬಲ್‌ನಲ್ಲಿಯೂ ಈ ಉಲ್ಲೇಖವನ್ನು ಕಾಣಬಹುದು. ಅದನ್ನು ಪವಿತ್ರ ಕುರ್‌ಆನಂತೂ ಸ್ಪಷ್ಟವಾಗಿ ಹೇಳುತ್ತದೆ.

"ನಿಮ್ಮನ್ನು ಒಂದೇ ಜೀವದಿಂದ ಸೃಷ್ಟಿಸಿದನು. ಅದೇ ಜೀವದಿಂದ ಅದರ ಜೋಡಿಯನ್ನು ಉಂಟು ಮಾಡಿದನು ಮತ್ತು ಅವರೆಡರಿಂದ ಅನೇಕಾನೇಕ ಸ್ತ್ರೀ ಪುರುಷರನ್ನು ಲೋಕದಲ್ಲಿ ಹಬ್ಬಿಸಿದನು. ನೀವು ಯಾರ ಹೆಸರೆತ್ತಿ ಪರಸ್ಪರ ಹಕ್ಕು ಬಾಧ್ಯತೆಗಳನ್ನು ಕೇಳುತ್ತೀರೋ ಆಗ ಅಲ್ಲಾಹನನ್ನು ಭಯಪಡಿರಿ. ಕುಟುಂಬ ಸಂಬಂಧಗಳನ್ನು ಮುರಿಯಬೇಡಿರಿ. ಅಲ್ಲಾಹ್ ನಿಮ್ಮ ಮೇಲೆ ಮೇಲ್ನೋಟವಿರಿಸಿಕೊಂಡಿರುವನೆಂಬುದನ್ನು ಚೆನ್ನಾಗಿ ಅರಿತುಕೊಳ್ಳಿರಿ." (ಅನ್ನಿಸಾ: 1)

ಹೀಗಿರುವಾಗ ಅಣ್ಣ ತಮ್ಮಂದಿರ ಮಕ್ಕಳು ಮದುವೆಯಾಗುವುದನ್ನು ವಿರೋಧಿಸುವವರು ಯೋಚಿಸಬೇಕಾಗುತ್ತದೆ. ನಮ್ಮಲ್ಲಿ ಸಹೋದರ ಮತ್ತು ಸಹೋದರಿಯರ ಮಕ್ಕಳು ವಿವಾಹವಾದರೆ ಯಾರೂ ಆಶ್ಚರ್ಯಪಡುವುದಿಲ್ಲ. ಹುಡುಗಿಯನ್ನು ಕೊರಳು ಸೀಳಿ ಹಾಕಿದ ಘಟನೆಯಲ್ಲಿ ಇಂತಹದ್ದೊಂದು ಪ್ರೇಮ ಪ್ರಕ್ರಿಯೆ ನಡೆದಿತ್ತೆಂಬುದನ್ನು ಬಿಟ್ಟರೆ ಇನ್ನೇನೂ ಇಲ್ಲ. ಇಸ್ಲಾಮಿ ವಿಚಾರದಲ್ಲಿ ಸಹೋದರ (12ನೇ ಪುಟಕ್ಕೆ)

# ಎಲ್ಲದಕ್ಕಿಂತ ದೊಡ್ಡ ಸದಕಾ

**ಕುಟುಂಬ ಒಂದು ಅಧ್ಯಯನ-48**

ಮೌ। ಜಲಾಲುದ್ದೀನ್ ಉಮರಿ

**ಅ**ಬ್ದುಲ್ಲಾ ಬಿನ್ ಅಬ್ಬಾಸ್‌ರಿಂದ ವರದಿಯಾಗಿದೆ. ಅಲ್ಲಾಹನ ಪ್ರವಾದಿ(ಸ) ಹೇಳಿದರು,

"ಯಾವುದೇ ವ್ಯಕ್ತಿಗೆ ಹೆಣ್ಮಗುವಿದ್ದು ಅವನು ಅವಳನ್ನು ಜೀವಂತ ಹೂಳದಿದ್ದರೆ, ಅವಳನ್ನು ನಿರ್ಲಕ್ಷಿಸದಿದ್ದರೆ ಮತ್ತು ಅವಳಿಗೂ ಮಗನಂತೆ ಪ್ರಾಮುಖ್ಯತೆ ನೀಡಿದರೆ ಅಂತಹವನನ್ನು ಅಲ್ಲಾಹನು ಸ್ವರ್ಗ ಪ್ರವೇಶಗೊಳಿಸುವನು." (ಅಬೂದಾವೂದ್)

ಈ ಹದೀಸ್‌ನಲ್ಲಿ ಹೆಣ್ಮಕ್ಕಳ ಪೋಷಣೆ, ಶಿಕ್ಷಣ ತರಬೇತಿ, ಮದುವೆ ಮತ್ತು ಅವಳಿಗೆ ಸಮಾನತೆ ನೀಡುವ ಮೂಲಕ ನರಕದಿಂದ ಮೋಕ್ಷವನ್ನು, ಸ್ವರ್ಗ ಪ್ರವೇಶವನ್ನು ಪಡೆಯಬಹುದೆಂಬ ಸುವಾರ್ತೆಯನ್ನು ನೀಡಲಾಗಿದೆ. ದೇವನ ಬಗ್ಗೆ ಮತ್ತು ಪರಲೋಕದಲ್ಲಿ ನಂಬಿಕೆಯಿಲ್ಲದವರಿಗೆ ಮತ್ತು ಇಹಲೋಕವನ್ನು ಸರ್ವಸ್ವವೆಂದು ತಿಳಿದವರಿಗೆ ಮಾತ್ರ ಈ ಹದೀಸ್‌ನ ಮಹತ್ವ ಅರಿವಾಗದು. ಆದರೆ ಓರ್ವ ವಿಶ್ವಾಸಿ-ವ್ಯಕ್ತಿಯ ದೃಷ್ಟಿಯು ಪರಲೋಕದಲ್ಲಿ ಯಶಸ್ಸು ಪಡೆಯುವುದರತ್ತ ನೆಟ್ಟಿರುತ್ತದೆ. ಇಂತಹ ಒಂದು ಶುಭ ಸೂಚನೆ ಅವನಿಗೆ ತಾನು ಬಯಸುತ್ತಿರುವುದನ್ನು ಪಡೆಯುವ ದೃಷ್ಟಿಯಿಂದ ಸರ್ವಸ್ವವಾಗಿರುತ್ತದೆ.

ಈ ಎಲ್ಲ ಪ್ರೇರಣೆಗಳಿಂದ ಹೆಣ್ಮಕ್ಕಳೆಂದರೆ ಬೆಲೆಯಿಲ್ಲದವರಲ್ಲ, ನಾಶಮಾಡಬೇಕಾದವರಲ್ಲ ಎಂಬ ವಿಚಾರ ಮನದಟ್ಟಾಗುತ್ತದೆ. ಅಂದರೆ ಜಗತ್ತಿನ ರಿವಾಜಿಗೆ ಯಾವ ಮಹತ್ವ ಕೊಡಬೇಕಿಲ್ಲ. ಹುಡುಗಿ ಪ್ರಕೃತಿಯ ಬಹುಮೂಲ್ಯ ಕೊಡುಗೆಯೇ ಎಂಬುದು ಸ್ಪಷ್ಟವಾಗುತ್ತದೆ. ಹೆಣ್ಮಕ್ಕಳ ನಡುವೆಯಿರುವ ಕಕ್ಕುಲತೆ, ವಿನಮ್ರತೆಯನ್ನು ಹುಡುಗರಲ್ಲಿ ಕಾಣಲು ಸಾಧ್ಯವಿಲ್ಲ. ಉಕ್ಬ ಬಿನ್ ಆಮಿರ್(ರ) ವರದಿ ಮಾಡಿದ್ದಾರೆ. ಅಲ್ಲಾಹನ ಪ್ರವಾದಿ(ಸ) ಹೇಳಿದರು,

"...ಹೆಣ್ಮಕ್ಕಳ ಮೇಲೆ ತಿರಸ್ಕಾರದಿಂದ ವರ್ತಿಸಬೇಡಿರಿ. ಅವರು ಹಿತಚಿಂತಕರು ಮತ್ತು ದೊಡ್ಡ ಬೆಲೆಯುಳ್ಳವರಾಗಿದ್ದಾರೆ." (ಮುಸ್ನದ್ ಅಹ್ಮದ್)

ಈ ಶಿಕ್ಷಣ ಹೆಣ್ಮಕ್ಕಳ ಜೊತೆ ಸದ್ವರ್ತನೆಯದ್ದಾಗಿದೆ. ಇದನ್ನು ಬೇರೆಲ್ಲಿಯೂ ನಿಮಗೆ ಕಾಣಲು ಅಸಾಧ್ಯ. ಇಸ್ಲಾಮಿ ಕಾನೂನಿನಂತೆ ಮಕ್ಕಳು ಬಡವರಾಗಿದ್ದರೆ, ಅವರಲ್ಲಿ ಜೀವನ ನಿರ್ವಹಣೆಗೆ ತಾಕತ್ತಿಲ್ಲದಿದ್ದರೆ, ಅವರ ಖರ್ಚು ವೆಚ್ಚಗಳನ್ನು ನೋಡಿಕೊಳ್ಳಬೇಕು. ಹೆಣ್ಮಕ್ಕಳ ವಿಚಾರದಲ್ಲಿ ತಂದೆಗೆ ಈ ಹೊಣೆಯಿರುತ್ತದೆ. ಹೆಣ್ಮಕ್ಕಳ ಮದುವೆಯವರೆಗೆ ಅವರನ್ನು ಸಾಕಿ ಸಲಹುವುದು ತಂದೆಯ ಬಾಧ್ಯತೆಯಾಗಿದೆ. ಒಂದು ವೇಳೆ ತಂದೆಯ ಅನುಪಸ್ಥಿತಿಯಲ್ಲಿ ಅವರ ನಿಕಟ ಸಂಬಂಧಿಕರು ಆ ಹೊಣೆಗಾರಿಕೆಯನ್ನು ಕಡ್ಡಾಯವಾಗಿ ಪೂರೈಸಬೇಕು. ವಿವಾಹದ ಆ ಹೊಣೆ ಪತಿಗೆ ಸೇರಿದ್ದು. ಪತಿ ಮೃತನಾಗಿದ್ದು ಅಥವಾ ತಲಾಕ್ ಕೊಟ್ಟರೆ ಮತ್ತು ಮಹಿಳೆ ಆರ್ಥಿಕವಾಗಿ ಸ್ವಾವಲಂಬಿಯೆಂದಲ್ಲವಾದರೆ ಅಥವಾ ಅವಳಿಗೆ ಮಕ್ಕಳು ಇಲ್ಲವಾದರೆ ಇಂತಹ ಸ್ಥಿತಿಯಲ್ಲಿ ತಂದೆ ಅಥವಾ ಇತರ ಹತ್ತಿರದ ಸಂಬಂಧಿಗಳಿಗೆ ಅವಳ ಹೊಣೆಯಿರುತ್ತದೆ. ಇವು ಅವಳ ಕಾನೂನು ರೀತ್ಯಾ ಹಕ್ಕುಗಳಾಗಿವೆ. ಹದೀಸ್ ಈ ವಿಚಾರಕ್ಕೆ ಹೆಚ್ಚು ಒತ್ತು ನೀಡಿದೆ. ಹಝ್ರತ್ ಸುರಾಕಾ ಬಿನ್ ಮಾಲಿಕ್‌ರು(ರ) ವರದಿ ಮಾಡಿದ್ದಾರೆ: ಅಲ್ಲಾಹನ ಸಂದೇಶವಾಹಕರು(ಸ) ಅವರಲ್ಲಿ ಕೇಳಿದರು,

"ನಿನಗೆ ಎಲ್ಲದಕ್ಕಿಂತ ದೊಡ್ಡ ಸದಕ(ದಾನ-ಪುಣ್ಯ) ಯಾವುದೆಂದು ತಿಳಿಸಲೇ?"

ಅವರು ಹೇಳಿದರು "ಹೇಳಿರಿ, ಅಲ್ಲಾಹನ ಸಂದೇಶವಾಹಕರೇ!" ಪ್ರವಾದಿಯವರು(ಸ) ಹೇಳಿದರು, "ನಿನ್ನ ಕಡೆಗೆ ಮರಳಿಸಲ್ಪಟ್ಟ (ವಿಧವೆ ಅಥವಾ ತಲಾಕ್ ನೀಡಿದ) ಹೆಣ್ಮಕ್ಕಳಿಗೆ ನೀನಲ್ಲದೆ ಬೇರೆ ಯಾರೂ ಅವರಿಗೆ ದುಡಿದು ಸಂಪಾದಿಸುವವರು ಇಲ್ಲದಿದ್ದರೆ ಅವಳೊಂದಿಗೆ ಕೃಪೆತೋರುವುದಾಗಿದೆ." (ಮುಸ್ನದ್ ಅಹ್ಮದ್)

ಪ್ರವಾದಿವರ್ಯರ(ಸ) ಸಂಗಾತಿಗಳು ಪ್ರವಾದಿವರ್ಯರ(ಸ) ಈ ಶಿಕ್ಷಣಕ್ಕೆ ಎಷ್ಟು ಗಮನವಿರಿಸುತ್ತಿದ್ದರೆಂದರೆ, ಹಝ್ರತ್ ಝುಬೈರ್‌ರು(ರ) ತನ್ನ ಕೆಲವು ಮನೆಗಳನ್ನು ವಕ್ಫ್ ಮಾಡಿದರು. ಅದರಲ್ಲಿ ವಿವರವಾಗಿ ಅವರ ಹೆಣ್ಮಕ್ಕಳು (ತಲಾಕ್ ಅಥವಾ ವಿಧವೆಯ ಕಾರಣದಿಂದ) ಮರಳಿದರೆ ಈ ಮನೆಯಲ್ಲಿ ಉಳಿಯುವಳು ಎಂದು ಸೇರಿಸಿದ್ದರು. ಪತಿಯ ಕಾರಣದಿಂದ ಅವಳು ಆರ್ಥಿಕವಾಗಿ ಸುದೃಢವಾಗಿದ್ದಾಳೆ. ಅಂತಹವರಿಗೆ ಈ ಮನೆಯಲ್ಲಿ ಯಾವ ಹಕ್ಕೂ ಇಲ್ಲ. (ಬುಖಾರಿ)

ಈ ರೀತಿ ಹೆಣ್ಮಕ್ಕಳ ಕುರಿತು ಪ್ರವಾದಿ ಸಂಗಾತಿಗಳೂ ಅವರ(ಸ) ಶಿಕ್ಷಣದಂತೆ ಅಗಾಧವಾಗಿ ಗಮನಹರಿಸಿದ್ದರು. ಈ ರೀತಿ ಇಸ್ಲಾಮಿ ಕೌಟುಂಬಿಕ ವ್ಯವಸ್ಥೆ ಕಾನೂನು ಹಕ್ಕುಗಳಿಂದ ಸುಶಕ್ತವೂ ಸುರಕ್ಷಿತವೂ ಆಗಿದೆ. ನೈತಿಕವಾಗಿಯೂ ಹೆಣ್ಮಕ್ಕಳಿಗೆ ಅತ್ಯಧಿಕ-ಗೌರವ ಇಸ್ಲಾಮ್ ಕೊಡಮಾಡಿದೆ.

# ಬಾಲಪಂಕ್ತಿ



ನಸೀಹಾ ಫಾತಿಮಾ, ಬಂಟ್ವಾಳ

# ಮಹಾದಾನಿ



ಅಬ್ದುಲ್ಲಾ ಬಿನ್ ಜಅ್‌ಫರ್ ದೊಡ್ಡ ದಾನಿಯೂ, ಪರೋಪಕಾರಿಯೂ ಆಗಿದ್ದರು. ಬಡವರಿಗೆ ಸಹಾಯ ಮಾಡುವುದು, ಅವರಿಗೆ ಬೇಕಾದ ವಸ್ತುಗಳನ್ನು ದಾನ ಮಾಡುವುದು ಅವರಿಗೆ ಇಷ್ಟವಾದ ಕೆಲಸವಾಗಿತ್ತು.

ಒಂದು ದಿನ ಅವರು ಒಂದು ಖರ್ಜೂರ ತೋಟದ ಬದಿಯಿಂದ ನಡೆದು ಹೋಗುತ್ತಿದ್ದರು. ಆಗ ಅವರು ತೋಟದಲ್ಲಿ ಓರ್ವ ಕಾವಲುಗಾರನನ್ನು ಕಂಡರು ಮತ್ತು ಅವನ ಬಳಿ ಹೋಗಿ ಕುಶಲೋಪರಿ ವಿಚಾರಿಸಿದರು.

ಅವನು ಕಪ್ಪಾದ ಓರ್ವ ನೀಗ್ರೋ ಗುಲಾಮ ಹುಡುಗನಾಗಿದ್ದ. ಹಗಲೂ ರಾತ್ರಿ ಆ ತೋಟಕ್ಕೆ ಕಾವಲು ಕಾಯುವುದು ಅವನ ಕೆಲಸ. ಅಲ್ಲಿಯೇ ಊಟ ಮಾಡಿ ಮಲಗುತ್ತಿದ್ದ. ಯಜಮಾನನ ಮನೆಯಿಂದ ಅವನಿಗೆ ಊಟ ತರಲಾಗುತ್ತಿತ್ತು.

ಅಬ್ದುಲ್ಲಾ ಬಿನ್ ಜಅ್‌ಫರ್ ಅವನೊಂದಿಗೆ ಮಾತನಾಡುತ್ತಿರುವಾಗ ಅವನಿಗೆ ಊಟ ತಂದು ನೀಡಲಾಯಿತು. ಅವನು ಊಟ ಮಾಡಲು ಕುಳಿತನು. ಆಗ ಹಸಿವಿನಿಂದ ಬಳಲಿದ ಒಂದು ನಾಯಿಯು ಅಲ್ಲಿಗೆ ಬಂತು. ಆ ಹುಡುಗನು ನಾಯಿಯನ್ನು ಸ್ವಲ್ಪ ಹೊತ್ತು ದಿಟ್ಟಿಸಿದನು. ಅವನಿಗೆ ಆ ನಾಯಿಯೊಂದಿಗೆ ಕರುಣೆ ಉಂಟಾಗಿ ಸ್ವಲ್ಪ ಊಟವನ್ನು ನಾಯಿಗೆ ನೀಡಿದನು. ಆಗ ನಾಯಿಯು ಒಮ್ಮೆಲೇ ತಿಂದು ಮುಗಿಸಿ ಬಾಲ ಅಲ್ಲಾಡಿಸಿ ಕೃತಜ್ಞತೆ ಅರ್ಪಿಸಿತು.

ಅವನು ಮತ್ತೆ ಸ್ವಲ್ಪ ಅನ್ನ ನೀಡಿದ. ಆಗ ನಾಯಿಯು ಬೇಗನೇ ತಿಂದು ಮುಗಿಸಿತು. ಅವನು ಊಟ ನೀಡುವುದನ್ನು ಮುಂದುವರಿಸಿದನು. ಕೊನೆಗೆ ಅವನ ಪಾಲಿನ ಊಟವು ಮುಗಿದುಹೋಯಿತು. ಇದನ್ನು ಕಂಡು ಆಶ್ಚರ್ಯಚಕಿತರಾದ ಅಬ್ದುಲ್ಲಾ ಬಿನ್ ಜಅ್‌ಫರ್ ಕೇಳಿದರು, "ಏನು ಮಾಡಿದ್ದು ನೀನು? ಊಟವನ್ನೆಲ್ಲ ನಾಯಿಗೆ ನೀಡಿದೆ. ಈಗ ನೀನೇನು ಮಾಡುವೆ?"

ಆಗ ಆ ಹುಡುಗ "ಆ ಸಾಧು ಪ್ರಾಣಿ ತುಂಬಾ ಹಸಿದಂತೆ ತೋರಿತು. ಅದು ಎಲ್ಲೋ ದೂರದಿಂದ ಬಂದಂತಿದೆ. ಯಾಕೆಂದರೆ ಈ ಊರಲ್ಲಿ ನಾಯಿಗಳಿಲ್ಲ. ಅದು ಓಡಿ ಓಡಿ ತುಂಬಾ ಸುಸ್ತಾಗಿತ್ತು."

"ನಿನಗೆ ದಿನದಲ್ಲಿ ಎಷ್ಟು ಊಟ ಸಿಗುತ್ತದೆ" ಅವರು ಕೇಳಿದರು.

"ನೀವು ಈಗ ನೋಡಲಿಲ್ಲವೇ ಅಷ್ಟು ಮಾತ್ರ"

"ಸಿಕ್ಕಿದ ಎಲ್ಲವನ್ನೂ ನೀನು ನಾಯಿಗೆ ನೀಡಿದೆ. ಹಾಗಾದರೆ ಇಂದು ನೀನು ಏನನ್ನು ತಿನ್ನುವೆ?"

"ನಾನು ಇಂದು ಹಸಿದಿರುತ್ತೇನೆ."

ಇದನ್ನು ಕೇಳಿದ ಅಬ್ದುಲ್ಲಾರಿಗೆ ಆಶ್ಚರ್ಯವಾಯಿತು. ನನ್ನ ಕುರಿತು ಜನರು ದೊಡ್ಡ ದಾನಿ ಎಂದು ಹೇಳುತ್ತಾರೆ. ಆದರೆ ಈ ಬಾಲಕನ ದಾನದ ಮುಂದೆ ನನ್ನ ದಾನಕ್ಕೆ ಯಾವ ಬೆಲೆ? ಅವರು ಚಿಂತಾ ಮಗ್ನರಾದರು.

ಅವರಿಗೆ ಆ ಬಾಲಕನೊಂದಿಗೆ ಕರುಣೆ ತೋರಿತು. ಅವರು ಅವನನ್ನೂ ಆ ತೋಟವನ್ನೂ ಅದರ ಯಜಮಾನನಿಂದ ಖರೀದಿಸಿದರು ಮತ್ತು ಅವನನ್ನು ಗುಲಾಮಗಿರಿಯಿಂದ ಸ್ವತಂತ್ರಗೊಳಿಸಿದರು. ಅವನನ್ನು ಬಿಟ್ಟುಕೊಡುವಾಗ ಅವನಿಗೆ ಆ ತೋಟದ ಅರ್ಧ ಭಾಗವನ್ನು ನೀಡಿದರು.

## ಅರಬಿ ಸುಡೊಕು 86

| | | | | | |
|---|---|---|---|---|---|
| ب | | ت | ح | | ج |
| | ح | | | ث | |
| ت | | ب | ا | | ث |
| ث | | ح | ج | | ب |
| | ت | | | ب | |
| ح | | ث | ت | | ا |

ಅಬ್ದುಲ್ ಬಶೀರ್ VII[th] Std
ಗಾಂಧಿ ಇ.ಎಂ. ಸ್ಕೂಲ್, ಭಟ್ಕಳ

**ಆಟದ ನಿಯಮ:**
ಖಾಲಿ ಜಾಗದಲ್ಲಿ ا ನಿಂದ ح ವರೆಗಿನ ಅರಬಿ ಅಕ್ಷರಗಳನ್ನು ತುಂಬಬೇಕು. ಉದ್ದ ಸಾಲು, ಅಡ್ಡ ಸಾಲು ಹಾಗೂ 2x3 ಜಾಗದ ಚೌಕ ದಲ್ಲಿ ಯಾವುದೇ ಅಕ್ಷರ ಎರಡು ಬಾರಿ ಬರುವಂತಿಲ್ಲ. ನಿಮ್ಮ ಜಾಣ್ಮೆಗೆ, ತಾಳ್ಮೆಗೆ, ಬುದ್ಧಿವಂತಿಕೆಗೆ ಇಲ್ಲಿದೆ ಚಾಲೆಂಜ್!

**ಅರಬಿ ಸುಡೊಕು -84ರ ಉತ್ತರ**

| | | | | | |
|---|---|---|---|---|---|
| ث | ا | ج | ح | ت | ب |
| ب | ت | ح | ا | ث | ج |
| ا | ث | ت | ج | ب | ح |
| ج | ح | ب | ث | ا | ت |
| ح | ب | ا | ت | ج | ث |
| ت | ج | ث | ب | ح | ا |

**www.sanmarga.com**
ಸನ್ಮಾರ್ಗ ವೆಬ್‌ಸೈಟ್‌ನ ವಿನ್ಯಾಸದ ಬಗ್ಗೆ ನಿಮ್ಮ ಸಲಹೆ, ಅಭಿಪ್ರಾಯಗಳಿಗೆ ಸ್ವಾಗತ.

# ಮದುವೆಯನ್ನೇ ತ್ರಾಸ ಮಾಡಿ ಮರ್ಯಾದೆಯ ಬಗ್ಗೆ ಮಾತಾಡುವುದೇ?

(11ನೇ ಪುಟದಿಂದ)

ಸಹೋದರಿಯರ ಮಕ್ಕಳು ಪರಸ್ಪರ ವಿವಾಹವಾಗಲು ಹೇಗೆ ಅಡ್ಡಿಯಲ್ಲವೋ, ಹಾಗೆಯೇ ಸಹೋದರ, ಸಹೋದರರ ಮಕ್ಕಳು ಪರಸ್ಪರ ವಿವಾಹವಾಗುವುದು ಅಪರಾಧವಲ್ಲ. ಅದನ್ನು ಬಹಳವಾಗಿ ಉತ್ತೇಜಿಸಿದೆ ಎಂದು ಮಾತ್ರ ಹೇಳಲಾರೆ. ಆದರೆ ಇಂದು ನೆಲೆಯಲ್ಲಿರುವ ಶರೀಅತ್ ಪ್ರಕಾರ ಅಕ್ಕ ಅಣ್ಣನ ಮಕ್ಕಳನ್ನು ತಮ್ಮನೋ ತಂಗಿ, ತಮ್ಮ, ಅಕ್ಕ, ಅಣ್ಣ ಪರಸ್ಪರ ವಿವಾಹವಾಗುವಂತಿಲ್ಲ. ಇಸ್ಲಾಮಿ ದೃಷ್ಟಿಯಲ್ಲಿ ಅದು ಮಹದಪರಾಧವಾಗಿದೆ. ರಾಜಸ್ಥಾನದ ದಲಿತ ಕುಟುಂಬ ಮರ್ಯಾದಾ ಹತ್ಯೆಯಲ್ಲಿ ಇಂತಹದ್ದೇನೂ ಇರಲಿಲ್ಲ. ಅದು ಕೊರಳು ಸೀಳಿ ಕೊಲ್ಲುವಂತಹ ಅಪರಾಧವೂ ಅಲ್ಲ.

ವೈವಾಹಿಕ ಸಂಬಂಧ ಸಮಾಜದ ಅಡಿಗಲ್ಲಾಗಿದೆ. ಕುಟುಂಬದ ಭದ್ರ ಬುನಾದಿಗೆ ವಿವಾಹವೆಂಬುದು ವರದಾನವಾಗಿದೆ. ಆದ್ದರಿಂದ ಇಸ್ಲಾಮಿನಲ್ಲಿ ವಿವಾಹಕ್ಕೆ ಇಬ್ಬರು ಸಾಕ್ಷಿಗಳಿದ್ದರೆ ಸಾಕಾಗುತ್ತದೆ. ದೊಡ್ಡ ಕಟ್ಟುಪಾಡುಗಳಿಂದ ಮತ್ತು ವರದಕ್ಷಿಣೆ ಮುಂತಾದ ಸಂಪ್ರದಾಯಗಳಿಂದ ವಿವಾಹವನ್ನು ದೂರವಿಟ್ಟು ಇಸ್ಲಾಮ್ ಒಂದು ಸರಳ ಪ್ರಕ್ರಿಯೆಯಾಗಿ ಮಾಡಿರುವ ಉದ್ದೇಶವೇ ಅದು. ಅಂದರೆ ವಿವಾಹವು ದುಬಾರಿಯಾಗಿ ಆ ಕಾರಣದಿಂದ ಸಮಾಜದಲ್ಲಿ ಲೈಂಗಿಕ ಅರಾಜಕತೆಯುಂಟಾಗಬಾರದು.

ಪ್ರೇಮಿಸುವುದರಿಂದ ಒಂದು ಕುಟುಂಬ ಆರಂಭವಾಗಬಹುದೇ ಹೊರತು ಅಲ್ಲಿ ಅರಾಜಕತೆಯೇರ್ಪಡಲಾರದು. ಆದ್ದರಿಂದ ಅದು ಕಗ್ಗೊಲೆಗೆ ಕಾರಣವಾಗಲಾರದು. ಇನ್ನು ಪ್ರೇಮಿಸುವವರು ಜಾತಿಯನ್ನು ಮೀರಿದಾಗ ಎಡವಟ್ಟಾಗುವುದು ಸಹಜವೇ. ಆದರೆ ಧಾರ್ಮಿಕ ಶ್ರದ್ಧೆಯಿರುವವರು ಅಂತಹ ಕೆಲಸಕ್ಕೆ ಕೈ ಹಾಕುವುದಿಲ್ಲ ಬಿಡಿ. ಹಾಗಂತ ಧರ್ಮ ಜಾತಿಯೊಳಗಿದ್ದು ಪ್ರೇಮಿಸಿದವರು ಸಹೋದರರ ಮಕ್ಕಳಾಗಿದ್ದರೆ ಎಂಬುದು ಮರ್ಯಾದೆ ಹೋಗುವ ಕಾರಣವೇ ಅಲ್ಲ. ಆ ಮೂಲಕ ಯಾವ ಅರಾಜಕತೆಯೂ ಸಂಭವಿಸುವುದಿಲ್ಲ. ಯಾರಾದರೂ ಸಮಾಜಕ್ಕೆ ಕಂಟಕವಾಗಿದೆ ಎಂಬ ಕಾರಣಕ್ಕೆ ವಿರೋಧಿಸುವುದು ತರ್ಕಕ್ಕೆ ಒಪ್ಪುವ ವಿಚಾರವಾಗುತ್ತದೆ. ಅದು ಮರ್ಯಾದೆಯ ಪ್ರಶ್ನೆಯಾಗಿ ಉದ್ಭವಿಸುತ್ತದೆಂದಿಟ್ಟುಕೊಳ್ಳೋಣ. ಹಾಗಂತ ಅದು ಕೊಲ್ಲುವ ವಿಚಾರವೇ? ಇಂದು ಕೋರ್ಟು, ಕಾನೂನು ಇತ್ಯಾದಿಯೆಂಬುದು ಇದೆಯಲ್ಲ. ಭಾರತದಲ್ಲಿ ಜಾತಿಯನ್ನು ಉಲ್ಲಂಘಿಸಿದರೆಂಬ ಕಾರಣ ನೀಡಿ ಅವರ ವಿರುದ್ಧ ಕೈ ಎತ್ತುವ ಅಧಿಕಾರ ಜಾತಿಗಳಿಗಿಲ್ಲ. ನಿಜವಾಗಿ ವಿಶ್ವಾಸಿ ಎಂದಿಗೂ ಜಾತಿಯನ್ನೂ ಧರ್ಮವನ್ನೂ ಉಲ್ಲಂಘಿಸುವುದಿಲ್ಲ.

ನಿಜಕ್ಕಾದರೆ ಇಂದು ಸಮಾಜ ಶಿಷ್ಟಾಚಾರದ ಚೌಕಟ್ಟಿನಲ್ಲಿ ಸಾಗುತ್ತಿಲ್ಲ. ವಿವಾಹವೆಂಬುದನ್ನು ವರದಕ್ಷಿಣೆ ಇತ್ಯಾದಿ ಗೊಡ್ಡು ಸಂಪ್ರದಾಯಗಳಿಂದ ತ್ರಾಸದ್ದಾಗಿ ಮಾಡಲಾಗಿದೆ. ವಿವಾಹವಾಗುವುದೇ ಕಷ್ಟ ಎಂದಿರುವಾಗ ಹೆಣ್ಮಗಳೊಬ್ಬಳು ಪ್ರೇಮಿಸಿಯಾದರೂ ವಿವಾಹವಾಗುತ್ತೇನೆಂದು ಹೊರಟರೆ, ಅದಕ್ಕೆ ಸಮಾಜವೂ ಒಂದು ಕಾರಣವಲ್ಲವೇ? ಸರಳ ವಿವಾಹ ವಿಧಾನವನ್ನು ಗೊಡ್ಡು ಸಂಪ್ರದಾಯಗಳನ್ನು ಹೇರಿ ದುರ್ಭರ ಪದ್ಧತಿ ಮಾಡಿದವರಿಗೆ ಮರ್ಯಾದೆ ಇದೆಯಾ? ಇನ್ನು ಇಂತಹವರು ಮರ್ಯಾದಾ ಹತ್ಯೆ ಇತ್ಯಾದಿಗಳಿಗೆ ಹೇಗೆ ಹೊರಡುತ್ತಾರೆ? ಅದನ್ನು ಹೇಗೆ ಸಮರ್ಥಿಸಿಕೊಳ್ಳುತ್ತಾರೆ?

ನೋಡಿ, ಇಸ್ಲಾಮಿ ವಿವಾಹದ ಚೌಕಟ್ಟನ್ನು ಅಲ್ಲಿ ಮುಸ್ಲಿಮರು ಹುಡುಗಿಯನ್ನು ಮನೆ ತುಂಬಿಸಲು ವಧುದಕ್ಷಿಣೆ ನೀಡಬೇಕು. ಹೆಣ್ಣನ್ನು, ಹೆಣ್ಣು ಹೆತ್ತವರನ್ನು ಗೌರವಿಸುವ ವಿಧಾನ. ದುರ್ಬಲರು, ವಿಧವೆಯರು, ಯಾವುದೋ ಕಾರಣದಿಂದ ವಯಸ್ಸು ಮೀರಿದವರಿದ್ದರೆ ಅಂತಹವರಿಗೆ ಬಾಳು ನೀಡಬೇಕು ಎಂಬ ಕಾರಣದಿಂದ ಬಹುವಿವಾಹಕ್ಕೂ ಇಸ್ಲಾಮ್ ಅನುಮತಿಸಿತು. ಲೈಂಗಿಕ ಅರಾಜಕತೆಯುಂಟಾಗಬಾರದು ಮತ್ತು ಎಲ್ಲರಿಗೂ ವಿವಾಹವಾಗಬೇಕು ಎಂಬ ಕಾರಣದಿಂದ ಇಸ್ಲಾಮ್ ನಾಲ್ಕು ಮದುವೆಯ ವರೆಗೂ ಅನುಮತಿ ನೀಡಿದೆ. ಆದರೆ ಅದಕ್ಕೂ ಕೆಲವೊಂದು ಶರ್ತವಿದೆ. ಎಲ್ಲ ಹೆಂಡತಿಯರನ್ನು ಸಮಾನವಾಗಿ ನೋಡಿಕೊಳ್ಳಬೇಕು, ಖರ್ಚು ವೆಚ್ಚ ಭರಿಸಬೇಕು, ತಾರತಮ್ಯ ಇತ್ಯಾದಿ ಮಾಡಬಾರದು ಎಂಬ ಶರ್ತವಿಟ್ಟೇ ಇಸ್ಲಾಮ್ ಈ ವಿವಾಹದ ಮೂಲಕ ಸಮಾಜದ ಒಟ್ಟಾರೆ ಹಿತ ಸಂರಕ್ಷಣೆಗೆ ಆದ್ಯತೆ ನೀಡಿದೆ. ದುರಂತವೆಂದರೆ ಇಂತಹ ಉದಾತ್ತ ಧ್ಯೇಯವನ್ನೇ ಅಪಮಾನಿಸಲಾಗುತ್ತಿದೆ. ನೂರಾರು ರಾಜಕೀಯ ಕಾರಣಗಳಿಗಾಗಿ ಮುಸ್ಲಿಮರನ್ನು ಅವಹೇಳಿಸಲು ಸಮಯ ಸಾಧಿಸುವವರು ಮರ್ಯಾದಾ ಹತ್ಯೆಯಂತಹ ಸಂವಿಧಾನ ವಿರೋಧಿ, ಮಾನವ ವಿರೋಧಿ ಪಾಶವೀಯ ಕೃತ್ಯದ ಕುರಿತೂ ಏನೂ ಹೇಳುವುದಿಲ್ಲ. ದುರಂತವೆಂದರೆ ಇಂತಹ ಒಂದಿಲ್ಲೊಂದು ಮನೋ ಸ್ಥಿತಿಯ ಬಲಿಪಶು ಆರಂಭದಲ್ಲಿ ತಿಳಿಸಿದ ರಾಜಸ್ಥಾನದ ಆ ದಲಿತ ಕುಟುಂಬ ಎನ್ನಬೇಕಾಗುತ್ತದೆ. ಮಗಳು ಹೋದರೂ ಪರ್ವಾಗಿಲ್ಲ, ಮರ್ಯಾದೆ ಮುಖ್ಯ ಎನ್ನುತ್ತಾಳೆ ಆ ನಿರ್ದಯಿ ತಾಯಿ. ಆ ಮರ್ಯಾದೆ ಯಾವುದು?

ಇನ್ನೊಂದು ವಿಷಯ; ಇತ್ತೀಚೆಗೆ ಬಿಹಾರದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ವೀರೇಂದ್ರ ಕುಮಾರ್ ಎಂಬವನ ಮೇಲೆ ವರದಕ್ಷಿಣೆ ಕೇಸು ದಾಖಲಾಯಿತು. ಆತ ಹುಡುಗಿಯನ್ನು ಪ್ರೀತಿಸಿ ದೈಹಿಕವಾಗಿ ಬಳಸಿ, ವಿವಾಹ ನಿಶ್ಚಿತಾರ್ಥವೂ ಮುಗಿಸಿ, ಕೊನೆಗೆ 1 ಲಕ್ಷ ಮತ್ತು ಕಾರನ್ನು ವರದಕ್ಷಿಣೆ ಕೇಳಿ ಸಿಕ್ಕಲಾರದೆಂದರಿತಾಗ ಮದುವೆಯನ್ನು ರದ್ದು ಪಡಿಸಿದ್ದ. ಇದು ಪ್ರೇಮವಲ್ಲ ಕಾಮ, ಹಣದ ಮೋಹ. ವಿದ್ಯಾವಂತರೇ ಇಂತಹ ಕೀಳ್ಮಟ್ಟಕ್ಕಿಳಿಯುವ ದಿನಗಳಿವು. ಇವರ ನಡುವೆ ದಲಿತ ಮಹಿಳೆ ಎತ್ತಿ ಹಿಡಿದ ಮರ್ಯಾದೆಯ ಪ್ರಶ್ನೆ ಚಿಕ್ಕದಾಗಿಯೇ ಕಾಣುತ್ತಿದೆ. ಹೌದು, ವಿವಾಹವನ್ನು ಇಂತಹವರ ಕೈಯಿಂದ ರಕ್ಷಿಸಬೇಕಾಗಿದೆ. ನಮ್ಮ ಅಮಾಯಕ ಹೆಣ್ಮಕ್ಕಳನ್ನು ಕೂಡಾ. ಇದೇ ನಿಜವಾದ ಮರ್ಯಾದೆ.

ಕಥೆ

# ವಾಸ್ತವ

ಅಬೂ ಖದೀಜ ಮುನೀಫಾ, ಕಂದಕ್

(ಕಳೆದ ವಾರದಿಂದ)

ದಿನಗಳುರುಳಿದವು. ಆದರೆ ರಫೀಕ್ ಮಾತ್ರ ಈ ಸಂಶಯದಲ್ಲೇ ಇದ್ದು ಕೊರಗುತ್ತಿದ್ದನು. ಒಂದು ಮುಂಜಾನೆ ದಿನ ಪತ್ರಿಕೆ ಓದುತ್ತಿರುವಾಗ, ಹಿಂದೂ ಹುಡುಗಿಯೊಂದಿಗೆ ಮಾತನಾಡಿದ ಕಾರಣಕ್ಕಾಗಿ ಒಬ್ಬ ಮುಸ್ಲಿಮ್ ಯುವಕನಿಗೆ ಮಾರಣಾಂತಿಕ ಹಲ್ಲೆ ನಡೆಸಿದ್ದರಿಂದ ಕೊಲೆಯತ್ನ ಎಂಬ ಕೇಸಿನಲ್ಲಿ ಬಂಧಿಸಲಾದ ಕೆಲವು ಕೋಮುವಾದಿ (ಫ್ಯಾಸಿಸ್ಟ್) ಯುವಕರೊಂದಿಗೆ ಸಂತೋಷ್‌ನ ಫೋಟೋವನ್ನು ಕಂಡು ರಫೀಕ್‌ನಿಗೆ ದಿಗ್ಭ್ರಮೆಯಾಯಿತು. ಅದರೊಂದಿಗೆ ಸಂತೋಷ್ ತನ್ನಿಂದ ದೂರವಾಗುತ್ತಿರುವುದರ ಕಾರಣವನ್ನು ಕಂಡುಕೊಂಡನು. ಆದರೆ ಅವನಿಗೆ ನನ್ನ ಪ್ರಾಣ ಸ್ನೇಹಿತ ಜೈಲಲ್ಲಿರುವುದನ್ನು ಕಂಡು ಸಹಿಸಲಾಗಲಿಲ್ಲ. ಆ ಕೂಡಲೇ ಅವನು ಜೈಲಿಗೆ ಹೋಗಿ ಸಂತೋಷ್‌ನ ಬಗ್ಗೆ ಜೈಲಧಿಕಾರಿಯೊಂದಿಗೆ ವಿಚಾರಿಸಿದ. ಆಗ ಜೈಲಧಿಕಾರಿ, ಸಂತೋಷ್‌ನನ್ನು ಕಾಣಲು ಅನುವು ಮಾಡಿಕೊಟ್ಟರು. ರಫೀಕ್‌ನನ್ನು ಕಾಣುತ್ತಿದ್ದಂತೆ ಸಂತೋಷ್ ತನ್ನ ತಲೆ ತಗ್ಗಿಸಿದ. ಅಳು ಮಿಶ್ರಿತ ಧ್ವನಿಯಲ್ಲಿ, "ಯಾಕೋ ಹೀಗೆ ಮಾಡಿದೆ. ನೀನು ಯಾವಾಗ ಅವರೊಂದಿಗೆ ಸೇರಿದ್ದು. ನಾನು ನಿನ್ನಿಂದ ಇದನ್ನು ನಿರೀಕ್ಷಿಸಿರಲಿಲ್ಲ. ಯಾಕೋ ಹೀಗೆ ಮಾಡಿದೆ ಹೇಳೋ" ಎಂದು ಅವನ ಅಂಗಿ ಹಿಡಿದೆಳೆದು ಕೇಳಿದಾಗ, "ಮತ್ತೆ ನಮ್ಮ ಹುಡುಗಿಯರೊಂದಿಗೆ ಮಾತನಾಡುವಾಗ ಅವನನ್ನು ಬಿಟ್ಟು ಬಿಡಬೇಕಾ! ಅದೂ ಅಲ್ಲದೇ ಈಗ ನಿಮ್ಮ ಹೊಸದೊಂದು ಜಿಹಾದ್ ಪ್ರಾರಂಭವಾಗಿದೆಯಲ್ಲ. ಲವ್ ಜಿಹಾದ್ ಎಂಬ ಹೆಸರಿನಲ್ಲಿ. ಈಗ ಮಾತನಾಡುತ್ತಾನೆ. ನಾಳೆ ಲವ್ ಮಾಡಿ ಮದುವೆ ಆಗಿ ಇಸ್ಲಾಮ್ ಧರ್ಮಕ್ಕೆ ಮತಾಂತರ ಮಾಡಿ ಕೆಟ್ಟ ಕೆಲಸಕ್ಕೆ ಉಪಯೋಗಿಸುತ್ತಾನೆ. ಇದನ್ನೆಲ್ಲ ನೋಡಿ ಸುಮ್ಮನೆ ಕುಳಿತುಕೊಳ್ಳಬೇಕು ಎಂದು ಹೇಳುತ್ತೀಯಾ?"

ಈ ಮಾತಿನಿಂದಾಗಿ ಚಕಿತಗೊಂಡ ರಫೀಕ್, "ನಿನ್ನ ತಲೆಯಲ್ಲಿ ಇದನ್ನೆಲ್ಲ ತುಂಬಿಸಿದವರಾರು? ನೀನು ಯಾವಾಗಿನಿಂದ ಈ ರೀತಿ ಯೋಚಿಸಲು ಪ್ರಾರಂಭಿಸಿದ್ದು."

"ಬುದ್ಧಿ ಬಂದಾಗಿನಿಂದ."

"ಅಂದರೆ ಮುಸ್ಲಿಮರೆಲ್ಲರೂ ಹಾಗೆ ಮಾಡುತ್ತಾರೆ ಎಂದು ನೀನು ಹೇಳುತ್ತಿರುವೆಯಾ?"

"ಎಲ್ಲರಲ್ಲದಿದ್ದರೂ ಹೆಚ್ಚಿನವರು ಈ ರೀತಿ ಮಾಡುತ್ತಾರೆ."

"ಹಾಗಾದರೆ ಕೇಳು, ನೀನು ಈಗ ಹೇಳಿದೆಯಲ್ಲ ಲವ್ ಜಿಹಾದ್ ಎಂಬ ಹೊಸ ಜಿಹಾದನ್ನು ಪ್ರಾರಂಭಿಸಿದ್ದೀರಿ ಎಂದು. ಈ ಅನೈತಿಕ ಲವ್‌ಗೆ ಪವಿತ್ರ ಜಿಹಾದನ್ನು ಸೇರಿಸಿ ಲವ್ ಜಿಹಾದ್ ಎಂದೆಲ್ಲ ಹೇಳುತ್ತಿದ್ದೀರಲ್ಲ. ಇದಕ್ಕೂ ಇಸ್ಲಾಮಿಗೂ ಸಂಬಂಧವೇ ಇಲ್ಲ. ಇಸ್ಲಾಮ್ ಅನೈತಿಕ ಎಂದು ಸಾರಿರುವ ಲವ್‌ಗೂ ಪವಿತ್ರ ಎಂದು ಸಾರಿರುವ ಜಿಹಾದ್‌ಗೂ ಎಲ್ಲಿಯ ನಂಟು. ಇದೆಲ್ಲ ಕೇವಲ ಫ್ಯಾಸಿಸ್ಟ್ ಶಕ್ತಿಗಳ ಗೂಢತಂತ್ರ. ಜಗತ್ತಿನಲ್ಲೇ ಇಸ್ಲಾಮ್ ಶೀಘ್ರವಾಗಿ ಬೆಳೆಯುತ್ತಿರುವುದನ್ನು ಕಂಡು ಸಹಿಸಲಾಗದೆ ಅದರ ವಿರುದ್ಧ ಅಪಪ್ರಚಾರ ನಡೆಸುತ್ತಿದ್ದಾರೆ. ಮುಸ್ಲಿಮರು ಲವ್ ಮಾಡಿದರೆ ಅದು ಲವ್ ಜಿಹಾದ್. ಅದೇ ಹಿಂದೂಗಳು ಮಾಡಿದರೆ ಇಬ್ಬರು ಪ್ರೇಮಿಗಳು ಸತಿಪತಿಗಳಾಗುವ ಮೂಲಕ ಸುಖಾಂತ್ಯ ಕಂಡಿತು ಎಂಬ ದ್ವಂದ್ವ ನೀತಿಯನ್ನು ಅನುಸರಿಸುವುದು ಎಷ್ಟು ಸರಿ? ಸಂತೋಷ್, ಇನ್ನೂ ಕಾಲ ಮಿಂಚಿಲ್ಲ. ಇದನ್ನೆಲ್ಲ ಬಿಟ್ಟು ಬಿಡೋ. ಇದು ನಿನ್ನ ಸ್ನೇಹಿತ ಹೇಳುತ್ತಿರುವುದು. ನಿನಗೆ ಇದು ಬೇಡ. ಸಮಯವಿದೆ. ಆಲೋಚಿಸಿ ಒಂದು ತೀರ್ಮಾನಕ್ಕೆ ಬಾ" ಎಂದು ಹೇಳಿ ರಫೀಕ್ ಹೊರಬರುತ್ತಾನೆ.

ಕಾಲಚಕ್ರ ಉರುಳುತ್ತದೆ. ಸಂತೋಷ್ ಜಾಮೀನಿನ ಮೇಲೆ ಬಿಡುಗಡೆ ಹೊಂದುತ್ತಾನೆ. ಒಂದು ದಿನ ಸಂತೋಷ್‌ನ ತಾಯಿ ಬಂದು ರಫೀಕ್‌ನಲ್ಲಿ, "ಮಗ ರಫೀಕ್! ಸಂತೋಷ್ ನಮಗೆ ಬೇರೆ ಮನೆ ನೋಡುತ್ತಿದ್ದಾನೆ" ಎಂದು ಆತಂಕ ವ್ಯಕ್ತಪಡಿಸಿದಳು.

"ಏನು ಬೇರೆ ಮನೆಯೇ? ಏಕೆ ಇಲ್ಲೀಗ ಏನಾಯಿತು?"

"ಅದೇನು ನನಗೆ ಗೊತ್ತಿಲ್ಲ ಮಗ. ನಾನೆಷ್ಟು ಹೇಳಿದರೂ ನನ್ನ ಮಾತು ಕೇಳುತ್ತಿಲ್ಲ. ಅವನದು ಒಂದೇ ಹಠ. ಇಲ್ಲಿಂದ ದೂರ ಹೋಗಬೇಕಂತೆ. ನೀನು ಸ್ವಲ್ಪ ಅವನಿಗೆ ಬುದ್ಧಿ ಹೇಳೋ. ನಿನ್ನ ಮಾತು ಅವನು ಖಂಡಿತವಾಗಿಯೂ ಕೇಳುತ್ತಾನೆ."

"ಆಯಿತಮ್ಮ... ನೀವು ಚಿಂತಿಸಬೇಡಿ. ನಾನು ಅವನಲ್ಲಿ ಮಾತನಾಡುತ್ತೇನೆ." ಸಾಯಂಕಾಲ ಸಂತೋಷ್‌ನನ್ನು ಭೇಟಿಯಾಗಿ, "ಅಲ್ಲ ಸಂತೋಷ್ ನೀನು ಬೇರೆ ಮನೆ ನೋಡುತ್ತಿರುವೆಯಂತೆ ಹೌದೇ? ಇಲ್ಲಿದ್ದರೆ ಏನು ಸಮಸ್ಯೆಯಿದೆ?"

"ಇಲ್ಲಿ ಇರುವುದೇ ಒಂದು ಸಮಸ್ಯೆ. ನನ್ನ ಸುತ್ತಮುತ್ತಲು ಇರುವವರೆಲ್ಲ ಮುಸ್ಲಿಮರು. ಯಾವಾಗ ನಮ್ಮ ಜೀವಕ್ಕೆ ಅಪಾಯವಿದೆ ಎಂದು ಹೇಳಲು ಸಾಧ್ಯವಿಲ್ಲ."

"ಸಂತೋಷ್ ನೀನು ಇಷ್ಟು ಬದಲಾದುದು ಯಾವಾಗಿನಿಂದ. ನಿನಗೆ 25 ವರ್ಷದಿಂದ ಇಲ್ಲದ ಹೆದರಿಕೆ, ಭಯ ಈಗ ಒಮ್ಮೆಲೇ ಎಲ್ಲಿಂದ ಬಂತು. ಅದ್ಸರಿ ನಿನ್ನ ಜೀವಕ್ಕೆ ಅಪಾಯವಿದೆಯೆಂದೆಯಲ್ಲ, ಯಾರಿಂದ? ನಮ್ಮ ಮನೆಯವರಿಂದಲೇ...?"

"ಛೇ ಏನು ಹೇಳುತ್ತಿರುವೆ ರಫೀಕ್. ನಿಮ್ಮ ಮನೆಯನ್ನು ನನ್ನ ಸ್ವಂತ ಮನೆಯೆಂದು ತಿಳ್ಕೊಂಡಿದ್ದೀನಿ."

"ಮತ್ತೆ ಯಾರಿಂದ? ನಮ್ಮ ಪಕ್ಕದ್ಮನೆ ಯವರಾದ ಅದ್ರಾಕರವರಿಂದಲಾ? ಅಥವಾ ಮೂಸಾಕರವರಿಂದಲಾ? ಹೇಳೋ. ಯಾಕೆ ಮೌನಿಯಾದೆ?"

ಸಂತೋಷ್‌ನಿಂದ ಉತ್ತರವಿರಲಿಲ್ಲ.

ರಫೀಕ್‌ನ ಪ್ರತಿಯೊಂದು ಮಾತು ಸಂತೋಷ್‌ನ ಮನವನ್ನು ತಟ್ಟುತ್ತಿತ್ತು. ಆದರೂ ಸಂತೋಷ್ ತನ್ನ ಹೃದಯವನ್ನು ತೆರೆಯಲಿಲ್ಲ. ರಫೀಕ್‌ನ ಮಾತಿನಿಂದಾಗಿ ಕೆಲದಿನಗಳ ಮಟ್ಟಿಗೆ ಬೇರೆ ಮನೆ ಹುಡುಕುವುದನ್ನು ಕೈ ಬಿಟ್ಟರೂ ಸಂತೋಷ್‌ನಲ್ಲಿದ್ದ ದುಗುಡ ಹಾಗೂ ಭಯ ಇನ್ನೂ ಹೋಗಿರಲಿಲ್ಲ. ಹೀಗೆಯೇ ಕೆಲವು ದಿನಗಳು ಕಳೆಯಿತು.

ಸಂತೋಷ್ ನಿನ್ನನ್ನು ಕ್ಯಾಪ್ಟನ್ ಕರೆಯುತ್ತಿದ್ದಾರೆ ಎಂದು ಅವನ ಸಹಚರ ಹೇಳಿದಾಗ, ಕ್ಯಾಪ್ಟನ್ ಇದ್ದ ಕೊಠಡಿಗೆ ಹೋದಾಗ, "ಸಂತೋಷ್, ಈಗ ನಾವು ನಮ್ಮ ಮುಖ್ಯ ಗುರಿಯತ್ತ ಹೋಗು ತ್ತಿದ್ದೇವೆ. ಅದಕ್ಕೆ ನಿನ್ನ ಸಹಾಯವಿಲ್ಲದೆ ಸಾಧ್ಯವಿಲ್ಲ. ನಿನ್ನಲ್ಲಿರುವ ಬೈಕ್ ಅದು ನಿನ್ನ ಸ್ನೇಹಿತ ರಫೀಕ್‌ನದ್ದಲ್ಲವೇ?" "ಹೌದು." ಅದರ ದಾಖಲೆ ಪತ್ರದಲ್ಲಿ ಯಾರ ಹೆಸರಿರುವುದು?" ಎಂದು ಕೇಳಿದಾಗ,

"ರಫೀಕ್‌ನದ್ದು" ಎಂದು ಹೇಳಿದ್ದೇ ತಡ, ಕ್ಯಾಪ್ಟನ್‌ನ ಮುಖದಲ್ಲಿ ಗುಳ್ಳೆ ನರಿಯ ನಗು ಮೂಡುತ್ತದೆ. ಸಂತೋಷ್‌ಗೆ ಏನೂ ಅರ್ಥವಾಗದಂತೆ ಕ್ಯಾಪ್ಟನ್‌ನ ಮುಖವನ್ನೇ ನೋಡುತ್ತಾನೆ. ಈಗ ಕ್ಯಾಪ್ಟನ್ ಸಂತೋಷ್‌ನಲ್ಲಿ ಒಂದು ಬ್ಯಾಗನ್ನು ಕೊಟ್ಟು, "ಇದನ್ನು ಮಸೀದಿಯ ಹತ್ತಿರ ಇಟ್ಟು ನಿನ್ನ ಬೈಕನ್ನೂ ಅಲ್ಲೇ ಬಿಟ್ಟು ಬಾ" ಎಂದಾಗ, ಇನ್ನೂ ಗೊಂದಲಕ್ಕೀಡಾದ ಸಂತೋಷ್, "ನನಗೊಂದೂ ಅರ್ಥವಾಗುತ್ತಿಲ್ಲ. ಆ ಬ್ಯಾಗನ್ನು ಮಸೀದಿಯ ಹತ್ತಿರ ಏಕೆ ಇಡಬೇಕು? ಆ ಬ್ಯಾಗ್‌ನಲ್ಲಿರುವುದಾದರೂ ಏನು? ಮತ್ತೆ ನನ್ನ ಬೈಕನ್ನು ಏಕೆ ಅಲ್ಲಿ ಬಿಟ್ಟು ಬರಬೇಕು?" ಎಂದು ಕೇಳಿಯೇ ಬಿಟ್ಟ.

ಬ್ಯಾಗಿನಲ್ಲಿರುವುದು ಬಾಂಬ್ ಎಂದಾಗ ಸಂತೋಷ್ ಬೆಚ್ಚಿ ಬಿದ್ದ.

"ನೀನು ಕೇವಲ ಹೇಳಿದಷ್ಟು ಮಾಡು. ಉಳಿದದ್ದನ್ನು ನಾಳೆಯ ದಿನಪತ್ರಿಕೆಗಳು ಹಾಗೂ ಪೊಲೀಸರು ಮಾಡುತ್ತಾರೆ. ಮುಸ್ಲಿಮ್ ಭಯೋತ್ಪಾದಕರ ಅಟ್ಟಹಾಸಕ್ಕೆ 15 ಮಂದಿಯ ಬಲಿ, ಹಲವರು ಗಂಭೀರ. ಮಸೀದಿಯ ಪಕ್ಕದಲ್ಲೇ ಒಂದು ಬೈಕ್ ಪತ್ತೆ. ಪೊಲೀಸರಿಂದ ಕಾರ್ಯಾಚರಣೆ ನಡೆಯುತ್ತಿದೆ ಎಂಬ ವರದಿಯನ್ನು ಮುಖಪುಟದಲ್ಲಿ ಹೊತ್ತುಕೊಂಡು ನಾಳಿನ ದಿನಪತ್ರಿಕೆಗಳು ಪ್ರತ್ಯಕ್ಷವಾಗುತ್ತದೆ. ಇದಕ್ಕೆ ಹೇಳುವುದು ಒಂದು ಕಲ್ಲಿಗೆ ಎರಡು ಹಕ್ಕಿ. ಜೀವ ಹೋಗುವುದು ಮುಸ್ಲಿಮರದ್ದೇ. ಸಿಕ್ಕಿ ಬೀಳುವುದು ಮುಸ್ಲಿಮರೇ. ಹಾಹಾಹಾ..."

ಕ್ಯಾಪ್ಟನ್‌ನ ಈ ಮಾತಿನಿಂದಾಗಿ ಸಂತೋಷ್‌ನ ಹೃದಯದಲ್ಲಿ ಅಲ್ಲೋಲ ಕಲ್ಲೋಲವುಂಟಾಗುತ್ತದೆ. ಅರೆ! ಇವರ ಈ ಮೋಸದ ಜಾಲದಲ್ಲಿ ನನ್ನ ಪ್ರಾಣ ಸ್ನೇಹಿತನನ್ನು ಸಿಕ್ಕಿಸಲು ನೋಡುತ್ತಿದ್ದಾರೆ. ಇಲ್ಲ, ಇದು ಸಾಧ್ಯವಿಲ್ಲ. ನನ್ನ ಪ್ರಾಣವಿರುವ ವರೆಗೂ ನಾನು ಇದನ್ನು ಒಪ್ಪಲಾರೆ. ಸಂತೋಷ್ ದೃಢಸ್ವರದಲ್ಲಿ, "ಇಲ್ಲ, ಈ ಕೆಲಸವನ್ನು ನಾನು ಮಾಡಲಾರೆ. ಇದು ಮೋಸ. ನಾನು ನಮ್ಮ ಧರ್ಮ ರಕ್ಷಣೆಗಾಗಿ ನನ್ನ ಪ್ರಾಣ ಸ್ನೇಹಿತನನ್ನು ಬಿಟ್ಟು ಬಂದೆ. ಆದರೆ ನೀವು ಧರ್ಮ ರಕ್ಷಣೆ ಎಂದು ಧರ್ಮ ಮುದ್ರಾದ ಹೆಸರಿನಲ್ಲಿ ನನ್ನನ್ನು ಮೋಸ ಮಾಡಿದಿರಿ. ಏನೂ ತಪ್ಪು ಮಾಡದವರನ್ನು ಕೊಲ್ಲಲು ನಮ್ಮ ನಮಗೆ ಕಲಿಸುವುದಿಲ್ಲ. ಇನ್ನು ನಾನು ಒಂದು ಕ್ಷಣವೂ ಇಲ್ಲಿರಲಾರೆ" ಎಂದು ಹೇಳಿ ಹೊರನಡೆದ.

ಸಂತೋಷ್‌ನ ಈ ಮಾತಿನಿಂದ ಅಪಾಯವನ್ನು ಮನಗಂಡ ಕ್ಯಾಪ್ಟನ್ ತನ್ನ ಅನುಚರರನ್ನು ಕರೆದು ಸಂತೋಷ್‌ನ ಕತೆ ಮುಗಿಸಲು ಅಪ್ಪಣೆ ಕೊಡುತ್ತಾನೆ. ಇಲ್ಲಿ ಸಂತೋಷ್ ತನ್ನ ಪಾಪಗಳನ್ನು ತೊಳೆದು ಆದಷ್ಟು ಬೇಗ ರಫೀಕ್‌ನನ್ನು ಭೇಟಿಯಾಗಿ ಅವನ ಕ್ಷಮೆ ಯಾಚಿಸಬೇಕು ಎಂದು ತೀರ್ಮಾನಿಸಿ ತನ್ನ ಬೈಕನ್ನು ವೇಗವಾಗಿ ಚಲಾಯಿಸುತ್ತಾನೆ. ಆದರೆ ದಾರಿ ಮಧ್ಯದಲ್ಲಿ ಸುಮೋ ಹಿಂದಿನಿಂದ ಬಂದು ಸಂತೋಷ್‌ಗೆ ಡಿಕ್ಕಿ ಹೊಡೆದು ಪರಾರಿಯಾಗುತ್ತದೆ. ಯಾವ ಮಸೀದಿಗೆ ಬಾಂಬ್ ಇಡಲು ಹೇಳಲಾಗಿತ್ತೋ ಅದೇ ಮಸೀದಿಗೆ ನಮಾಝ್ ಮಾಡಲೆಂದು ಬಂದ ಇಬ್ಬರು ಯುವಕರು ಈ ದೃಶ್ಯವನ್ನು ಕಂಡು ಆ ಕೂಡಲೇ ರಕ್ತದ ಮಡುವಿನಲ್ಲಿ ಒದ್ದಾಡುತ್ತಿದ್ದ ಸಂತೋಷ್‌ನನ್ನು ಎತ್ತಿ ಆಸ್ಪತ್ರೆಗೆ ದಾಖಲಿಸುತ್ತಾರೆ. ತುರ್ತು ಚಿಕಿತ್ಸಾ ವಿಭಾಗದಲ್ಲಿ ದಾಖಲಾದ ಸಂತೋಷ್‌ನಿಗೆ 4 ಬಾಟಲಿ ರಕ್ತ ಬೇಕು ಎಂದು ತಿಳಿಸಿದಾಗ, ಎರಡು ಬಾಟಲಿ ಅವರೇ ಕೊಟ್ಟು, ಉಳಿದ 2 ಬಾಟಲಿಯನ್ನು ಹೊರಗಡೆ ತಮ್ಮ ಮಿತ್ರರಿಂದ ಕೊಡಿಸಿದರು.

ಅಲ್ಲಿ ಸಂತೋಷ್‌ಗೆ ಪ್ರಜ್ಞೆ ಬಂದಾಗ, ತಾನು ಆಸ್ಪತ್ರೆಯಲ್ಲಿರುವುದನ್ನು ಗಮನಿಸಿ, ಹತ್ತಿರದಲ್ಲೇ ಇದ್ದ ಡಾಕ್ಟರ್‌ನಲ್ಲಿ, "ನನ್ನನ್ನು ಇಲ್ಲಿಗೆ ಯಾರು ಕರೆದುಕೊಂಡು ಬಂದದ್ದು?" ಎಂದು ಕೇಳುತ್ತಾನೆ. "ಇಬ್ಬರು ಯುವಕರು" ಎಂದು ಡಾಕ್ಟರ್ ಹೇಳಿದ ಅದೇ ಸಂದರ್ಭದಲ್ಲಿ ಆ ಯುವಕರು ಆಸ್ಪತ್ರೆಯನ್ನು ಪ್ರವೇಶಿಸುತ್ತಾರೆ ಮತ್ತು ಕಣ್ಣು ತೆರೆದಿದ್ದ ಸಂತೋಷ್‌ನನ್ನು ಭೇಟಿಯಾಗಿ ತಮ್ಮ ಪರಿಚಯವನ್ನು ಮಾಡುತ್ತಾರೆ. ತನ್ನ ಶತ್ರು ಸಮುದಾಯದವರಿಂದಾಗಿ ತನ್ನ ಪ್ರಾಣ ಉಳಿದಿದೆ ಎಂದು ತಿಳಿದಾಗ ಸಂತೋಷ್‌ನಿಗೆ ಆಶ್ಚರ್ಯವಾಗುತ್ತದೆ.

"ನಿಮಗೆ ನನ್ನ ಪರಿಚಯವಿಲ್ಲ ಹಾಗೂ ನನಗೂ ನಿಮ್ಮ ಪರಿಚಯವಿಲ್ಲ. ಅದೂ ಅಲ್ಲದೆ ನಾನೊಬ್ಬ ಹಿಂದೂ ಧರ್ಮದವ ಎಂದು ತಿಳಿದೂ ನೀವು ನನ್ನನ್ನು ಕಾಪಾಡಿದಿರಾ?"

"ಹೌದು! ಮಾನವ ಧರ್ಮ ಮತ್ತು ಮಾನವೀಯತೆ ನಮ್ಮನ್ನು ಈ ಕೆಲಸ ಮಾಡುವಂತೆ ಮಾಡಿತು. ಅದೂ ಅಲ್ಲದೇ ನಮಗೆ ನಮ್ಮ ಧರ್ಮವು ಇದನ್ನೇ ಕಲಿಸುತ್ತದೆ. ಅದಿರಲಿ, ನೀನು ರಕ್ತದ ಮಡುವಿನಲ್ಲಿರುವಾಗ ರಫೀಕ್, ರಫೀಕ್ ಎಂದು ಹೇಳುತ್ತಿದ್ದೆ. ಈ ರಫೀಕ್ ಯಾರು?" ಎಂದು ಕೇಳಿದಾಗ,

"ರಫೀಕ್ ನನ್ನ ಸ್ನೇಹಿತ. ದಯವಿಟ್ಟು ಅವನನ್ನು ಇಲ್ಲಿಗೆ ಕರೆಸುತ್ತೀರಾ?" ಎಂದು ವಿನಂತಿಸಿದಾಗ ಫೋನಿನ ಮೂಲಕ ರಫೀಕ್‌ಗೆ ವಿಷಯ ಮುಟ್ಟಿಸಿ, ಅವರು ಹೊರಟು ಹೋಗುತ್ತಾರೆ.

ಈ ಸುದ್ದಿಯಿಂದ ಆಘಾತಗೊಂಡ ರಫೀಕ್ ಆಸ್ಪತ್ರೆಗೆ ಧಾವಿಸಿ ಬರುತ್ತಾನೆ. ಇಬ್ಬರ ಮುಖಗಳು ಪರಸ್ಪರ ಸಂಧಿಸಿದಾಗ ಇಬ್ಬರೂ ಕಣ್ಣೀರು ಸುರಿಸುತ್ತಾರೆ. "ಇದು ಹೇಗೆ ಸಂಭವಿಸಿತು?" ಎಂದು ಕೇಳಿದಾಗ, ಸಂತೋಷ್ ಎಲ್ಲಾ ವೃತ್ತಾಂತವನ್ನು ವಿವರಿಸುತ್ತಾನೆ. ಅದರ ಜೊತೆಗೆ ರಫೀಕ್‌ನಲ್ಲಿ ಕ್ಷಮೆಯನ್ನು ಕೇಳುತ್ತಾನೆ, "ಒಂದಿಬ್ಬರು ಮಾಡಿದ ತಪ್ಪಿಗಾಗಿ ಹಾಗೂ ನನ್ನವರು ನೀಡಿದ ತಪ್ಪು ಸಂದೇಶಗಳಿಂದಾಗಿ ನಾನು ನಿಮ್ಮ ಇಡಿಯ ಧರ್ಮವನ್ನೇ ದ್ವೇಷಿಸುತ್ತಿದ್ದೆ. ಅಷ್ಟು ಮಾತ್ರವಲ್ಲ, ನಿನ್ನಂತಹ ಪ್ರಾಣ ಸ್ನೇಹಿತ ನನ್ನೂ ಸಂಶಯದ ದೃಷ್ಟಿಯಿಂದ ನೋಡುತ್ತಿದ್ದೆ ರಫೀಕ್. ನನ್ನನ್ನು ಕ್ಷಮಿಸು ಎಂದು ಕೇಳುವ ಯೋಗ್ಯತೆಯೂ ನನಗಿಲ್ಲ. ರಫೀಕ್ ನಿನಗೆ ನನ್ನ ಮೇಲೆ ಸ್ವಲ್ಪವೂ ದ್ವೇಷವಿಲ್ಲವೇ?" "ಅದೆಲ್ಲ ಯಾಕೆ ಈಗ... ಅದನ್ನೆಲ್ಲ ಒಂದು ಕೆಟ್ಟ ಕನಸು ಎಂದು ಬಗೆದು ಮರೆತು ಬಿಡು. ಈ ಆಕ್ಸಿಡೆಂಟ್‌ನಿಂದಲಾದರೂ ನನ್ನ ಸ್ನೇಹಿತ ನನಗೆ ಸಿಕ್ಕಿದನಲ್ಲ. ಅಷ್ಟು ಸಾಕು" ಎಂದು ಹೇಳುವಾಗ ಕಳೆದು ಹೋದ ವಸ್ತು ಮರಳಿ ಸಿಕ್ಕಿದರೆ ಆಗುವಂತಹ ಸಂತೋಷ ರಫೀಕ್‌ನ ಮುಖದಲ್ಲಿ ಎದ್ದು ಕಾಣುತ್ತಿತ್ತು... (ಮುಗಿಯಿತು)



# ನನ್ನ ಸಹೋದರಿ ನನ್ನ ಉತ್ತರಾಧಿಕಾರಿ: ಝರ್ದಾರಿ

**ಲಂಡನ್:** ಪಾಕಿಸ್ತಾನದಲ್ಲಿ ಯಾವ ಕ್ಷಣವೂ ತಾನು ವಧೆಗೀಡಾಗಬಹುದು ಎಂದು ಆಸಿಫ್ ಝರ್ದಾರಿ ಹೆದರುತ್ತಿದ್ದಾರೆಂದು ವಿಕಿಲೀಕ್ಸ್ ದಾಖಲೆಗಳು ಬಹಿರಂಗ ಪಡಿಸಿವೆ. ನಾನು ವಧಿಸಲ್ಪಟ್ಟರೆ ನನ್ನ ಉತ್ತರಾಧಿಕಾರಿಯಾಗಿ ಸಹೋದರಿ ಫರಿಯಾಲ್‌ರನ್ನು ಆಯ್ಕೆ ಮಾಡಬೇಕು. ಎಂಬುದು ಅವರ ಆಸೆ. ಈ ವಿಚಾರವನ್ನು ತನ್ನ ಪುತ್ರ ಬಿಲಾವಲ್‌ಗೆ ಅವರು ಹೇಳಿದ್ದಾರೆ.



ತಾಲಿಬಾನ್‌ನನ್ನು ಗೆಲ್ಲುವುದು ನಮಗೆ ಸಾಧ್ಯವಾಗಿಲ್ಲವೆಂದು ಹೇಳಲು ನನಗೆ ದುಃಖವಾಗುತ್ತಿದೆ ಎಂದು ಝರ್ದಾರಿ ಹೇಳಿರುವುದಾಗಿ ಯು.ಎಸ್. ವಿದೇ ಶಾಂಗ ಖಾತೆಗೆ ಕಳಿಸಿದ ಪತ್ರದಲ್ಲಿ ಬರೆದಿದ್ದಾರೆ. ವಿಕಿಲೀಕ್ಸ್ ಬಹಿರಂಗಗೊಳಿಸಿದ ದಾಖಲೆಗಳ ಇತರ ವಿಚಾರಗಳು ಹೀಗಿವೆ. ಈಗಲೂ ಪಾಕಿಸ್ತಾನದಲ್ಲಿ ಸೇನೆಯಿಂದ ಸರಕಾರದ ಪತನ ನಡೆಯುತ್ತದೆಂದು ಝರ್ದಾರಿ ಹೆದರುತ್ತಿದ್ದಾರೆ. ಸೇನಾ ಮುಖ್ಯಸ್ಥ ಅಸ್ಫಾಕ್ ಕಿಯಾನಿ ತನ್ನನ್ನು ವಜಾಗೊಳಿಸಿ ಅಧಿಕಾರ ಕಸಿದುಕೊಂಡರೆ ತನ್ನ ಕುಟುಂಬಕ್ಕೆ ರಕ್ಷಣೆ ನೀಡಬೇಕೆಂದು ಯು.ಎ.ಇ.ಯೊಂದಿಗೆ ಝರ್ದಾರಿ ವಿನಂತಿಸಿದ್ದಾರೆ. ಪಾಕಿಸ್ತಾನದಲ್ಲಿ ವ್ಯೋಮಾಕ್ರಮಣ ನಡೆಸುವುದಕ್ಕೆ ಪ್ರಧಾನಿ ಯೂಸುಫ್ ಗೀಲಾನಿ ಅಮೇರಿಕಾಕ್ಕೆ ರಹಸ್ಯ ಅನುಮತಿ ನೀಡಿದರು. ಮುಂಬೈ ಭಯೋತ್ಪಾದನಾ ಆಕ್ರಮಣದ ನಂತರ ಭಾರತ ಸೇನಾಕ್ರಮಣಕ್ಕಿಳಿಯಬಹುದೆಂದು ಪಾಕಿಸ್ತಾನ ಹೆದರುತ್ತಿದೆ. ಹಾಗೇನಾದರೂ ನಡೆದರೆ ಪ್ರತಿ ದಾಳಿ ನಡೆಸುವುದು ಅನಿವಾರ್ಯವೆಂದು ಝರ್ದಾರಿ ಅಮೇರಿಕಾಕ್ಕೆ ತಿಳಿಸಿದ್ದಾರೆ. ಭಾರತ–ಅಮೇರಿಕಾದ ನಡುವಿನ ಅಣು ಒಪ್ಪಂದವನ್ನು ಜಾಗತಿಕ ವೇದಿಕೆಗಳಲ್ಲಿ ವಿರೋಧಿಸುವುದಿಲ್ಲವೆಂದು ಪಾಕಿಸ್ತಾನ ಅಮೇರಿಕಾಕ್ಕೆ ಭರವಸೆ ಕೊಟ್ಟಿದೆ. ಮುಂಬೈ ಆಕ್ರಮಣದ ಬಳಿಕ ಲಷ್ಕರೇ ತ್ವೈಬಾ ಮತ್ತು ಜಮಾಅತುದ್ದವಾಗಳಿಗೆ ತಮ್ಮ ಬ್ಯಾಂಕ್ ಬ್ಯಾಲೆನ್ಸನ್ನು ಹಿಂಪಡೆದುಕೊಳ್ಳಲು ಸಾಧ್ಯವಾಯಿತು. ಇದಕ್ಕೆ ಪಾಕ್ ಪ್ರತಿಪಕ್ಷ ನಾಯಕ ನವಾಝ್ ಶರೀಫ್‌ರ ಸಹೋದರನೂ ಪಂಜಾಬ್ ಪ್ರಾಂತ್ಯದ ಮುಖ್ಯಮಂತ್ರಿಯೂ ಆದ ಶಹ್‌ಬಾಝ್ ಶರೀಫ್ ನೆರವಾದರು. ಲಷ್ಕರ್ ಬಗ್ಗೆ ಶರೀಫರ ಮೃದುಧೋರಣೆಯನ್ನು ಝರ್ದಾರಿ ವಿರೋಧಿಸುತ್ತಿದ್ದಾರೆ.

ಮುಂಬೈ ಭಯೋತ್ಪಾದನಾ ದಾಳಿಯ ಬಳಿಕ ಭಾರತದ ಪ್ರತಿಭಟನೆಯ ತೀವ್ರತೆ ಕಡಿಮೆಗೊಳಿಸುವುದಕ್ಕೆ ಐ.ಎಸ್.ಐ. ಮುಖ್ಯಸ್ಥನನ್ನು ಭಾರತಕ್ಕೆ ಕಳಿಸಲು ಝರ್ದಾರಿ ತೀರ್ಮಾನಿಸಿದರೂ ಸೇನೆಯ ವಿರೋಧದಿಂದಾಗಿ ಅದನ್ನು ಕೈ ಬಿಡಬೇಕಾಯಿತು. ಇವೆಲ್ಲವೂ ವಿಕಿಲೀಕ್ಸ್‌ನ ವಿವರಗಳಾಗಿವೆ.

## ಟೀಪಾರ್ಟಿ ಹಾಗೂ ಇಂಗ್ಲಿಷ್ ಡಿಫೆನ್ಸ್ ಲೀಗ್

ಅಮೇರಿಕದ ಪಾರ್ಲಿಮೆಂಟಿಗೆ ಇತ್ತೀಚೆಗೆ ನಡೆದ ಮಧ್ಯಂತರ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷ ಪ್ರಚಂಡ ವಿಜಯ ಸಾಧಿಸಿತ್ತು. ಇದರಲ್ಲಿ ರಿಪಬ್ಲಿಕನ್ ಪಕ್ಷದ ನೂತನ ವಿಭಾಗವಾದ 'ಟೀ ಪಾರ್ಟಿ' ಸಂಘಟನೆಯ ವಕ್ತಾರರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಗೊಂಡಿದ್ದರು. ಇವರು ಮುಸ್ಲಿಮರ ಬದ್ಧ ಶತ್ರುಗಳಾಗಿದ್ದಾರೆ. ಅಮೇರಿಕದ ಗ್ರೌಂಡ್ ಝೀರೋವಿನ ಸಮೀಪ ಇಸ್ಲಾಮಿಕ್ ಸಾಂಸ್ಕೃತಿಕ ಕೇಂದ್ರದ ನಿರ್ಮಾಣದ ವಿರುದ್ಧದ ಕಾರ್ಯಕ್ರಮಗಳಿಗೆ ನೇತೃತ್ವ ವಹಿಸಿರುವುದು ಕೂಡಾ ಈ 'ಟೀ ಪಾರ್ಟಿ' ಪಕ್ಷದ ಕಾರ್ಯಕರ್ತ ಪಾಮಿಲಿ ಜೆಲ್ಲರ್. ಈ ಪಾಮಿಲಿ ಜೆಲ್ಲರ್ 'ಅಮೇರಿಕವನ್ನು ಇಸ್ಲಾಮೀಕರಣಗೊಳಿಸುವುದನ್ನು ತಡೆಯಿರಿ' ಎಂಬ ಹೆಸರಿನ ಒಕ್ಕೂಟದ ನಿರ್ದೇಶಕರಾಗಿದ್ದಾರೆ.

ಇಂತಹದೇ ಘೋಷವಾಕ್ಯವನ್ನು ಮೊಳಗಿಸುತ್ತಾ ಬ್ರಿಟನ್‌ನಲ್ಲಿ ಕಾರ್ಯಾಚರಿಸುತ್ತಿರುವ ಇಸ್ಲಾಮ್ ವಿರೋಧಿ ಒಕ್ಕೂಟವಾಗಿದೆ ಡಿಫೆನ್ಸ್ ಲೀಗ್. ಪಾಮಿಲಿ ಜೆಲ್ಲರ್‌ಗೆ ಡಿಫೆನ್ಸ್ ಲೀಗ್ ಜೊತೆ ಸಂಬಂಧವಿದೆಯೆಂದೂ ಅಮೇರಿಕ ಹಾಗೂ ಬ್ರಿಟನ್‌ನಲ್ಲಿ ಇಸ್ಲಾಮೋಫೋಬಿಯಾ ಬೆಳೆಸಲು ಈ ಇಸ್ಲಾಮ್ ವಿರೋಧಿಗಳು ಒಂದುಗೂಡಿದ್ದಾರೆಂದೂ ಲಂಡನ್‌ನಿಂದ ಹೊರಡುವ ಪತ್ರಿಕೆ ಒಬ್ಸರ್ವರ್ ಇತ್ತೀಚೆಗೆ ವರದಿ ಮಾಡಿದೆ. ಅಮೇರಿಕದಲ್ಲಿ ಶರೀಅತ್‌ನ ವಿರುದ್ಧ ರಂಗಕ್ಕಿಳಿದಿದ್ದ ಇಂಟರ್‌ನ್ಯಾಶನಲ್ ಸಿವಿಲ್ ಲಿಬರ್ಟೀಸ್ ಅಲಯನ್ಸ್ (ಟೀಪಾರ್ಟಿ ಜೊತೆ ಉತ್ತಮ ಸಂಬಂಧವಿರುವ) ನಮಗೆ ಡಿಫೆನ್ಸ್ ಲೀಗ್ ಜೊತೆ ಉತ್ತಮ ಸಂಬಂಧವಿದೆ ಎಂದು ಬಹಿರಂಗವಾಗಿ ಒಪ್ಪಿಕೊಂಡಿದೆ. ಡಿಫೆನ್ಸ್ ಲೀಗ್‌ನ ವೆಬ್‌ಸೈಟ್‌ನಲ್ಲಿ ಜೆಲ್ಲರ್ ನಡೆಸುತ್ತಿರುವ ಅತ್ಲಾಸ್ ಷರ್‌ಡಗ್ ಎಂಬ ಸೈಟ್‌ಗೆ ಇಸ್ಲಾಮ್ ವಿರುದ್ಧ ಲಾಬಿಗಾಗಿಯೇ ನಿರ್ಮಿಸಲಾದ 'ಜಿಹಾದ್ ವಾಚ್' ಕಾರ್ಯಕ್ರಮದ ಜೊತೆ ಸಂಬಂಧವಿರುವುದು ಕಂಡುಬರುತ್ತದೆ.

'ಟೀಪಾರ್ಟಿ' ಎಂಬ ಹೆಸರಿನ ಹೊಸ ಮೂಲಭೂತವಾದಿ ವಿಭಾಗಗಳಿಗೆ ಧಾರಾಳ ಹಣ ಹರಿದು ಬರುತ್ತಿದೆ. ಈ ಹಣದ ಬಲದಿಂದಲೇ ಟೀ ಪಾರ್ಟಿಯು ಹೆಚ್ಚಿನ ಸ್ಥಾನ ಗಳಿಸಿಕೊಂಡಿರುವುದಾಗಿದೆ. ಈ ಹಣವು ಡಿಫೆನ್ಸ್ ಲೀಗ್ ಮುಂತಾದ ಇಸ್ಲಾಮ್ ವಿರುದ್ಧ ಒಕ್ಕೂಟಗಳಿಗೆ ಹಂಚಲಾಗುತ್ತಿದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಇಸ್ಲಾಮ್ ವಿರೋಧಿಗಳನ್ನು ಒಗ್ಗೂಡಿಸಿ ಬಲಪಡಿಸುವುದು ಇದರ ಹಿಂದೆ ಇರುವ ಪ್ರಮುಖ ಅಜೆಂಡಾ ಎಂದೂ ಒಬ್ಸರ್ವರ್ ವರದಿ ಮಾಡಿದೆ.

## ಫೇಸ್‌ಬುಕ್ ಅಪರಾಧಿ

**ವಾಷಿಂಗ್ಟನ್:** ಕಡಿದು ಹೋದ ಸಂಬಂಧಗಳನ್ನು ಮರಳಿ ಒಂದುಗೂಡಿಸುವ ಸಾಮಾಜಿಕ ನೆಟ್‌ವರ್ಕ್ ಎಂದೇ ಹೆಸರುವಾಸಿಯಾದ ಫೇಸ್‌ಬುಕ್ ಮತ್ತು ಟ್ವಿಟ್ಟರ್‌ಗಳು ದಾಂಪತ್ಯ ಸಂಬಂಧಗಳಲ್ಲಿ ವಿಲನ್ ಆಗುತ್ತಿದೆಯೆಂದು ವರದಿಯಾಗಿದೆ. ಅಮೇರಿಕಾದಲ್ಲಿ ನಡೆಯುತ್ತಿರುವ ಪ್ರತಿ 5 ವಿಚ್ಛೇದನಗಳಲ್ಲಿ ಒಂದಾದರೂ ಈ ಸೋಶಿಯಲ್ ನೆಟ್‌ವರ್ಕ್‌ನೊಂದಿಗೆ ಸಂಬಂಧ ಹೊಂದಿರುವುದು ಕಂಡುಬಂದಿದೆಯೆಂದು ಅಮೇರಿಕನ್ ಅಕಾಡೆಮಿ ಆಫ್ ಮ್ಯಾಟ್ರಿಮೋನಿಯಲ್ಸ್‌ನ ಸಮೀಕ್ಷೆಯಲ್ಲಿ ವರದಿಯಾಗಿದೆ. ದಾಂಪತ್ಯೇತರ ಸಂಬಂಧಗಳಿಗಾಗಿ ಇವುಗಳನ್ನು ಬಳಸಲಾಗುತ್ತಿದ್ದು ವಿವಾಹ ವಿಚ್ಛೇದನ ಪ್ರಕರಣಗಳಿಗೆ ಇವೇ ಪ್ರಮುಖ ಕಾರಣವಾಗುತ್ತಿವೆ. ಅಂದರೆ ಫೇಸ್‌ಬುಕ್ ಇದರಲ್ಲಿ ಮೊದಲ ಅಪರಾಧಿಯಾಗಿದೆ. ಮೈ ಸ್ಪೈಸಿಗೆ ಎರಡನೆ ಸ್ಥಾನವಾದರೆ ಅದರ ಬೆನ್ನಲ್ಲಿ ಟ್ವಿಟರ್‌ಗಳಿವೆ ಎಂದು ಸಮೀಕ್ಷೆ ಬಹಿರಂಗ ಪಡಿಸಿದೆ.




ಭೂಮಿಯಲ್ಲಿರುವುದನ್ನೆಲ್ಲ ನಿಮಗಾಗಿಯೇ ಸೃಷ್ಟಿಸಿದವನು ಆತನೇ. ಬಳಿಕ ಗಗನದೆಡೆ ಗಮನ ಹರಿಸಿ ಸಪ್ತ ಗಗನಗಳಿಗೆ ರೂಪುಕೊಟ್ಟನು. ಆತನು ಸಕಲ ವಿಷಯಗಳ ಜ್ಞಾನಿಯಾಗಿರುತ್ತಾನೆ.
(ಕುರ್‌ಆನ್ 2:29)

*Managing Partner*

**RAJA BRICKS & TILE INDUSTRIES**

*P.B. No. 34, Rajanagar, Sira Road,*
*Tumkur - 572 101. Karnataka, India*
*Ph: 0816 - 6531933/44/55, Fax: 0816 - 2211633*

## ಅಸಾಂಜ್ ತಾಯಿಗೆ ಆತಂಕ

**ಸಿಡ್ನಿ:** ಜೂಲಿಯನ್ ಅಸಾಂಜ್‌ರ ವಿರುದ್ಧ ಇಂಟರ್‌ಪೋಲ್ ರೆಡ್ ಕಾರ್ನರ್ ನೋಟಿಸ್ ಹೊರಡಿಸಿರುವ ಬಗ್ಗೆ ತಾನು ಆತಂಕಗೊಂಡಿದ್ದೇನೆಂದು ಅವರ ತಾಯಿ ಕ್ರಿಸ್ಟಿನ್ ಅಸಾಂಜ್ ಹೇಳಿದ್ದಾರೆ. ಸದ್ಯ ಆಸ್ಟ್ರೇಲಿಯದಲ್ಲಿ ವಾಸಿಸುತ್ತಿರುವ ಈ ಮಹಿಳೆ ಎಲ್ಲ ತಾಯಿಯರಂತೆ ನಾನು ಕೂಡಾ ಆತಂಕ ಗೊಂಡಿದ್ದೇನೆಂದು ಹೇಳಿದ್ದಾರೆ. ಅಸಾಂಜ್‌ರನ್ನು ಬಂಧಿಸುವ ಕುರಿತು ಅಮೇರಿಕ ಮತ್ತು ಆಸ್ಟ್ರೇಲಿಯಾದ ಜೊತೆ ಯಾವ ಚರ್ಚೆಯನ್ನೂ ನಡೆಸಿಲ್ಲವೆಂದು ಅಮೇರಿಕಾದ ರಾಯಬಾರಿ ಜೆಫ್ ಬ್ಲೀಚ್ ಹೇಳಿದ್ದಾರೆ. ಜೂಲಿಯನ್ ಅಸಾಂಜ್ ವಿಕಿಲೀಕ್ಸ್ ವೆಬ್‌ಸೈಟ್‌ನ ಮುಖ್ಯ ಸಂಪಾದಕರಾಗಿದ್ದಾರೆ.

ನೀವು ಸನ್ಮಾರ್ಗವನ್ನು ಮೆಚ್ಚಿದರೆ ಇತರರಿಗೂ ತಿಳಿಸಿ,
ಮೆಚ್ಚದಿದ್ದರೆ ನಮಗೆ ತಿಳಿಸಿ.

## ಇಸ್ರೇಲ್‌ನ ವಾದವನ್ನು ತಿರಸ್ಕರಿಸಿದ ಯುನೆಸ್ಕೋ




**ಜೆರುಸಲೇಮ್:** ಬೆತ್ಲಹೇಮ್‌ನಲ್ಲಿರುವ ಬಿಲಾಲ್ ಬಿನ್ ರಬಾಹ್ ಮಸೀದಿ ಹಾಗೂ ಖಲೀಲ್ ಇಬ್ರಾಹೀಮ್ ಮಸೀದಿಗೆ ಯಹೂದಿ ಸಂತತಿಗಳೊಂದಿಗೆ ಯಾವುದೇ ಸಂಬಂಧವಿಲ್ಲವೆಂದು ಯುನೆಸ್ಕೋ ತಿಳಿಸಿದೆ. ಯುನೆಸ್ಕೋ, ವಿಶ್ವ ಸಂಸ್ಥೆಯ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ವಿಭಾಗದ ಕೇಂದ್ರವಾಗಿದೆ. ಈ ಎರಡೂ ಮಸೀದಿಗಳು ಯಹೂದಿ ತಲೆಮಾರಿನ ಸ್ಮಾರಕಗಳು ಎಂಬ ಇಸ್ರೇಲ್‌ನ ವಾದವನ್ನು ತಳ್ಳಿಹಾಕುತ್ತಾ ಅದನ್ನು ಯಹೂದಿಗಳ ಪಟ್ಟಿಯಿಂದ ತೆಗೆದು ಹಾಕಲು ಆಗ್ರಹಿಸಿದೆ. ಫೆಲೆಸ್ತೀನಿನ ಇತಿಹಾಸದ ಸ್ಮಾರಕಗಳಿರುವ ಪ್ರದೇಶಗಳಲ್ಲಿ ನಡೆಸುವ ಉತ್ಖನನವು ಅಂತಾರಾಷ್ಟ್ರೀಯ ಕಾನೂನುಗಳಿಗೆ ಅತೀತವಾದುದೆಂದೂ ಈ ಕುರಿತು ತನಿಖೆ ನಡೆಸಲು ಒಂದು ತಜ್ಞರ ತಂಡವನ್ನು ನಿಯೋಗಿಸಲಾಗುವುದೆಂದು ಯುನೆಸ್ಕೋ ಅಭಿಪ್ರಾಯ ಪಟ್ಟಿದೆ.

ಆದರೆ ಇಸ್ರೇಲ್ ಪ್ರಧಾನಿ ನೆತನ್ಯಾಹು ಯುನೆಸ್ಕೋ ವರದಿಯನ್ನು ತೀವ್ರವಾಗಿ ಖಂಡಿಸಿದ್ದಾರೆ. ಕಳೆದ ಫೆಬ್ರವರಿಯಲ್ಲಿ ಇಬ್ರಾಹೀಮ್ ಮತ್ತು ಬಿಲಾಲ್ ಮಸೀದಿಗಳನ್ನು ಇಸ್ರೇಲ್ ತನ್ನ ಯಹೂದಿ ತಲೆಮಾರಿನ ಸ್ಮಾರಕಗಳ ಸಾಲಿಗೆ ಸೇರಿಸಿತ್ತು. ಇದರ ವಿರುದ್ಧ ಜಗತ್ತಿನಾದ್ಯಂತ ಪ್ರತಿಭಟನೆಯ ಅಲೆ ಎದ್ದಿತ್ತು.

## ಈಜಿಪ್ಟ್: ಮುಬಾರಕ್‌ಗೆ ಮುನ್ನಡೆ



**ಈಜಿಪ್ಟ್:** ಇಲ್ಲಿನ ಪಾರ್ಲಿಮೆಂಟಿಗೆ ನಡೆದ ಪ್ರಥಮ ಹಂತದ ಚುನಾವಣೆಯಲ್ಲಿ ಅಧ್ಯಕ್ಷ ಹುಸ್ನಿ ಮುಬಾರಕ್‌ರ ನ್ಯಾಶನಲ್ ಡೆಮಾಕ್ರೆಟಿಕ್ ಪಕ್ಷವು ಬೃಹತ್ ಮುನ್ನಡೆ ಸಾಧಿಸಿದೆ. 221 ಸ್ಥಾನಗಳಲಿ 209 ಸ್ಥಾನಗಳನ್ನು ಅದು ಪಡೆದುಕೊಂಡಿದೆ. ಇಲ್ಲಿನ ಪಾರ್ಲಿಮೆಂಟಿನಲ್ಲಿ ಒಟ್ಟು 508 ಸ್ಥಾನಗಳಿವೆ. ಮುಸ್ಲಿಮ್ ಬ್ರದರ್‌ಹುಡ್‌ಗೆ ಒಂದು ಸ್ಥಾನವೂ ಲಭಿಸಿಲ್ಲ. ಚುನಾವಣೆಯಲ್ಲಿ ವ್ಯಾಪಕ ಅಕ್ರಮಗಳು ನಡೆದಿವೆ ಎಂಬ ಆರೋಪ ಕೇಳಿ ಬಂದಿತ್ತು. ಆದರೆ ಇದನ್ನು ಚುನಾವಣಾ ಆಯೋಗ ನಿರಾಕರಿಸಿತ್ತು. ಅಮೇರಿಕಾ ಸಹಿತ ವಿವಿಧ ರಾಷ್ಟ್ರಗಳು ಚುನಾವಣೆ ನಡೆಸಿದ ಕ್ರಮವನ್ನೂ ಟೀಕಿಸಿವೆ.

## ಬ್ರಿಟನ್: ಮುಹಮ್ಮದ್ ಅತಿ ಹೆಚ್ಚು ಚಾಲ್ತಿಯಲ್ಲಿರುವ ಹೆಸರು

ಇಂಗ್ಲೇಂಡಿನಲ್ಲಿ ಅತೀ ಹೆಚ್ಚು ಚಾಲ್ತಿಯಲ್ಲಿರುವ ಹೆಸರು ಮುಹಮ್ಮದ್ ಆಗಿದೆಯೆಂದು ‘ಡೈಲಿ ಮೇಲ್’ ಪತ್ರಿಕೆ ಬಹಿರಂಗಪಡಿಸಿದೆ. ಜಾಕ್ ಹಾಗೂ ಹ್ಯಾರಿ ಎಂಬ ಹೆಸರುಗಳನ್ನು ಹಿಂದೆಕ್ಕೆ ತಳ್ಳಿ ಮುಹಮ್ಮದ್ ಎಂಬ ಹೆಸರು ಪ್ರಥಮ ಸ್ಥಾನ ಪಡೆದಿದೆ. 2008ರ ತನಕ ಜಾಕ್ ಎಂಬ ಹೆಸರು ಪ್ರಥಮ ಸ್ಥಾನದಲ್ಲಿತ್ತು. 2009ರ ಅಂಕಿ ಅಂಶದಂತೆ 7543 ಮಕ್ಕಳಿಗೆ ಬ್ರಿಟನ್‌ನಲ್ಲಿ ಮುಹಮ್ಮದ್ ಎಂಬ ಹೆಸರನ್ನಿಡಲಾಗಿದೆ. ಇಂಗ್ಲೀಷ್‌ನಲ್ಲಿ ಬರೆಯುವಾಗ 12 ವಿವಿಧ ಶೈಲಿಯಲ್ಲಿ ಇದು ಕಂಡುಬರುತ್ತದೆ.

ಉದಾ: 1. MUHAMMAD 2. MOHAMMAD 3. MUHAMAD. ಆದರೆ ಗಣನೆಗೆ ತೆಗೆದುಕೊಳ್ಳುವಾಗ ಇವೆಲ್ಲವನ್ನೂ ಒಂದಾಗಿ ಪರಿಗಣಿಸಲಾಗಿದೆ.

## ಸನ್ಮಾರ್ಗ 25 ವರ್ಷಗಳ ಹಿಂದೆ

❖ ಸಂಪುಟ: 8 ❖ ಸಂಚಿಕೆ: 39 ❖ 1985, ಜನವರಿ 12 – 18

### ಪ್ರಾದೇಶಿಕ ಪಕ್ಷಗಳ ರಾಷ್ಟ್ರೀಯ ಒಕ್ಕೂಟ

‘ಭಾರತ ದೇಶಂ’ ಕಟ್ಟಿ ತಮ್ಮ ವಿಜಯ ರಥವನ್ನು ದೆಹಲಿ ಬೀದಿಗಳಲ್ಲಿ ಓಡಿಸುವ ಸ್ವಪ್ನ ಕಂಡಿದ್ದ ಎನ್.ಟಿ.ಆರ್. ಈಗ ತಮ್ಮ ‘ತೆಲುಗು ದೇಶಂ’ನಲ್ಲಿ ಮಾತ್ರ ಸಂತೃಪ್ತರಾಗಿ ಇಂಥ ಪ್ರಾದೇಶಿಕ ಪಕ್ಷಗಳ ರಾಷ್ಟ್ರೀಯ ಒಕ್ಕೂಟ ರಚನೆಯ ಮಾತನಾಡಿರುವುದು ಸಮಯೋಚಿತವೆನಿಸುತ್ತದೆ. ಬಿ.ಜೆ.ಪಿ. ನಾಯಕ ಅಟಲ್ ಬಿಹಾರಿ ವಾಜಪೇಯಿ ಹೇಳಿದಂತೆ ಇದು ಪ್ರಾದೇಶಿಕ ಸಂಕುಚಿತತೆಗೆ ಕಡಿವಾಣ ಹಾಕುವ ಮತ್ತು ಅವರಲ್ಲಿ ರಾಷ್ಟ್ರೀಯ ಮನೋವೃತ್ತಿ ಜಾಗೃತಗೊಳಿಸುವಲ್ಲಿ ಸಫಲವಾದರೆ ಖಂಡಿತ ಅಂತಃ ಕಲಹ ಮತ್ತು ಭ್ರಷ್ಟಾಚಾರದಿಂದ ತುಂಬಿ ತುಳುಕುವ ಕಾಂಗ್ರೆ ಪಕ್ಷಕ್ಕೆ ಸಮರ್ಥ ಪರ್ಯಾಯವಾಗಬಹುದು ಎಂಬುದರಲ್ಲಿ ಸಂದೇಹವಿಲ್ಲ.

ಭಷ್ಟಾಚಾರ, ಸ್ವಜನ ಪಕ್ಷಪಾತ ಮತ್ತು ಧಾರ್ಮಿಕ ಸಾಂಸ್ಕೃತಿಕ, ಭಾಷೀಯ ಸಂಕುಚಿತತೆಗಳಿಂದ ಮುಕ್ತವಾದ ಒಂದು ಪಕ್ಷವನ್ನು ಅದು ಒಕ್ಕೂಟವಾಗಿರಲಿ ಒಂದೇ ಪಕ್ಷವಾಗಿರಲಿ ಈ ದೇಶದ ಜನರು ಪೂರ್ಣವಾಗಿ ಬೆಂಬಲಿಸುತ್ತಾರೆಂಬುದೂ ಸರ್ವಾಧಿಕಾರೀ ಪ್ರವೃತ್ತಿಯ ಜನತಂತ್ರ ವಿರೋಧೀ ನೀತಿಗಳಿಗೆ ಅದು ಮನ್ನಣೆ ನೀಡುವುದಿಲ್ಲವೆಂಬುದು ಒಂದು ಐತಿಹಾಸಿಕ ಸತ್ಯ. ‘ಜೆ.ಪಿ.’ಯವರ ನನಸಾಗದ ಜನಸು ‘ಜನತಾ’ ಈಗ ಅದರ ಅಕ್ಷರಗಳಿಗಿಂತಲೂ ಹೆಚ್ಚು ಹೋಳಾಗಿರುವ ಹಿನ್ನೆಲೆಯಲ್ಲಿ ಪ್ರಾದೇಶಿಕ ಪಕ್ಷಗಳ ರಾಷ್ಟ್ರೀಯ ಒಕ್ಕೂಟ ದೇಶದ ಜನತಂತ್ರದ ಉಳಿವಿಗೆ ಒಂದು ಶುಭಲಕ್ಷಣವೆನ್ನಲಡ್ಡಿಯಿಲ್ಲ. (ಮುಖಪುಟದಿಂದ)

## ಸಂತಾಪ ಸೂಚಕ ಸಭೆ

● ಸಿಂಧನೂರು: ಡಿ. 4ರಂದು ಮರ್ಹೂಮ್ ಹಾಮಿದ್ ಹುಸೇನ್‌ರವರಿಗೆ ಇಲ್ಲಿ ಸಂತಾಪ ಸಭೆಯನ್ನು ಏರ್ಪಡಿಸಲಾಗಿತ್ತು. ಹಾಮಿದ್ ಹುಸೇನ್‌ರ ಜೀವನವು ತುಂಬಾ ಸರಳವಾಗಿತ್ತು. ಆಂದೋಲನಕ್ಕಾಗಿ ಎಲ್ಲವನ್ನೂ ಧಾರೆಯೆರೆದ ತ್ಯಾಗ ಜೀವಿ. ಅದಕ್ಕಾಗಿ ಸಕಲ ಕಷ್ಟ-ಕಾರ್ಪಣ್ಯಗಳನ್ನು ಸಹಿಸಿದರು. ಅತ್ಯುತ್ತಮ ಸಲಹೆಗಾರ. ಅವರು ತಮ್ಮ ಮೃದುವಾದ ಮಾತು, ಸೂಕ್ಷ್ಮ ದೃಷ್ಟಿಯ ಮೂಲಕ ಸದಾ ಕಾರ್ಯಕರ್ತರಿಗೆ ಹುಮ್ಮಸ್ಸು ನೀಡುತ್ತಿದ್ದರು. ಯುವಕರಲ್ಲಿರುವ ಪ್ರತಿಭೆಯನ್ನು ಗುರುತಿಸಿ ಅದನ್ನು ಇಸ್ಲಾಮಿ ಆಂದೋಲನಕ್ಕೆ ಅಣಿಗೊಳಿಸಿದರು. ಮನೆಯ ಕಡೆಗೆ ಗಮನ ಕೊಡುತ್ತಲೇ ಆಂದೋಲನದ ಕೆಲಸವನ್ನು ಅತ್ಯುತ್ತಮವಾಗಿ ನಿರ್ವಹಿಸಿದ ಕರ್ಮಯೋಗಿ. ಇಂತಹ ವ್ಯಕ್ತಿ ವಿರಳ. ಮೃದು ಸ್ವಭಾವ, ಸಹನೆಯುಳ್ಳ ವ್ಯಕ್ತಿ ಯುವಕರೊಂದಿಗೆ ಬೆರೆತು ಕಾರ್ಯ ನಿರ್ವಹಿಸುತ್ತಿದ್ದರು ಮುಂತಾದ ವಿವಿಧ ಅಭಿಪ್ರಾಯಗಳು ವ್ಯಕ್ತವಾದುವು. ಅಬ್ದುಲ್ಲಾ ಜಾವೀದ್, ರಫೀಕ್ ಅಹ್ಮದ್, ಅತ್ಹರುಲ್ಲಾ ಶರೀಫ್, ಶಮಿೂಮುದ್ದೀನ್ ಹೈದರ್, ಲಾಲ್ ಹುಸೈನ್ ಕಂದಗಲ್, ಅಬ್ದುಲ್ ರಶೀದ್ ಖಾಸಿಮಿ, ಬಾಬರ್ ಪಾಶಾ ಹಾಗೂ ಜಮಾಅತ್ ಬಂಧುಗಳು, ಎಸ್.ಐ.ಓ. ಕಾರ್ಯಕರ್ತರು ಪಾಲ್ಗೊಂಡಿದ್ದರು.

● ಮಂಗಳೂರು: "ಸೈಯದ್ ಹಾಮಿದ್ ಹುಸೈನ್‌ರೊಂದಿಗಿನ ನಲವತ್ತು ವರ್ಷಗಳ ಕಾಲದ ಒಡನಾಟದಲ್ಲಿ ನಾನು ಕಂಡುಕೊಂಡಂತೆ ಅವರು ಇಸ್ಲಾಮಿ ಆಂದೋಲನಕ್ಕೆ ಸರ್ವವನ್ನು ಮುಡಿಪಾಗಿಟ್ಟ ರೀತಿ, ಸರಳತೆ, ಸಜ್ಜನಿಕೆ, ಸಂಘಟನಾ ಚತುರತೆ ಎಲ್ಲವೂ ಆಂದೋಲನಾ ಬಾಂಧವರಿಗೆ ಆದರ್ಶಪ್ರಾಯವಾದುದು. ಅವರು ತಾನು ಮಾತ್ರವಲ್ಲ, ಕುಟುಂಬವನ್ನೂ ಆಂದೋಲನದ ತಳಹದಿಯಲ್ಲಿಯೇ ಬೆಳೆಸಿದರು" ಎಂದು ಜಮಾಅತೆ ಇಸ್ಲಾಮಿ ಹಿಂದ್ ರಾಜ್ಯ ಸಲಹಾ ಸಮಿತಿ ಸದಸ್ಯ ಕೆ.ಎಂ. ಶರೀಫ್ ಹೇಳಿದರು. ಅವರು ಇಲ್ಲಿನ ಹಿದಾಯತ್ ಸೆಂಟರ್‌ನಲ್ಲಿ ಡಿ. 5ರಂದು ನಡೆದ ಮರ್ಹೂಮ್ ಹಾಮಿದ್ ಹುಸೇನ್‌ರ ಸಂತಾಪ ಸೂಚಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ವಲಯ ಸಂಚಾಲಕ ಯು. ಅಬ್ದುಸ್ಸಲಾಮ್‌ರವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, "ಪ್ರಸಕ್ತ ಮಿೂಕಾತಿನ ಆರಂಭದಲ್ಲಿ ಇಬ್ರಾಹೀಮ್ ಸಈದ್‌ರನ್ನು ಕಳಕೊಂಡ ಆಘಾತದಲ್ಲಿದ್ದ ಆಂದೋಲನಕ್ಕೆ ಸೈಯದ್ ಹಾಮಿದ್ ಹುಸೇನ್‌ರ ನಿಧನ ಇನ್ನೊಂದು ಆಘಾತಕಾರಿ ಸಂಗತಿ. ಕರ್ನಾಟಕದ ಆಂದೋಲನದ ಪಾಲಿಗೆ ಇದು ದುಃಖದ ಮಿೂಕಾತ್" ಎಂದರು.

ಮಹಿಳಾ ವಿಭಾಗದ ದ.ಕ. ಸಂಚಾಲಕಿ ಶಮಿೂರಾ ಜಹಾನ್ ಮಾತನಾಡುತ್ತಾ, "ಸರಳತೆಯಿಂದ ಕೂಡಿದ ಅವರ ಜೀವನ ಸಹಾಬಿಗಳ ಜೀವನವನ್ನು ನೆನಪಿಸುವಂತಿತ್ತು" ಎಂದು ಹೇಳಿದರು.

ಕೆ.ಎಂ. ಅಶ್ರಫ್, ಅಮಿೂನ್ ಅಹ್ಸನ್, ಇಸ್ಹಾಕ್ ಪುತ್ತೂರು ಮುಂತಾದವರು ಸೈಯದ್ ಹಾಮಿದ್ ಹುಸೈನ್‌ರ ಮಾದರೀ ಜೀವನವನ್ನು ಸ್ಮರಿಸಿದರು. ಆರಂಭದಲ್ಲಿ ಹೆಚ್.ಪಿ. ಅಬ್ದುಲ್ ಹಮಿೂದ್ ಕುರ್‌ಆನ್ ಪಠಿಸಿದರು.

## ಸಾರ್ವಜನಿಕ ಸಭೆ



**ಕಸ್ಬಾ ಬೆಂಗ್ರೆ:** "ಎಲ್ಲಾ ವಿಚಾರಗಳನ್ನು ಪ್ರತಿಪಾದಿಸಿರುವ ಕುರ್‌ಆನನ್ನು ಇಂದು ಮುಸ್ಲಿಮ್ ಸಮುದಾಯವು ಕಡೆಗಣಿಸುತ್ತಿದೆ. ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯನ್ನು ಜೀವನದಲ್ಲಿ ಅಳವಡಿಸಿದರೆ ಮಾತ್ರ ಓರ್ವನು ನೈಜ ಮುಸಲ್ಮಾನನಾಗತ್ತಾನೆ" ಎಂದು ಸಲೀಂ ಮಂಬಾಡ್ (ರಾಜ್ಯ ಸಲಹಾ ಸಮಿತಿ ಸದಸ್ಯರು, ಸೋಲಿಡಾರಿಟಿ, ಕೇರಳ) ಹೇಳಿದರು. ಅವರು ಇಲ್ಲಿನ ಎಸ್.ಐ.ಓ. ಮತ್ತು ಯೂತ್‌ವಿಂಗ್ ಜಂಟಿಯಾಗಿ ಆಯೋಜಿಸಿದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಇನ್ನೋರ್ವ ಮುಖ್ಯ ಅತಿಥಿ ಇಸ್ಹಾಕ್ ಪುತ್ತೂರು (ಉಪಾಧ್ಯಕ್ಷರು, ಜಮಾಅತೆ ಇಸ್ಲಾಮಿ ಹಿಂದ್. ಮಂಗಳೂರು) ಮಾತನಾಡಿ "ಪ್ರವಾದಿಯವರನ್ನು(ಸ) ನಾವು ಪ್ರೀತಿಸುವುದಾದರೆ, ಅವರು ತಂದುಕೊಟ್ಟಂತಹ ಪವಿತ್ರ ಕುರ್‌ಆನಿಗನುಸಾರ ಜೀವನ ನಡೆಸಬೇಕಾಗಿದೆ. ಅಲ್ಲಾಹನ ಸಂದೇಶವನ್ನು ಜನರ ಮುಂದಿರಿಸುವುದು ಪ್ರತಿಯೋರ್ವ ಮುಸಲ್ಮಾನನ ಹೊಣೆಗಾರಿಕೆಯಾಗಿದೆ" ಎಂದು ಅಭಿಪ್ರಾಯಪಟ್ಟರು.

ಮೌ। ಮುಹಮ್ಮದ್ ಷಾ., ಅಬ್ದುಲ್ ಕರೀಮ್, ಮೌ। ಝೂಕಿರ್ ತಲಪಾಡಿ, ಬಿ. ಹಮ್‌ಝಾ ಮೊದಲಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬಿ.ಎ. ಇಬ್ರಾಹೀಮ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಬ್ದುಸ್ಸಮದ್ ಧನ್ಯವಾದ ಅರ್ಪಿಸಿದರು. ಶಿಹಾಬುದ್ದೀನ್ ಕುರಾನ್ ಪಠಿಸಿದರು. ಇಮ್ತಿಯಾಝ್ ಪೆರ್ಲ ನಿರೂಪಿಸಿದರು.

## ಯೂತ್‌ವಿಂಗ್ ಜನಜಾಗೃತಿ ಸಭೆ



**ಮಂಗಳೂರು:** "ಇಂದು ರಾಷ್ಟ್ರದಾದ್ಯಂತ ಎಲ್ಲ ರಂಗಗಳಲ್ಲಿಯೂ ಭ್ರಷ್ಟಾಚಾರ ವ್ಯಾಪಕವಾಗಿದೆ. ಎಲ್ಲ ಪಕ್ಷಗಳೂ ಭ್ರಷ್ಟಾಚಾರದಲ್ಲಿ ಭಾಗಿಯಾಗಿವೆಯೆಂಬುದು ಇತ್ತೀಚಿನ ಬೆಳವಣಿಗೆಗಳು ಪ್ರಸ್ತುತ ಪಡಿಸುತ್ತಿವೆ. ಈ ಭ್ರಷ್ಟ ಆಡಳಿತಗಾರರ ವಿರುದ್ಧ ಜನರು ದನಿಯೆತ್ತಬೇಕಾಗಿದೆ. ಇಲ್ಲಿ ಭ್ರಷ್ಟಾಚಾರ ರಹಿತ ಸ್ವಚ್ಛ ಆಡಳಿತದ ನಿರ್ಮಾಣ ಸಾಧ್ಯವಾಗಬೇಕು. ಆಗ ಗಾಂಧೀಜಿ ಹೇಳಿದ ರಾಮರಾಜ್ಯ ಸ್ಥಾಪನೆಯಾಗುವುದು. ಈಗ ಹೇಳುತ್ತಿರುವ ರಾಮರಾಜ್ಯ ನಕಲಿ ರಾಮರಾಜ್ಯವಾಗಿದೆ" ಎಂದು ಯೂತ್‌ವಿಂಗ್ ಜಮಾಅತೆ ಇಸ್ಲಾಮಿ ಹಿಂದ್‌ನ ದ.ಕ. ಜಿಲ್ಲಾ ಸಂಚಾಲಕ ಮುಹಮ್ಮದ್ ಕುಂಞ ಹೇಳಿದರು. ಅವರು ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಬಳಿ ಯೂತ್‌ವಿಂಗ್ ಜ.ಇ. ಹಿಂದ್ ಆಯೋಜಿಸಿದ "ಭ್ರಷ್ಟಾಚಾರ ಅಳಿಸಿ ದೇಶ ಉಳಿಸಿ" ಜನಜಾಗೃತಿ ಸಭೆಯಲ್ಲಿ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಕೇಮಾರು ಮಠದ ಶ್ರೀಶ್ರೀಶ್ರೀ ಈಶ ವಿಠಲ ದಾಸ ಸ್ವಾಮಿೂಜಿಯವರು ಸಂದರ್ಭೋಚಿತವಾಗಿ ಮಾತನಾಡಿದರು. ಸನ್ಮಾರ್ಗ ಸಂಪಾದಕ ಎ.ಕೆ. ಕುಕ್ಕಿಲ, ಅಟೋರಿಕ್ಷಾ ಚಾಲಕರ ಸಂಘದ ಪ್ರಧಾನ ಕಾರ್ಯದರ್ಶಿ ಎ.ಎನ್. ಪ್ರಕಾಶ್, ಸಮಾಜ ಸೇವಕಿ ಯು. ರೋಹಿಣಿ ಮುಂತಾದವರು ಮಾತನಾಡಿದರು. ಜಮಾಅತೆ ಇಸ್ಲಾಮಿ ಕರಾವಳಿ ವಲಯದ ಸಂಚಾಲಕ ಯು. ಅಬ್ದುಸ್ಸಲಾಮ್ ಸಮಾರೋಪ ಭಾಷಣ ಮಾಡಿದರು. ತರಿಕಿಟ ಸಾಂಸ್ಕೃತಿಕ ತಂಡ ಭ್ರಷ್ಟಾಚಾರ ವಿರೋಧಿ ಗೀತೆಯನ್ನು ಹಾಡಿತು. ಶಾಹಿದ್ ಯು. ಕಾರ್ಯಕ್ರಮವನ್ನು ನಿರೂಪಿಸಿ ಧನ್ಯವಾದವಿತ್ತರು.

## ಈದ್ ಸೌಹಾರ್ದ ಕೂಟ



**ಹೂಡೆ:** "ವಿವಿಧ ಧರ್ಮ ಹಾಗೂ ಸಂಸ್ಕೃತಿಗಳ ದೇಶ ಭಾರತ. ಇಲ್ಲಿ ವಿವಿಧ ಧರ್ಮೀಯರು ವಿವಿಧ ಹಬ್ಬ ಹರಿದಿನಗಳನ್ನು ಆಚರಿಸುತ್ತಾ ಬಂದಿದ್ದಾರೆ. ಹಬ್ಬದ ಹಿಂದಿರುವ ಉದ್ದೇಶ ಹಾಗೂ ಅದರ ಸಂದೇಶ ಪರಸ್ಪರ ಅರಿಯದಿದ್ದಲ್ಲಿ ಸಂದೇಹ ಹಾಗೂ ತಪ್ಪು ಕಲ್ಪನೆಗಳು ಉಂಟಾಗುತ್ತವೆ" ಎಂದು ಜ. ಇ. ಹಿಂದ್ ಮಂಗಳೂರು ನಗರ ಶಾಖೆಯ ಉಪಾಧ್ಯಕ್ಷ ಇಸ್ಹಾಕ್ ಪುತ್ತೂರು ಹೂಡೆಯ ಆದರ್ಶ್ ಇಸ್ಲಾಮಿಕ್ ಸೆಂಟರ್‌ನಲ್ಲಿ ಸ್ಥಾನೀಯ ಜಮಾಅತ್ ಆಯೋಜಿಸಿದ ಸೌಹಾರ್ದ ಈದ್‌ಮಿಲನ್ ಕಾರ್ಯಕ್ರಮದಲ್ಲಿ ಮಾತಾಡುತ್ತಾ ಹೇಳಿದರು. ಆದಿಲ್ ಹೂಡೆ ಕುರ್‌ಆನ್ ಪಠಿಸಿದರು. ಹುಸೈನ್ ಕೋಡಿಬೆಂಗ್ರೆ ಕಾರ್ಯಕ್ರಮ ನಿರೂಪಿಸಿ ಧನ್ಯವಾದವಿತ್ತರು.

ಜ. ಇ. ಹಿಂದ್ ಸ್ಥಾನೀಯ ಅಧ್ಯಕ್ಷರಾದ ಮೌ। ಮುಹಮ್ಮದ್ ಆದಮ್ ಹಾಗೂ ಕೆಮ್ಮಣ್ಣು ಗ್ರಾಮ ಪಂಚಾಯತ್ ಅಧ್ಯಕ್ಷರಾದ ಜ್ಯೋತಿ ಲೂವಿಸ್ ಉಪಸ್ಥಿತರಿದ್ದರು.

## ಡಿ.ಇಡಿ: 86.91%



ಬ್ಯಾಡಗಿ: 2009–10ನೇ ಸಾಲಿನ ಡಿ.ಇ.ಡಿ. ದ್ವಿತೀಯ ವರ್ಷದ ಪರೀಕ್ಷೆಯಲ್ಲಿ ಇಲ್ಲಿನ ಬಿ. ಮುಹಮ್ಮದ್ ಸಾದಿಕ್ ಶೇ. 86.91 ಅಂಕಗಳನ್ನು ಪಡೆಯುವ ಮೂಲಕ ವಿದ್ಯಾಲಯದಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ. ಇವರು ಇಲ್ಲಿನ ಶಿಡೇನೂರ ನೆಹರೂ ಶಿಕ್ಷಕರ ತರಬೇತಿ ವಿದ್ಯಾಲಯದ ವಿದ್ಯಾರ್ಥಿಯಾಗಿದ್ದು ದಾವಣಗೆರೆ ಬಿ. ಇಬ್ರಾಹೀಮ್ ಸಾಹೇಬ್‌ರ ಪುತ್ರ.

## ಐಟಾ ತರಬೇತಿ ಕಾರ್ಯಕ್ರಮ



**ಮಾನ್ವಿ:** ಇತ್ತೀಚೆಗೆ ಇಲ್ಲಿನ ಮಸ್ಜಿದ್–ಕುಬಾ ಚಿರಾಗಲಿ ಕಾಲೋನಿಯಲ್ಲಿ ಒಂದು ದಿನದ ಆಲ್ ಇಂಡಿಯಾ ಐಡಿಯಲ್ ಟೀಚರ್ಸ್ ಅಸೋಸಿಯೇಶನ್ (AIITA) ವತಿಯಿಂದ ತರಬೇತಿ ಕಾರ್ಯಕ್ರಮ ನಡೆಯಿತು. ಖಲೀಲ್ ಅಹ್ಮದ್ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಯಚೂರು ಜಿಲ್ಲಾ ಸಂಚಾಲಕ ಸಬ್ಜಾಲಿ ಐಟಾವನ್ನು ಪರಿಚಯಿಸಿದರು.'ಆದರ್ಶ ಶಿಕ್ಷಕನ ಲಕ್ಷಣಗಳು' ಎಂಬ ವಿಷಯದಲ್ಲಿ ಶಿಕ್ಷಕ ಶಾಮೀದ ಮದ್ದಾರ ಉಪನ್ಯಾಸ ನೀಡಿದರು. ಶಿಕ್ಷಕರಾದ ಅಬ್ದುಲ್ ಅಹದ್, ಹುಸೇನ್ ಭಾಷಾ ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕ ಅಜೀಜ್ ಧನ್ಯವಾದವಿತ್ತರು.

**ಸನ್ಮಾರ್ಗ ಚಂದಾ ದರ**

| | | |
|---|---|---|
| ವಾರ್ಷಿಕ | ರೂ. | 390.00 |
| ಅರ್ಧವಾರ್ಷಿಕ | ರೂ. | 195.00 |
| ಗಲ್ಫ್ ರಾಷ್ಟ್ರಗಳಲ್ಲಿ | | |
| ವಾರ್ಷಿಕ | ರೂ. | 1,200.00 |
| ಅರ್ಧವಾರ್ಷಿಕ | ರೂ. | 650.00 |


EXIDE
INDUSTRIES LIMITED
GEM BATTERY CENTRE 2, Sunflowr Apartments,
Opp. St. Andrew's Church, Vasco-da-gama, Goa
Tel: 0832-2511270 / 2519066 Email: gembatteriesgoa@indiatimes.com




To.

SANMARGA KANNADA WEEKLY
Post Box No. 16, Hidayath Centre, Mangalore - 575 001 ☎: 2422786
2010 ಡಿ. 12 – 18 / 1432 ಮುಹರ್ರಮ್ 05 – 11




'Registered' R.No. KA/SK/MNG/129/2009-11 Licenced to post without pre payment L No. SK/MNG/WPP-10/09-11 Posted at R.M.S. Mangalore on 07-12-2010 (Tuesday) & 09-12-2010 (Thursday)

# ನೆಲದಲ್ಲೇ ಮಲಗುತ್ತಿದ್ದ ನನ್ನ ಹಾಮಿದ್ ಭಾಯಿ... (ಮುಖಪುಟದಿಂದ)

"ಮಹ್ಮೂದ್! ಮಹ್ಮೂದ್!" ಶಬ್ದ ಕೇಳಿ ಹತ್ತಿರದ ಮಂಚದಲ್ಲಿ ಪವಡಿಸಿದ್ದ ಕಿರಿಯ ಸಹೋದರ ಕಣ್ಣು ತಿಕ್ಕುತ್ತಾ ಎದ್ದು ನೋಡುತ್ತಾರೆ- ಹಾಮಿದ್ ಹುಸೈನ್ ಏದುಸಿರು ಬಿಡುತ್ತಿದ್ದಾರೆ! ರಾತ್ರಿಯ ಎರಡೂವರೆ ಗಂಟೆ! ದಾದಿಯರು ಧಾವಿಸಿ ಬಂದರು. ಡ್ಯೂಟಿ ಡಾಕ್ಟರ್ಸ್ ಓಡಿ ಬಂದರು. ಇತ್ತ ಹಾಮಿದ್ ಹುಸೈನ್ ಅಲ್ಲಾಹು ಅಕ್ಬರ್, ಅಲ್ಲಾಹು ಅಕ್ಬರ್ ಎನ್ನುತ್ತಾ ನರಳುತ್ತಿದ್ದರು. ಎರಡನೆಯ ಹೃದಯ ಸ್ತಂಭನ! ಇದೂ ಘೋರವಾಗಿತ್ತು. ಕೂಡಲೇ ಡಾಕ್ಟರ್ ತಾಹಾ ಮತೀನ್‌ರನ್ನು ಕರೆಸಲಾಯಿತು. ಆದರೆ ಅವರು ಮನೆಯಿಂದ ಬಂದು ತಲುಪುವುದಕ್ಕೆ ಮುನ್ನವೇ ಹಾಮಿದ್ ಹುಸೈನ್‌ರ ಪ್ರಾಣ ಪಕ್ಷಿ ಹಾರಿಹೋಗಿತ್ತು. ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್... ತನ್ನ ಜೀವನದ ಹೆಚ್ಚಿನ ಭಾಗವನ್ನು ಯಾತ್ರೆಯಲ್ಲೇ ಕಳೆದಂತಹ ಓರ್ವ ಸದ್ಭಕ್ತರ ಕೊನೆಯ ಕ್ಷಣಗಳ ಸಂಕ್ಷಿಪ್ತ ವಿವರವಿದು.

ಗೋಧಿ ವರ್ಣ, ಗಿಡ್ಡ ದೇಹ, ದಪ್ಪ ಕರಿಗೂದಲು, ದೃಢಕಾಯದ, ಚಟುವಟಿಕೆಯ ಹಾಮಿದ್ ಹುಸೈನ್‌ರವರು 57ರ ಹರೆಯದಲ್ಲೂ 35ರ ಆಸುಪಾಸಿನವರಂತೆ ಕಾಣುತ್ತಿದ್ದರು. ಧರ್ಮನಿಷ್ಠೆ, ವಿನಮ್ರತೆ, ಸರಳತೆ, ನಿಷ್ಕಳಂಕತೆ, ಬಡತನ, ಮಿತಭಾಷಿ, ಮಿತಾಹಾರಿ, ಗಾಂಭೀರ್ಯ, ವಿನಯ, ಸಹನಶೀಲತೆ, ಪರಹಿತಚಿಂತನೆ, ಸಹಾನುಭೂತಿ, ಸೇವಾ ಮನೋಭಾವ, ಅನುಸರಣೆ, ಆಜ್ಞಾಪಾಲನೆ, ಪ್ರಾಮಾಣಿಕತೆ, ಅಮಾನತ್‌ನ ರಕ್ಷಕರು, ರಹಸ್ಯ ಪಾಲಿಸುವವರು, ನಾಚಿಕೆ ಸ್ವಭಾವದ ಸ್ವಾಭಿಮಾನಿಯಾಗಿದ್ದರು. ಒಟ್ಟಿನಲ್ಲಿ ಒಳಿತುಗಳ ಭಂಡಾರವಾಗಿದ್ದರು ಹಾಮಿದ್ ಭಾಯಿ.

1978ರಲ್ಲಿ ಸಿಂಧನೂರಿನ ಸ್ಥಳೀಯ ಜಮಾಅತೆ ಇಸ್ಲಾಮಿ ಅಧ್ಯಕ್ಷರಾಗಿದ್ದ ಸಯ್ಯದ್ ಹುಸೈನ್ ಸಾಹೇಬರ ಸಂತಾಪ ಸಭೆಯಲ್ಲಿ ದಿವಂಗತರ 25ರ ಹರೆಯದ ತೃತೀಯ ಪುತ್ರ ಸಯ್ಯದ್ ಹಾಮಿದ್ ಹುಸೈನ್‌ರವರು ಕಣ್ಣೀರನ್ನು ತಹಬಂದಿಗೆ ತರುತ್ತಾ ಗದ್ಗದಿತ ಧ್ವನಿಯಲ್ಲಿ, "ನನ್ನ ತಂದೆಯವರ ಕಾರ್ಯಭಾರವನ್ನು ಇನ್‌ಶಾ ಅಲ್ಲಾಹ್ ಜಾರಿಯಲ್ಲಿರಿಸುವೆನು" ಎಂದು ಹೇಳಿದ್ದರು. ಬಳಿಕ 2010 ಡಿಸೆಂಬರ್ 3ರ ವರೆಗೆ ಆ ಮಾತನ್ನು ಪಾಲಿಸುತ್ತಲೂ ಬಂದಿದ್ದರು.

ಇಸ್ಲಾಮಿ ಆಂದೋಲನವನ್ನು ವಾರೀಸಿನಲ್ಲಿ ಪಡೆದ ಅವರು ತಮ್ಮ ಸಂತಾನಕ್ಕೂ ಅದನ್ನೇ ವಾರೀಸಿನಲ್ಲಿ ಬಿಟ್ಟು ಹೋದರು. ತುರ್ತುಸ್ಥಿತಿಗಿಂತ ಸ್ವಲ್ಪ ಮುಂಚೆ ಜಮಾಅತ್‌ನ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಿದ್ದರು. ಆದರೆ ತುರ್ತು ಸ್ಥಿತಿ ತೆರವಾದ ಬಳಿಕವಷ್ಟೇ ಅವರಿಗೆ ಸದಸ್ಯತ್ವ ಸಿಕ್ಕಿತ್ತು. 1982ರಲ್ಲಿ ಅಖಿಲ ಭಾರತ ಮಟ್ಟದಲ್ಲಿ ವಿದ್ಯಾರ್ಥಿ ಸಂಘಟನೆ ಎಸ್.ಐ.ಓ. ಸ್ಥಾಪನೆಯಾದಾಗ ಕರ್ನಾಟಕದಲ್ಲಿ ಅದರ ಹೊಣೆ ವಹಿಸಲು ರಾಯಚೂರಿನ ಸಣ್ಣ ಗ್ರಾಮವಾಗಿದ್ದ ಸಿಂಧನೂರಿನಿಂದ ಇಬ್ಬರು ಯುವಕರು ಮುಂದೆ ಬಂದರು. ಮುಹಮ್ಮದ್ ಇಕ್ಬಾಲ್ ಮುಲ್ಲಾ ಅದರ ರಾಜ್ಯ ಘಟಕಾಧ್ಯಕ್ಷರಾದರು, ಸಯ್ಯದ್ ಹಾಮಿದ್ ಹುಸೈನ್ ಕಾರ್ಯದರ್ಶಿಯಾದರು. ಅವಧಿ ಮುಗಿದಾಗ, ಮುಲ್ಲಾ ಲಿಯಾಕತ್ ಅಹ್ಮದ್ ಅಧ್ಯಕ್ಷರಾದರು. ಆದರೆ ಕಾರ್ಯದರ್ಶಿ ಹೊಣೆ ಪುನಃ ಹಾಮಿದ್ ಹುಸೈನ್‌ರ ಹೆಗಲ ಮೇಲೆಯೇ ಇತ್ತು. ವಿದ್ಯಾರ್ಥಿ ಸಂಘಟನೆಯಿಂದ ನಿವೃತ್ತರಾದ ಬಳಿಕ ಜಮಾಅತೆ ಇಸ್ಲಾಮಿಯಲ್ಲಿ ಹೊಣೆಗಾರಿಕೆ ವಹಿಸಿದರು. ಜಿಲ್ಲಾ ಸಂಚಾಲಕ, ಸಹಾಯ ವಿಭಾಗ ಸಂಚಾಲಕ, ಸಂಚಾಲಕ, ರಾಜ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಉಪಾಧ್ಯಕ್ಷ ಕೊನೆಗೆ ಪ್ರಸಕ್ತ ಅವಧಿಯಲ್ಲಿ ಪುನಃ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದರು. ಯಾವ ಹೊಣೆ ಹುಡುಕಿ ಬಂದರೂ ತನು-ಮನದಿಂದ ಅದನ್ನು ನಿಭಾಯಿಸಿದರು. ಆಗದು ಎನ್ನುವ ಅಭ್ಯಾಸವಿರಲಿಲ್ಲ. ನಿರಾಕರಿಸುವ ಗುಣವಿರಲಿಲ್ಲ. ಯಾವ ಹೊಣೆಗಾರ ಯಾವ ಕೆಲಸ ನೀಡಿದರೋ ಅದನ್ನು ಚಾಚೂ ತಪ್ಪದೆ ಪಾಲಿಸಿದರು. ಹೊಣೆಗಾರಿಕೆಯ ಬಗ್ಗೆ ಬೀಗುತ್ತಿರಲಿಲ್ಲ.

ಅವರೋರ್ವ ಚಟುವಟಿಕೆಯ ಜೀವ ಆಗಿದ್ದರು. ಪರಿಶ್ರಮ ಅವರ ಅಭ್ಯಾಸವಾಗಿತ್ತು. ವಿಶ್ರಾಂತಿ, ಆರಾಮ, ಸವಲತ್ತು ಒಂದರ್ಥದಲ್ಲಿ ಅವರಿಗೆ ಬೇಡವಾಗಿತ್ತು. ಯಾತ್ರೆಯಲ್ಲಿ ಆರಾಮದಾಯಕ ವಾಹನ ಇಷ್ಟವಿರಲಿಲ್ಲ. ನಿದ್ರಿಸಲೂ ಮೆತ್ತನೆ ಹಾಸಿಗೆ ಇಷ್ಟ ಪಡದವರು. ಒಟ್ಟಿನಲ್ಲಿ ದರವೇಶಿಯಂತಹ ಗುಣ-ಸ್ವಭಾವದವರಾಗಿದ್ದರು. ಹೆಚ್ಚಾಗಿ ನೆಲದ ಮೇಲೆಯೇ ಮಲಗುತ್ತಿದ್ದರು. ಒಣ ರೊಟ್ಟಿ ಇಷ್ಟಪಡುತ್ತಿದ್ದರು. ಅರ್ಥಶಾಸ್ತ್ರದಲ್ಲಿ ಎಂ.ಎ. ಮಾಡಿರುವರಾದರೂ ತನ್ನ ಸ್ವಂತ ಅರ್ಥವ್ಯವಸ್ಥೆಯನ್ನು ತಿಳಿಯದವರಾಗಿದ್ದರು. ಭಾಷಣ-ಬರವಣಿಗೆಯಲ್ಲಿ ಆಸಕ್ತಿ ಇದ್ದವರಲ್ಲ. ಆದರೆ ಅಗತ್ಯ ಬಿದ್ದಾಗ ಅದರಿಂದ ಹಿಂಜರಿಯಲಿಲ್ಲ. ಸಂಘಟನಾ ಕಾರ್ಯಗಳಲ್ಲಿ ಪಳಗಿದವರಾಗಿದ್ದ ಅವರು ಸಂಕಲ್ಪ ಶುದ್ಧರಾಗಿದ್ದರು. ಅವರೋರ್ವ ಉತ್ತಮ ನೆರಳಿನಾಶ್ರಯದ ಮರದಂತಿದ್ದರು. ಇತರರ ನೋವನ್ನು ಹಂಚಿ ಪಡೆಯುತ್ತಿದ್ದರು! ಆದರೆ ಅವರದ್ದು ಮುಕ್ತ ವ್ಯಕ್ತಿತ್ವ ಆಗಿರಲಿಲ್ಲ. ತೆರೆದ ಪುಸ್ತಕವೇನೂ ಆಗಿರಲಿಲ್ಲ ಅವರ ಜೀವನ. ಜನರೊಡನೆ ಹೆಚ್ಚು ಬೆರೆಯುತ್ತಿರಲಿಲ್ಲ. ಮುಖಸ್ತುತಿ ಇಷ್ಟವಿರಲಿಲ್ಲ. ಮಿತಭಾಷಿಯಾಗಿದ್ದರು. ಯಾರ ಮುಖಸ್ತುತಿಯನ್ನೂ ಮಾಡಿದವರಲ್ಲ. ಮಿತಾಹಾರಿಯಾಗಿದ್ದರು, ಆಹಾರದಲ್ಲೂ ಔಷಧದಲ್ಲೂ. ಅಗತ್ಯವನ್ನು ಹೇಳಲು ಹಿಂಜರಿಯುತ್ತಿದ್ದರು. ಸಲಹೆ ಕೂಡ ಒತ್ತಾಯಕ್ಕೆ ಕಟ್ಟು ಬಿದ್ದು ನೀಡುತ್ತಿದ್ದರು. ಸಕ್ಕರೆ ಕಾಯಿಲೆಯಿತ್ತು. ದೇವನಿಗೆ ಕೃತಜ್ಞರಾಗಿದ್ದರು. ಆದರೆ ಅವರ ಪಥ್ಯ ಅವರಿಗೆ ಪ್ರಯೋಜಕ್ಕೆ ಬರಲಿಲ್ಲ. ಕಷ್ಟ ಸಹಿಸುತ್ತಿದ್ದರು. ಸೌಜನ್ಯದ ಮೂರ್ತಿಯಾಗಿದ್ದರು. ಉಡುಗೊರೆ(ಪ್ರಶಂಸೆ)ಯನ್ನೂ ಟೀಕೆ(ವಿಮರ್ಶೆ)ಯನ್ನೂ ಸ್ವೀಕರಿಸುತ್ತಿದ್ದರು. ಪ್ರಶಂಸೆ ಮರಳಿಸುತ್ತಿದ್ದರು. ವಿಮರ್ಶೆ ತನ್ನ ಬಳಿಯಿರಿಸುತ್ತಿದ್ದರು.

ಕುರ್‌ಆನ್ ಪಠಣ ಅವರ ನಿತ್ಯ ಕರ್ಮವಾಗಿತ್ತು. ಉಪವಾಸ ವ್ರತಾಚರಣೆಯು ಅವರ ಗುಣದಲ್ಲಿತ್ತು. ನಫಿಲ್ ಉಪವಾಸಗಳನ್ನು ಹೆಚ್ಚೆಚ್ಚು ಪಾಲಿಸುತ್ತಿದ್ದರು. ಅಲ್ಲಾಹನಲ್ಲಿ ಹೆಚ್ಚು ಅನುರಕ್ತರಾಗಿದ್ದರು. ಜೀವನದಲ್ಲಿ ಎಂದೂ ಆಸ್ಪತ್ರೆಯಲ್ಲಿ ಮಲಗಿದವರಲ್ಲ. ಆದರೆ ಕೊನೆಗಾಲದಲ್ಲಿ ಅಲ್ಲಾಹನು ಅವರನ್ನು ಆಸ್ಪತ್ರೆಗೆ ಸೇರಿಸಿದನು. ಮಂಚದಲ್ಲಿ ಮಲಗುವುದು ಅವರಿಗೆ ಇಷ್ಟವಿರಲಿಲ್ಲ. ಆದರೆ ಅಲ್ಲಾಹನು ಎಂಟು ದಿನ ಆಸ್ಪತ್ರೆಯ ಮಂಚದಲ್ಲಿ ಮಲಗಿಸಿದನು. ಇತರರಿಗೆ ಸೇವೆ ಸಲ್ಲಿಸುವುದನ್ನು ಇಷ್ಟಪಟ್ಟಿದ್ದರು; ಇತರರ ಸೇವೆ ಪಡೆದವರಲ್ಲ. ಆದರೆ ಅಲ್ಲಾಹನು ಕೊನೆಗಾಲದಲ್ಲಿ ವೈದ್ಯರ, ದಾದಿಯರ ಸೇವೆ ಪಡೆಯುವಂತೆ ಮಾಡಿದನು. ಎಂದೂ ಏರ್‌ಕಂಡೀಶನ್ ವಾಹನದಲ್ಲಿ ಹೋಗಲು ಇಷ್ಟಪಟ್ಟವರಲ್ಲ, ಆದರೆ ಅಲ್ಲಾಹನು ಅಂತಿಮ ಯಾತ್ರೆಯನ್ನು ಆ್ಯಂಬ್ಯುಲೆನ್ಸ್‌ನ ಐಸ್‌ಬಾಕ್ಸ್‌ನಲ್ಲಿ ಮಾಡಿಸಿದ. ಏಕಾಂತಪ್ರಿಯರಾಗಿದ್ದರು, ಜನನಿಬಿಡತೆಯಿಂದ ದೂರವಿದ್ದವರು. ಆದರೆ ಅಲ್ಲಾಹನು ಸಾವಿರಾರು ಜನರ ಹೆಗಲಲ್ಲಿ ಸವಾರಿ ಮಾಡಿಸಿ ತನ್ನ ಬಳಿ ಕರೆಸಿದ ನಮ್ಮ ಹಾಮಿದ್ ಭಾಯಿಯವರನ್ನು! ಅಲ್ಲಾಹ್ ಅವರಿಂದ ಸಂಪ್ರೀತನಾಗಲಿ.

## ಎಸ್‌ಐಓ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಯಾಗಿ ಪಿ.ಎಂ. ಸಾಲಿಹ್

ದೆಹಲಿ: 2010-11ರ ಸಾಲಿನ ಎಸ್.ಐ.ಓ. ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಪಿ.ಎಂ. ಸಾಲಿಹ್ (ಕೇರಳ) ಆಯ್ಕೆಯಾಗಿದ್ದಾರೆ. ಹಾಲಿ ಕೇರಳ ರಾಜ್ಯಾಧ್ಯಕ್ಷರಾಗಿದ್ದ ಇವರು ವಾಣಿಜ್ಯಶಾಸ್ತ್ರದಲ್ಲಿ ಸ್ನಾತ್ತಕೋತ್ತರ ಪದವೀಧರರಾಗಿದ್ದು ಇಸ್ಲಾಮಿಕ್ ಫೈನಾನ್ಸ್‌ನಲ್ಲಿ ಪದವಿಯನ್ನು ಪಡೆದಿರುತ್ತಾರೆ. C.A. ಹಾಗೂ ಎಂ.ಬಿ.ಎ. ಅಂತಿಮ ವರ್ಷದ ವಿದ್ಯಾರ್ಥಿಯಾಗಿರುತ್ತಾರೆ. ಕಾರ್ಯದರ್ಶಿಗಳಾಗಿ ಶೌಕತ್ ಅಲಿ ಕರ್ನಾಟಕ (ಕ್ಯಾಂಪಸ್), ಅರ್ಷದ್ ಹುಸೈನ್ ಗುಜರಾತ್ (ಆರ್ಗನೈಝೇಶನ್) ಶುಪಾಬ್ ಶೈಕ್ ಗೋವಾ (ಸಾರ್ವಜನಿಕ ಸಂಪರ್ಕ), ಶಾರಿಕ್ ಅನ್ಸಾರ್ ಜಾರ್ಖಂಡ್ (ವಿಸ್ತರಣೆ) ಆಯ್ಕೆಯಾಗಿದ್ದಾರೆ.

ಕೇಂದ್ರ ಸಲಹಾ ಸಮಿತಿಯ ಸದಸ್ಯರಾಗಿ ಶಿಬ್ಲಿ ಅರ್‌ಸ್ಲಾನ್ (ಬಿಹಾರ), ಸಿಬ್‌ಗತುಲ್ಲಾ ಹುಸೈನಿ (ಆಂಧ್ರ), ಖಾನ್ ಯಾಸಿನ್ (ದೆಹಲಿ), ಮುಹಮ್ಮದ್ ಬಿಲಾಲ್ (ಕರ್ನಾಟಕ), ಉಮೈರ್ ಅನಸ್ (ದೆಹಲಿ), ಷಾನವಾಝ್, ಅಲಿ ರೈಹಾನ್ (ಜಾಮಿಯಾ ಮಿಲ್ಲಿಯ), ಶೌಕತ್ ಅಲಿ (ಕರ್ನಾಟಕ), ಅನ್‌ಸಾರ್ ಅಬೂಬಕರ್ (ಅಲಿಗಢ), ಮುಸೈಬ್ ಇಕ್ಬಾಲ್ (ಕರ್ನಾಟಕ), ಅಝ್ಝುರ್ ವಹೀದ್ (ತಮಿಳುನಾಡು), ಆತಿಫ್ ಖಲೀಲ್ (ಆಂಧ್ರ), ಆರಿಫ್ ಅಲಿ (ರಾಜಸ್ಥಾನ), ಫಝ್ಲುರ್ರಹ್ಮಾನ್ ಕುರೈಶಿ (ಆಂಧ್ರ), ಮುಜಾಹಿದುಲ್ ಇಸ್ಲಾಮ್ (ಕರ್ನಾಟಕ), ಪಿ.ಕೆ. ಸಾದಿಕ್ (ಕೇರಳ) ಆಯ್ಕೆಗೊಂಡರು.

## ಅವರು ನಿಧನರಾಗಿದ್ದಾರೆನ್ನಲು ಮನಸ್ಸು ಒಪ್ಪುತ್ತಿಲ್ಲ

**ಹಾ**ಮಿದ್ ಹುಸೇನ್ ಸಾಹೇಬರ ನಿಧನದ ವಾರ್ತೆಯು ನನ್ನನ್ನು ಅತೀವ ದುಃಖಕ್ಕೀಡು ಮಾಡಿತು. ಅವರ ಹೆಸರಿನ ಬಳಿ ಮರ್ಹೂಮ್ ಎಂಬ ಪದ ಬಳಕೆಯು ನನ್ನಿಂದ ಸಹಿಸಲಾಗುತ್ತಿಲ್ಲ. ನನ್ನ ದೃಷ್ಟಿಯಲ್ಲಿ ಅವರು ಆಂದೋಲನದ ಆತ್ಮವಾಗಿದ್ದರು. ಅವರ ವಿನಯಶೀಲ ವ್ಯಕ್ತಿತ್ವವು ನನ್ನನ್ನು ಬಹಳವಾಗಿ ಆಕರ್ಷಿಸಿದೆ. ತನಗಿಂತಲೂ ಪ್ರಾಯದಲ್ಲಿ ಎಷ್ಟೋ ಕಿರಿಯರಾದ ರಾಜ್ಯಾಧ್ಯಕ್ಷರೊಂದಿಗೆ ವೇದಿಕೆಯಲ್ಲಿರುವಾಗ ಅವರ ವಿನಮ್ರತೆಯು ಹೆಚ್ಚು ಹೆಚ್ಚು ಪ್ರಕಟವಾಗುತ್ತಿತ್ತು. ಆ ದೃಶ್ಯವನ್ನು ಮರೆಯಲು ಸಾಧ್ಯವೇ? ಜ.ಇ. ಹಿಂದ್ ಅವರನ್ನು ಯಾಕೆ ರಾಜ್ಯಾಧ್ಯಕ್ಷರನ್ನಾಗಿ ಮಾಡಲಿಲ್ಲ ಎಂಬುದಾಗಿ ಹಲವು ಸಲ ಯೋಚಿಸಿ ನಿರಾಶಳಾಗಿದ್ದೆ. ಮಹಿಳಾ ಹೊಣೆಗಾರರ ಎಲ್ಲ ಕೆಲಸಗಳನ್ನೂ ಬಹಳ ಮುತುವರ್ಜಿಯಿಂದ ಅವರು ನಿರ್ವಹಿಸುತ್ತಿದ್ದರು. ಇತ್ತೀಚೆಗೆ ಬೆಂಗಳೂರಿನಲ್ಲಿ ಸಂಚಾಲಕಿಯರ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯ ಕೊನೆಯಲ್ಲಿ ಅವರ ಕೆಲವು ಉಪದೇಶಗಳನ್ನು ಕೇಳುವ ಅವಕಾಶ ಒದಗಿ ಬಂದಿತ್ತು. ಮುಖ ಪರದೆ ಧರಿಸಿರುವ ನಮ್ಮನ್ನು ಕಣ್ಣೆತ್ತಿಯೂ ನೋಡದೆ ಮಾತನ್ನು ಆರಂಭಿಸಿದರು. ಮಹಿಳೆಯರ ಕೆಲಸಗಳನ್ನು ಶ್ಲಾಘಿಸಿದರು. ಇಬ್ರಾಹೀಮ್ ಸಈದ್ ಸಾಹೇಬರ ನಿಧನ ಕನ್ನಡ ಲೋಕಕ್ಕೆ ದೊಡ್ಡ ಹೊಡೆತ ಎಂದು ಭಾವಿಸಿದ್ದೆ. ಆದರೆ ಅಲ್ಲಾಹನ ಅನುಗ್ರಹದಿಂದ ಹಿಂದೆಂದಿಗಿಂತಲೂ ಹೆಚ್ಚು ಕನ್ನಡದವರು ಆಂದೋಲನದ ಕೆಲಸದಲ್ಲಿ ಸಕ್ರಿಯರಾಗಿದ್ದಾರೆ ಎಂದರು. ಅವರ ಕಣ್ಣೀರು ಇಬ್ರಾಹೀಮ್ ಸಈದ್ ಸಾಹೇಬರ ನಿಧನದ ಆಘಾತದಿಂದ ಅವರಿನ್ನೂ ಹೊರಬಂದಿಲ್ಲ ಎಂಬುದನ್ನು ಸೂಚಿಸುತ್ತಿತ್ತು. ಹಾಮಿದ್ ಸಾಹೇಬರ ನಿಧನದಿಂದ ನಮಗೆಷ್ಟು ಆಘಾತವಾಗುತ್ತಿದೆ ಎಂಬುದು ಅವರಿಗೆ ತಿಳಿದಿರುತ್ತಿದ್ದರೆ? ಸಭೆಯ ಮುಕ್ತಾಯದಲ್ಲಿ ರಾಜ್ಯ ಸಂಚಾಲಕಿಯವರು ಎಲ್ಲಾ ಮಹಿಳೆಯರಿಗೆ ಕೃತಜ್ಞತೆ ಸಲ್ಲಿಸಿದರು. ಆ ಕೂಡಲೇ ಹಾಮಿದ್ ಸಾಹೇಬರು ಹೇಳಿದಂತಹ ಮಾತು ನಮಗೆಲ್ಲರಿಗೂ ಪಾಠದಾಯಕವಾಗಿತ್ತು. "ನೀವು ಯಾರಿಗೂ ಕೃತಜ್ಞತೆ ಸಲ್ಲಿಸಬೇಕಾಗಿಲ್ಲ. ಧರ್ಮದ ಕೆಲಸ ಎಲ್ಲರ ಕಡ್ಡಾಯ ಕರ್ತವ್ಯವಾಗಿದೆ." ಇಲ್ಲಿ ಅವರ ತರಬೇತಿಯ ರೀತಿಯು ಯುಕ್ತಿಪೂರ್ಣವಾಗಿತ್ತು. ಮೊದಲನೆಯದಾಗಿ ನಮ್ಮ ಪ್ರತಿಯೊಂದು ಕೆಲಸವು ಅಲ್ಲಾಹನಿಗಾಗಿ ಆಗಿರಬೇಕು. ಕೃತಜ್ಞತೆಗೆ ಅರ್ಹನು ಅಲ್ಲಾಹನಾಗಿದ್ದಾನೆ. ಎರಡನೆಯದಾಗಿ ನಮ್ಮಲ್ಲಿ ಪೈಶಾಚಿಕ ಪ್ರೇರಣೆಯಿಂದ ಅಹಂಭಾವ ಉಂಟಾಗದಿರಲಿ ಎಂಬುದಾಗಿತ್ತು. ನಮ್ಮದು ಪ್ರಯತ್ನ ಮಾತ್ರ. ಪೂರ್ಣಗೊಳಿಸುವವನು ಅಲ್ಲಾಹನಾಗಿದ್ದಾನೆ ಎಂದು ಹೇಳಿ ಇದು ನನ್ನ ವೈಯಕ್ತಿಕ ಅಭಿಪ್ರಾಯವೆಂದೂ ಹೇಳಿದ್ದರು. ನನ್ನ ದೃಷ್ಟಿಯಲ್ಲಿ ಇಬ್ರಾಹೀಮ್ ಸಈದ್ ಸಾಹೇಬರಂತಹ

**ಶಮೀರಾ ಜಹಾನ್, ಜಿಲ್ಲಾ ಸಂಚಾಲಕಿ, ದ.ಕ.**

ಸಕ್ರಿಯ ಪ್ರತಿಭೆಗಳು ಬೆಳೆದು ಬರಬೇಕಾದರೆ ಹಾಮಿದ್ ಸಾಹೇಬರಂತಹ ತೆರೆಮರೆಯ ಆತ್ಮಗಳ ಅಗತ್ಯವಿದೆ. ಈ ಲೋಕದಲ್ಲಿ ಶರೀರ ಮತ್ತು ಆತ್ಮಗಳ ಸಂಯೋಜನೆಯಿಂದ ಮನುಷ್ಯ ಸಕ್ರಿಯನಾಗುವಂತೆ ಇಸ್ಲಾಮಿ ಆಂದೋಲನ ಸಕ್ರಿಯವಾಗಿ ಮುನ್ನಡೆಯಬೇಕಾದರೆ ಹಾಮಿದ್ ಸಾಹೇಬ್, ಇಬ್ರಾಹೀಮ್ ಸಈದ್ ಸಾಹೇಬರಂತಹವರು ಬೆಳೆದು ಬರಬೇಕಾಗಿದೆ. ಅಂತಿಮ ದರ್ಶನಕ್ಕಾಗಿ ಮಂಗಳೂರಿನಿಂದ ಸಿಂಧನೂರ್‌ಗೆ ಶುಕ್ರವಾರ ಬೆಳಗ್ಗೆ ಹೊರಟು ಹೋದ ನಮ್ಮ ಸದಸ್ಯರಿಗೆ ಹಾಮಿದ್ ಸಾಹೇಬರ ವಿನಯಶೀಲ ಕ್ರಿಯಾಶೀಲ ವ್ಯಕ್ತಿತ್ವವನ್ನೇ ನೀಡು ಎಂದು ಅಲ್ಲಾಹನಲ್ಲಿ ಪ್ರಾರ್ಥಿಸಿದ್ದೆ. ಹಾಮಿದ್ ಸಾಹೇಬರು ಹಗಲೂ ರಾತ್ರಿ ಯಾವುದನ್ನು ದೇವನಲ್ಲಿ ಬೇಡುತ್ತಿದ್ದರೋ ಅಲ್ಲಾಹನು ಅದನ್ನೇ ಅವರಿಗೆ ನೀಡಲಿ. ಅವರನ್ನು ಆತನ ಸಜ್ಜನ ದಾಸರ ಸಾಲಿನಲ್ಲಿ ಸೇರಿಸಲಿ. ಅವರ ಕುಟುಂಬಕ್ಕೂ ಸಹನೆಯನ್ನು ದಯಪಾಲಿಸಲಿ. ಅವರು ನಮಗೆ ನೀಡಿದ ಸಹನೆಯ ಪಾಠ ಅವರ ಅಗಲಿಕೆಯೊಂದಿಗೆ ಮುಗಿದು ಹೋಯಿತೋ ಎಂದು ಸಂಶಯವಾಗುತ್ತಿದೆ. ಇದೀಗ ನನ್ನಲ್ಲಿ ತಾಳ್ಮೆಯ ಗುಣ ಇಲ್ಲದ ಅನುಭವವಾಗುತ್ತಿದೆ.

**Volume: 33, Issue: 39,** Printed & Published by **M. Sadullah** on behalf of Sanmarga Publication Trust, Printed at Comprint, Hidayath Centre, Beebi Alabi Road, Mangalore-575001
And Published at Hidayath Centre, Beebi Alabi Road, Mangalore-575001. Editor: **Abdul Kader Kukkila,** Chief Editor: **P. NOOR MUHAMMED**
Ph: 2422786. Fax: 91-0824-2426846. E-mail: **sanmargamatter@gmail.com** Website: **www.sanmarga.com** (Regd. with RNI No. 29903/78)